ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಬೆಂಗಳೂರು ನಗರ ಜಿಲ್ಲಾ ಪಂಚಾಯತ್

ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ(DIET),

ಬೆಂಗಳೂರು ನಗರ ಜಿಲ್ಲೆ.

# ಪ್ರಥಮ ಭಾಷೆ ಕನ್ನಡ

# ‘ಸಂಕಲ್ಪ’

ಉನ್ನತ ಫಲಿತಾಂಶದೆಡೆಗೆ...

2024-25

# ಸಲಹೆ ಮತ್ತು ಮಾರ್ಗದರ್ಶನ


**ಶ್ರೀ ಶಿವಪ್ಪ**

ಪ್ರಾಂಶುಪಾಲರು ಹಾಗೂ ಪದನಿಮಿತ್ತ
ಉಪನಿರ್ದೇಶಕರು (ಅಭಿವೃದ್ಧಿ)
ಬೆಂಗಳೂರು ನಗರ ಜಿಲ್ಲೆ.

**ಶ್ರೀಮತಿ ಶ್ರೀದೇವಿ ಡಿ. ಎ**

ಹಿರಿಯ ಉಪನ್ಯಾಸಕರು
ಡಯಟ್ ಬೆಂಗಳೂರು ನಗರ ಜಿಲ್ಲೆ.

**ಶ್ರೀಮತಿ ಉಮಾ**

ಉಪನ್ಯಾಸಕರು
ಡಯಟ್ ಬೆಂಗಳೂರು ನಗರ ಜಿಲ್ಲೆ.


# ಸಂಪನ್ಮೂಲ ರಚನಾ ತಂಡ

| ಕ್ರ ಸಂ | ಸಂಪನ್ಮೂಲ ಶಿಕ್ಷಕರ ಹೆಸರು | ಶಾಲಾ ವಿಳಾಸ |
|---|---|---|
| 01 | ಶ್ರೀಮತಿ ಮಮತಾ ಭಾಗ್ವತ್ | ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು ದಕ್ಷಿಣ ವಲಯ–1 |
| 02 | ಶ್ರೀ ನರಸಿಂಹಮೂರ್ತಿ ಬಿ ಕೆ | ಕರ್ನಾಟಕ ಪಬ್ಲಿಕ್ ಶಾಲೆ, ಸಾರಕ್ಕಿ, ಬೆಂಗಳೂರು ದಕ್ಷಿಣ ವಲಯ–1 |
| 03 | ಶ್ರೀ ರಾಘವೇಂದ್ರ ಜಿ. ಎನ್ | ಶ್ರೀಸಿದ್ಧಲಿಂಗೇಶ್ವರ ಪ್ರೌಢಶಾಲೆ, ಮಾಗಡಿ ರಸ್ತೆ, ಬೆಂಗಳೂರು ದಕ್ಷಿಣ ವಲಯ–02 |
| 04 | ಶ್ರೀ ಮುನಿಯಪ್ಪ ಕೆ | ಧರ್ಮಸಾಗರ ಪ್ರೌಢಶಾಲೆ, ದೊಮ್ಮಸಂದ್ರ, ಆನೇಕಲ್ ತಾ|| |

***********

# ವ್ಯಾಕರಣ

## ವರ್ಣಮಾಲೆ

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ :**

1. **ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ**
   ಎ) 6 ಬಿ) 10
   ಸಿ) 5 ಡಿ) 9
2. **ಙ್, ಞ, ಣ್, ನ್, ಮ್ ಈ ಅಕ್ಷರಗಳು ವರ್ಣಮಾಲೆಯ ಈ ಗುಂಪಿಗೆ ಸೇರಿವೆ.**
   ಎ) ಅಲ್ಪಪ್ರಾಣಗಳು ಬಿ) ಮಹಾಪ್ರಾಣಗಳು
   ಸಿ) ಅನುನಾಸಿಕಗಳು ಡಿ) ಸ್ವರಗಳು
3. **ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು**
   ಎ) ದೀರ್ಘಸ್ವರಗಳು ಬಿ) ಹ್ರಸ್ವಸ್ವರ
   ಸಿ) ಪ್ಲುತಸ್ವರ ಡಿ) ಸುಸ್ವರ
4. **ಕನ್ನಡ ವರ್ಣಮಾಲೆಯಲ್ಲಿನ ವ್ಯಂಜನಾಕ್ಷರಗಳು**
   ಎ) 25 ಬಿ) 34
   ಸಿ) 6 ಡಿ) 9
5. **ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹ ಅಕ್ಷರಗಳ ಸಂಖ್ಯೆ :**
   ಎ) 10 ಬಿ) 2
   ಸಿ) 9 ಡಿ) 49

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.**

1. ವರ್ಗೀಯ ವ್ಯಂಜನಾಕ್ಷರಗಳು : 25 :: ಅವರ್ಗೀಯ ವ್ಯಂಜನಾಕ್ಷರಗಳು : ___________
2. ಕ್, ಗ್ : ಅಲ್ಪಪ್ರಾಣಾಕ್ಷರಗಳು :: ಛ್, ಝ್ : ___________
3. ಸ್ವರಗಳು : ಹದಿಮೂರು :: ಯೋಗವಾಹಕಗಳು : __________
4. ವರ್ಗೀಯ ವ್ಯಂಜನಾಕ್ಷರಗಳು : 25 :: ಅವರ್ಗೀಯ ವ್ಯಂಜನಾಕ್ಷರಗಳು : _______

## ನಾಮಪದಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **ಇದು ಅನ್ವರ್ಥನಾಮಕ್ಕೆ ಉದಾಹರಣೆ :**
   ಎ) ವಿಜ್ಞಾನಿ ಬಿ) ರಾಮ ಸಿ) ನದಿ ಡಿ) ಊರು
2. **'ಬೆಂಗಳೂರು' ಎಂಬುದು ಈ ವ್ಯಾಕರಣಾಂಶಕ್ಕೆ ಸೇರಿದೆ.**
   ಎ) ಸರ್ವನಾಮ (ಬಿ) ಅನ್ವರ್ಥನಾಮ

ಸಿ) ರೂಢನಾಮ (ಡಿ) ಅಂಕಿತನಾಮ

3. **'ಸಹದೇವ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ.**

ಎ) ರೂಢನಾಮ ಬಿ) ಅನ್ವರ್ಥನಾಮ

ಸಿ) ಸರ್ವನಾಮ ಡಿ) ಅಂಕಿತನಾಮ

4. **'ವ್ಯಾಪಾರಿ' ಪದವು**

ಎ) ಭಾವನಾಮ ಬಿ) ರೂಢನಾಮ

ಸಿ) ಅನ್ವರ್ಥನಾಮ ಡಿ) ಅಂಕಿತನಾಮ

5. **'ರಾಹುಲ' ಪದವು ನಾಮಪದದ ಈ ಗುಂಪಿಗೆ ಸೇರಿದೆ.**

ಎ) ಭಾವನಾಮ ಬಿ) ರೂಢನಾಮ

ಸಿ) ಅನ್ವರ್ಥನಾಮ ಡಿ) ಅಂಕಿತನಾಮ

6. **ಅನ್ವರ್ಥನಾಮಕ್ಕೆ ಉದಾಹರಣೆ**

ಎ) ಮಹೇಶ್ ಬಿ) ಪರ್ವತ

ಸಿ) ವಿಜ್ಞಾನಿ ಡಿ) ಒಳ್ಳೆಯ

7. **ಅನ್ವರ್ಥನಾಮಕ್ಕೆ ಉದಾಹರಣೆಯಾದ ಪದವು**

ಎ) ರಾಹುಲ ಬಿ) ಮನುಷ್ಯ

ಸಿ) ಕಾವೇರಿ ನದಿ ಡಿ) ನಾನು

8. **ಮನೆಯ ಮುಂದೆ ದೊಡ್ಡ ಮರಗಳಿವೆ. ಈ ವಾಕ್ಯದಲ್ಲಿರುವ 'ದೊಡ್ಡ' ಪದವು**

ಎ) ಗುಣವಾಚಕ ಬಿ) ಸಂಖ್ಯೆವಾಚಕ

ಸಿ) ಭಾವನಾಮ ಡಿ) ಪ್ರಕಾರವಾಚಕ

9. **ನಮ್ಮ ರಾಜ್ಯ ಕರ್ನಾಟಕ ಈ ವಾಕ್ಯದಲ್ಲಿರುವ ಅಂಕಿತನಾಮ ಪದ**

ಎ) ನಮ್ಮ ಬಿ) ರಾಜ್ಯ

ಸಿ) ಕರ್ನಾಟಕ ಡಿ) ಯಾವುದು ಇಲ್ಲ

**ಸಂಬಂಧೀ ಪದಗಳು:**

1. ಪರ್ವತ : ರೂಢನಾಮ :: ಧರ್ಮರಾಯ : ____________
2. ವಿದ್ವಾಂಸ :ಅನ್ವರ್ಥನಾಮ : : ಮನುಷ್ಯ : ____________
3. ನದಿ : ರೂಢನಾಮ :: ಕಾವೇರಿ ನದಿ : ____________
4. ದ್ರೋಣ : ಅಂಕಿತನಾಮ :: ವಿದ್ಯಾರ್ಥಿ : ____________
5. ಉತ್ತರ : ದಿಕ್ವಾಚಕ ಪದ : : ಬಿಳುಪು : ____________

## ಸರ್ವನಾಮಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. ಆತ್ಮಾರ್ಥಕ ಸರ್ವನಾಮ ಪದವಿದು

ಎ) ನಿಮ್ಮ ಬಿ) ತಮ್ಮ

ಸಿ) ನೀವು ಡಿ) ಅವರು

2. ಸರ್ವನಾಮ ಪದಕ್ಕೆ ಉದಾಹರಣೆಯಾದ ಪದ

ಎ) ವ್ಯಾಪಾರ ಬಿ) ನದಿ

ಸಿ) ಯಾರು ಡಿ) ರಮೇಶ

3. ದಶರಥ ಯಾರು? ಈ ವಾಕ್ಯದಲ್ಲಿ 'ಯಾರು?' ಪದವು
   ಎ) ಆತ್ಮಾರ್ಥಕ ಸರ್ವನಾಮ ಬಿ) ಪುರುಷ ವಾಚಕ ಸರ್ವನಾಮ
   ಸಿ) ಪ್ರಶ್ನಾರ್ಥಕ ಸರ್ವನಾಮ ಡಿ) ಉತ್ತಮ ಪುರುಷ ಸರ್ವನಾಮ
4. ಇವುಗಳಲ್ಲಿ ಉತ್ತಮ ಪುರುಷ ಸರ್ವನಾಮ
   ಎ) ನಾನು ಬಿ) ನೀನು
   ಸಿ) ಇವಳು ಡಿ) ಅದು
5. ನಾಮಪದದ ಬದಲಾಗಿ ಬಳಸುವ ಪದಗಳೆ.
   ಎ) ಸರ್ವನಾಮ ಬಿ) ಸಮಾಸ ಪದ
   ಸಿ) ಕ್ರಿಯಾಪದ ಡಿ) ಅವ್ಯಯ ಪದ
6. ಆತ್ಮಾರ್ಥಕ ಸರ್ವನಾಮ ಪದ :
   ಎ) ತಾವು ಬಿ) ಅವರು
   ಸಿ) ಆದ್ದರಿಂದ ಡಿ) ಯಾರು?

**ಸಂಬಂಧೀ ಪದಗಳು:**

1. ತಾನು : ಆತ್ಮಾರ್ಥಕ : : ನಾವು : ________
2. ತಾನು : ಆತ್ಮಾರ್ಥಕ : : ನಾವು : ________
3. ನಾನು, ನೀನು : ಪುರುಷಾರ್ಥಕ ಸರ್ವನಾಮ : : ಯಾರು ? ಏನು : ______

## ವಿಭಕ್ತಿ ಪ್ರತ್ಯಯಗಳು

**ವಸ್ತುನಿಷ್ಠ ಪ್ರಶ್ನೆಗಳು:**

**1. 'ಸಾವಿತ್ರಿಗೆ' ಈ ಪದದಲ್ಲಿರುವ ವಿಭಕ್ತಿ**
   ಎ) ಪ್ರಥಮಾ ಬಿ) ದ್ವಿತೀಯಾ
   ಸಿ) ತೃತೀಯಾ ಡಿ) ಚತುರ್ಥೀ
**2. ಸಪ್ತಮೀ ವಿಭಕ್ತಿಯ ಕಾರಕಾರ್ಥವಿದು.**
   ಎ) ಅಪಾದಾನ ಬಿ) ಸಂಪ್ರದಾಯ
   ಸಿ) ಅಧಿಕರಣ ಡಿ) ಸಂಬಂಧ
**3. ಹಳಗನ್ನಡ ಪಂಚಮೀ ವಿಭಕ್ತಿ ಪ್ರತ್ಯಯವಿದು.**
   ಎ) ಇಂದಂ ಬಿ) ಅನ್ನು
   ಸಿ) ಅತ್ತಣಿಂ ಡಿ) ಒಳ್
**4. ಷಷ್ಠೀ ವಿಭಕ್ತಿಯ ಕಾರಕಾರ್ಥ**
   ಎ) ಸಂಬಂಧ ಬಿ) ಅಧಿಕರಣ
   ಸಿ) ಸಂಪ್ರದಾನ ಡಿ) ಅಪಾದಾನ
**5. ತೃತೀಯಾ ವಿಭಕ್ತಿ ಕಾರಕಾರ್ಥ :**
   ಎ) ಕರ್ತೃ ಬಿ) ಸಂಪ್ರಧಾನ
   ಸಿ) ಕರ್ಮ ಡಿ) ಕರಣ

**6. 'ರಾತ್ರಿಯೊಳ್' – ಪದದ ವಿಭಕ್ತಿ ಹೆಸರು :**
   ಎ) ಪಂಚಮಿ ಬಿ) ಸಪ್ತಮಿ

ಸಿ) ಚತುರ್ಥಿ ಡಿ) ದ್ವಿತೀಯ

**ಸಂಬಂಧೀ ಪದಗಳು:**

1. ಒಳ್ : ಸಪ್ತಮಿ : : ಅತ್ತಣಿಂ : ____________
2. ಮನೆಯನ್ನು: ದ್ವಿತೀಯ : : ಮರದಲ್ಲಿ : ___________
3. ಪ್ರಥಮ : ಕರ್ತೃಕಾರಕ : : ಷಷ್ಠಿ : ________
4. ಶಾಲೆಗೆ : ಚತುರ್ಥಿ ವಿಭಕ್ತಿ :: ದಾರಿಯಲ್ಲಿ _________
5. ಪುಸ್ತಕದ : ಷಷ್ಠಿ ವಿಭಕ್ತಿ :: ದೇವರನ್ನು : ___________

## ಕ್ರಿಯಾಪದಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **ಇದು ಸಕರ್ಮಕ ಧಾತುವಾಗಿದೆ.**
   ಎ) ಮಲಗು ಬಿ) ಓಡು
   ಸಿ) ಕೊಡು ಡಿ) ಹೋಗು
2. **ಕ್ರಿಯಾಪದದ ಮೂಲರೂಪವನ್ನು ಹೀಗೆನ್ನುವರು :**
   ಎ) ನಾಮಪ್ರಕೃತಿ ಬಿ) ಉಪಸರ್ಗ
   ಸಿ) ಪ್ರತ್ಯಯ ಡಿ) ಧಾತು
3. **'ಮಾಡು' ಧಾತುವಿನ ವಿಧ್ಯರ್ಥಕ ರೂಪ**
   ಎ) ಮಾಡೆವು ಬಿ) ಮಾಡಿಯಾರು
   ಸಿ) ಮಾಡರು ಡಿ) ಮಾಡಲಿ
4. **ಇವುಗಳಲ್ಲಿ ವಿಧ್ಯರ್ಥಕ ಕ್ರಿಯಾರೂಪವಿದು.**
   ಎ) ಮಾಡೀತು ಬಿ) ಮಾಡದು
   ಸಿ) ಮಾಡಲಿ ಡಿ) ಮಾಡಿಯಾವು
5. **ಇವುಗಳಲ್ಲಿ ಸಂಭಾವನಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾದ ಪದವಿದು.**
   ಎ) ಹಾಡಲಿ ಬಿ) ಹಾಡಿಯಾನು
   ಸಿ) ಹಾಡನು ಡಿ) ಹಾಡುವನು
6. **ಕೆಳಗಿನವುಗಳಲ್ಲಿ ಸಕರ್ಮಕ ಧಾತು :**
   ಎ) ಮಲಗು ಬಿ) ಬದುಕು
   ಸಿ) ಓಡು ಡಿ) ಕೊಡು
7. **'ಹಾಡು' ಧಾತುವಿನ ನಿಷೇಧಾರ್ಥಕ ರೂಪ :**
   ಎ) ಹಾಡನು ಬಿ) ಹಾಡಲಿ
   ಸಿ) ಹಾಡಿಯಾರು ಡಿ) ಹಾಡಿರಿ
8. **'ಕಟ್ಟಿಯಾರು' ಪದದ ವಿಧ್ಯರ್ಥಕ ಬಹುವಚನ ರೂಪ :**
   ಎ) ಕಟ್ಟು ಬಿ) ಕಟ್ಟಿರಿ
   ಸಿ) ಕಟ್ಟರು ಡಿ) ಕಟ್ಟಿಯಾನು
9. **'ಮುಟ್ಟೋಣ' – ಪದದ ಧಾತು :**
   ಎ) ಮುಡಿ ಬಿ) ಮುಟ್ಟರು
   ಸಿ) ಮುಟ್ಟಲಿ ಡಿ) ಮುಟ್ಟು

10. **'ಬರೆ' – ಪದದ ನಿಷೇಧಾರ್ಥಕ ರೂಪ :**

ಎ) ಬರೆಯಲಿ    ಬಿ) ಬರೆದೇನು

ಸಿ) ಬರೆಯದು    ಡಿ) ಬರೆದೀತು

**ಸಂಬಂಧೀ ಪದಗಳು:**

1. ನೋಡಲಿ : ವಿಧ್ಯರ್ಥಕ :: ಬರೆದಾನು : ____________
2. ತಿನ್ನಲಿ : ವಿಧ್ಯರ್ಥಕ : : ಮಾಡನು : __________
3. ಮಾಡೋಣ : ವಿಧ್ಯರ್ಥಕ :: ಮಾಡರು __________
4. ಬರೆಯುತ್ತೇನೆ : ವರ್ತಮಾನ ಕಾಲ :: ಬರೆದನು : ______
5. ಕೇಳನು : ನಿಷೇದಾರ್ಥಕ : ಕೇಳಿಯಾನು : ___________

## ಸಂಧಿಗಳು

**ವಸ್ತುನಿಷ್ಟ ಪ್ರಶ್ನೆಗಳು:**

1. **'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ**

ಎ) ಗುಣಸಂಧಿ    ಬಿ) ಜಶ್ತ್ವಸಂಧಿ

ಸಿ) ವೃದ್ಧಿಸಂಧಿ    ಡಿ) ಶ್ಚುತ್ವ ಸಂದಿ

2. **'ಕೋಟ್ಯಧೀಶ್ವರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

ಎ) ಜಶ್ತ್ವಸಂಧಿ    ಬಿ) ಶ್ಚುತ್ವಸಂಧಿ

ಸಿ) ಯಣ್‌ಸಂಧಿ    ಡಿ) ವೃದ್ಧಿಸಂಧಿ

3. **ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :**

ಎ) ಏಕೈಕ    ಬಿ) ಮದೋನ್ಮತ್ತ

ಸಿ) ಅತ್ಯವಸರ    ಡಿ) ದಿಗಂತ

4. **ಹೊಸಗನ್ನಡ ಪದವು ಈ ಸಂಧಿಗೆ ಉದಾಹರಣೆ :**

ಎ) ಲೋಪ    ಬಿ) ಆಗಮ

ಸಿ) ಆದೇಶ    ಡಿ) ಗುಣಸಂಧಿ

5. **'ಸನ್ಮಾನ'–ಪದವು ಈ ಸಂಧಿಗೆ ಉದಾಹರಣೆ :**

ಎ) ಅನುನಾಸಿಕಸಂಧಿ    ಬಿ) ಆಗಮಸಂಧಿ

ಸಿ) ಜಶ್ತ್ವಸಂಧಿ    ಡಿ) ಸವರ್ಣದೀರ್ಘಸಂಧಿ

6. **'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

ಎ) ಲೋಪಸಂಧಿ    ಬಿ) ಆಗಮಸಂಧಿ

ಸಿ) ಗುಣಸಂಧಿ    ಡಿ) ಆದೇಶ ಸಂಧಿ

**ಸಂಬಂಧೀ ಪದಗಳು:**

1. ಊರೂರು : ಲೋಪಸಂಧಿ : : ಕೈಯನ್ನು : ___________
2. ಮಹರ್ಷಿ : ಗುಣಸಂಧಿ :: ಷಡಾನನ : ______
3. ಶರಚ್ಚಂದ್ರ : ಶ್ಚುತ್ವಸಂಧಿ : : ದಿಗಂತ : ___________
4. ಲೋಪಸಂಧಿ : ಸ್ವರಸಂಧಿ : : ಆದೇಶ ಸಂಧಿ : ___________
5. ಬಂದಲ್ಲದೆ : ಲೋಪಸಂಧಿ : : ದೃತಿಗೆಟ್ಟು : _______________

## ಸಮಾಸಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**
   ಎ) ತತ್ಪುರುಷ ಸಮಾಸ　　ಬಿ) ದ್ವಿಗುಸಮಾಸ
   ಸಿ) ಅಂಶಿ ಸಮಾಸ　　ಡಿ) ಕ್ರಿಯಾ ಸಮಾಸ
2. **'ಕಣ್ದೆರೆ' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ.**
   ಎ) ತತ್ಪುರುಷ　　ಬಿ) ದ್ವಿಗು
   ಸಿ) ಗಮಕ　　ಡಿ) ಕ್ರಿಯಾ
3. **ಕರ್ಮಧಾರಯ ಸಮಾಸದ ಪದವಿದು:**
   ಎ) ಮೋಸಮಾಡು　　ಬಿ) ನಡುರಾತ್ರಿ
   ಸಿ) ಸೂರ್ಯಚಂದ್ರರು　　ಡಿ) ಪೆರ್ಮರ
4. **ದ್ವಂದ್ವ ಸಮಾಸದ ಪದವಿದು:**
   ಎ) ಮೋಸಮಾಡು　　ಬಿ) ನಟ್ಟಡವಿ
   ಸಿ) ಸೂರ್ಯಚಂದ್ರರು　　ಡಿ) ಅರಮನೆ
5. **'ಹನುಮಭೀಮರಾಮ' ಪದವು ಈ ಸಮಾಸಕ್ಕೆ ಉದಾಹರಣೆ:**
   ಎ) ತತ್ಪುರುಷ ಸಮಾಸ　　ಬಿ) ಕರ್ಮಧಾರೆಯ ಸಮಾಸ
   ಸಿ) ದ್ವಂದ್ವ ಸಮಾಸ　　ಡಿ)ಕ್ರಿಯಾ ಸಮಾಸ.
6. **'ಕೈಮುಗಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**
   ಎ) ತತ್ಪುರುಷ　　ಬಿ) ಕರ್ಮಧಾರಯ
   ಸಿ) ಕ್ರಿಯಾ　　ಡಿ) ದ್ವಂದ್ವ
7. **'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆ :**
   ಎ) ದ್ವಂದ್ವ ಸಮಾಸ　　ಬಿ) ದ್ವಿಗು ಸಮಾಸ
   ಸಿ) ತತ್ಪುರುಷ ಸಮಾಸ　　ಡಿ) ಅಂಶಿ ಸಮಾಸ
8. **'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**
   ಎ) ದ್ವಂದ್ವ ಸಮಾಸ　　ಬಿ) ದ್ವಿಗು ಸಮಾಸ
   ಸಿ) ತತ್ಪುರುಷ ಸಮಾಸ　　ಡಿ) ಅಂಶಿ ಸಮಾಸ
9. **'ನಡುರಾತ್ರಿ' ಪದವು ಈ ಸಮಾಸಕ್ಕೆ ಉದಾಹರಣೆ.**
   ಎ) ದ್ವಂದ್ವ ಸಮಾಸ　　ಬಿ) ದ್ವಿಗು ಸಮಾಸ
   ಸಿ) ತತ್ಪುರುಷ ಸಮಾಸ　　ಡಿ) ಅಂಶಿ ಸಮಾಸ
10. **'ಪೂದೋಟ' ಪದವು ಈ ಸಮಾಸಕ್ಕೆ ಉದಾಹರಣೆ**
   ಎ) ದ್ವಂದ್ವ ಸಮಾಸ　　ಬಿ) ದ್ವಿಗು ಸಮಾಸ
   ಸಿ) ತತ್ಪುರುಷ ಸಮಾಸ　　ಡಿ) ಅಂಶಿ ಸಮಾಸ

**ಸಂಬಂಧೀ ಪದಗಳು:**

1. ಹೊಗೆದೋರು : ಕ್ರಿಯಾಸಮಾಸ :: ಹೆದ್ದಾರಿ : ______
2. ನೆಯ್ದುವಸ್ತ್ರ : ಗಮಕಸಮಾಸ :: ಸೂರ್ಯಚಂದ್ರರು :__________
3. ಆ ಕಲ್ಲು : ಗಮಕ ಸಮಾಸ :: ಕಣ್ದೆರೆ __________

4. ಇಮ್ಮಾವು : ಕರ್ಮಧಾರೆಯ ಸಮಾಸ : ನೇಯ್ದುವಸ್ತ್ರ : ________
5. ಹಿಂದಲೆ : ಅಂಶಿ ಸಮಾಸ :: ಚಿಕ್ಕಮನೆ : __________

## ತತ್ಸಮ – ತದ್ಭವಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **'ಅಮೃತ' ಪದದ ತದ್ಭವ ರೂಪ :**
   ಎ) ಜೇನು ಬಿ) ಅಮರ್ದು
   ಸಿ) ಅಮಳ ಡಿ) ಹಾಲು
2. **'ಕಾವ್ಯ' ಪದದ ತದ್ಭವ ರೂಪ :**
   ಎ) ಕವಿತೆ ಬಿ) ಕಥೆ
   ಸಿ) ಕಬ್ಬ ಡಿ) ಕವಿ
3. **'ದೀವಿಗೆ' ಪದದ ತತ್ಸಮ ರೂಪ**
   ಎ) ದೀಪ ಬಿ) ಹಣತೆ
   ಸಿ) ದಾರಿ ಡಿ) ದೀಪಿಕಾ
4. **'ವಂಧ್ಯಾ' ಪದದ ತದ್ಭವ ರೂಪ :**
   ಎ) ಸಂಜೆ ಬಿ) ಬಂಜೆ
   ಸಿ) ಬಂಧ್ಯಾ ಡಿ) ಸಂಧ್ಯಾ
5. **'ವಿದ್ಯಾಧರ' ಪದದ ತದ್ಭವ ರೂಪ ಇದಾಗಿದೆ.**
   ಎ) ಗಣಪತಿ ಬಿ) ಬಿಜ್ಜೋಧರ
   ಸಿ) ವಿನಾಯಕ ಡಿ) ಶಶಿಧರ

**ಸಂಬಂಧೀ ಪದಗಳು:**

1. ಪಾದುಕಾ : ಹಾವುಗೆ :: ಅಂಕುಶ : ___________
2. ಯುದ್ಧ : ಜುದ್ಧ : : ಯಜ್ಞ : _________
3. ವಂಶ : ಬಂಚ : : ತವಸಿ: ____________
4. ವಂಧ್ಯಾ : ಬಂಜೆ : : ಧಾತ್ರ : _____________
5. ಸ್ಥಾನ : ಠಾಣ :: ವಂಧ್ಯಾ :: __________

## ಗ್ರಾಂಥಿಕ ರೂಪಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **'ಇಸವಾಸ' ಪದದ ಗ್ರಾಂಥಿಕ ರೂಪವಿದು.**
   ಎ) ವಿಶೇಷ ಬಿ) ವಿಶ್ವಾಸ
   ಸಿ) ವಿಷವಾಸ ಡಿ) ವಿಶದ
2. **'ಕಳುವ್ಯಾರೆ' ಪದದ ಗ್ರಾಂಥಿಕರೂಪ :**
   ಎ) ಕಳವುಮಾಡಿದರು ಬಿ) ಕಳುಹಿಸಿದ್ದಾರೆ
   ಸಿ) ಕಳೆದುಹೋಗಿದೆ ಡಿ) ಕಳೆದಿದ್ದಾರೆ
3. **'ಬ್ಯಾಡ' ಪದದ ಗ್ರಾಂಥಿಕರೂಪ**

ಎ) ಬೇಡ ಬಿ) ಬೇರೆಯವರು

ಸಿ) ಬೇಕು ಡಿ) ಬಾಡ

**4. 'ಸಿಡಿದ್ವಾಂಗ' ಪದದ ಗ್ರಾಂಥಿಕ ರೂಪ.**

ಎ) ಸಿಡಿಯುವಂತೆ ಬಿ) ಸಿಡಿದಹಾಗೆ

ಸಿ) ಸಿಡಿದಂತೆ ಡಿ) ಉರಿಯುವುದು

**5. 'ಮ್ಯಾಗ' ಪದದ ಗ್ರಾಂಥಿಕ ರೂಪ.**

ಎ) ಬೇಗ ಬಿ) ವೇಗ

ಸಿ) ಮೇಲೆ ಡಿ) ಅಮೇಲೆ

**ಸಂಬಂಧೀ ಪದಗಳು:**

1. ಮ್ಯಾಗ : ಮೇಲೆ :: ಸಕ್ಕಾರಿ : ____________
2. ಇಸವಾಸ : ವಿಶ್ವಾಸ : : ಇಲ್ಲದ್ದಂಗ : ______
3. ಮಾಡ್ಯಾರೋ : ಮಾಡಿದ್ದಾರೆ :: ಬ್ಯಾಡರ : _________

## ದ್ವಿರುಕ್ತಿ – ಜೋಡುನುಡಿ

**ವಸ್ತುನಿಷ್ಟ ಪ್ರಶ್ನೆಗಳು:**

**1. 'ಈಗೀಗ' – ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ :**

ಎ) ಜೋಡುನುಡಿ ಬಿ) ದ್ವಿರುಕ್ತಿ

ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು

**2. 'ತುತ್ತತುದಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.**

ಎ) ಜೋಡುನುಡಿ ಬಿ) ದ್ವಿರುಕ್ತಿ

ಸಿ) ಅನುಕರಣಾವ್ಯಯ ಡಿ) ಸಮಾಸ ಪದ

**3. ಈ ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದ.**

ಎ) ಕೆನೆಮೊಸರು ಬಿ) ಸುತ್ತಮುತ್ತ

ಸಿ) ಮಕ್ಕಳುಮರಿ ಡಿ) ಊರೂರು

**ಸಂಬಂಧೀ ಪದಗಳು:**

1. ಹಾಲ್ಜೇನು : ಜೋಡುನುಡಿ :: ಬೇಡಬೇಡ : ________________
2. ಮೆಲ್ಲಮೆಲ್ಲನೆ : ದ್ವಿರುಕ್ತಿ :: ಮಕ್ಕಳುಮರಿ : _________
3. ಕಟ್ಟಕಡೆಗೆ : ದ್ವಿರುಕ್ತಿ :: ಹುಳಹುಪ್ಪಡಿ ____________
4. ಸತಿಪತಿ : ಜೋಡಿನುಡಿ :: ಅಬ್ಬಬ್ಬಾ _______
5. ಹುಳಹುಪ್ಪಡಿ : ಜೋಡಿನುಡಿ :: ಒಬ್ಬೊಬ್ಬ : _________

## ಅವ್ಯಯಗಳು

**ವಸ್ತುನಿಷ್ಟ ಪ್ರಶ್ನೆಗಳು:**

**1. 'ಧಗಧಗ' ಪದವು ಈ ಅವ್ಯಯಕ್ಕೆ ಸೇರಿದೆ.**

ಎ) ಸಾಮಾನ್ಯಾರ್ಥಕಾವ್ಯಯ ಬಿ) ಅನುಕರಣಾವ್ಯಯ

ಸಿ) ಭಾವಸೂಚಕಾವ್ಯಯ ಡಿ) ಕ್ರಿಯಾರ್ಥಕಾವ್ಯಯ

**2. ಇದು ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಾಗಿದೆ.**

ಎ) ಅವನೇ ಬಿ) ಆಹಾ!

ಸಿ) ಆದ್ದರಿಂದ ಡಿ) ದಡದಡ

**3. ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :**

ಎ) ಚೆನ್ನಾಗಿ ಬಿ) ಸಾಕು

ಸಿ) ಮತ್ತು ಡಿ) ಅಯ್ಯೋ

**4. 'ತರುವಾಯ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.**

ಎ) ಸಾಮಾನ್ಯ ಅವ್ಯಯ ಬಿ) ಸಂಬಂಧಾರ್ಥಕ ಅವ್ಯಯ

ಸಿ) ಭಾವಸೂಚಕ ಅವ್ಯಯ ಡಿ) ಕ್ರಿಯಾರ್ಥಕ ಅವ್ಯಯ

**5. ಅನುಕರಣಾವ್ಯಯ ಉದಾಹರಣೆಯಾಗಿರುವ ಪದ**

ಎ) ಧಗಧಗ ಬಿ) ಸಾಕು

ಸಿ) ಅವನೇ ಸಿ) ಬೇಗನೆ

**6. ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯವನ್ನು ಹೀಗೆನ್ನುವರು.**

ಎ) ಅನುಕರಣಾವ್ಯಯ ಬಿ) ಸಾಮಾನ್ಯ ಅವ್ಯಯ

ಸಿ) ಸಂಬಂಧಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ

**7. ಇದೇ, ಅದೇ – ಇವುಗಳು ಈ ಅವ್ಯಯಕ್ಕೆ ಉದಾಹರಣೆ.**

ಎ) ಅವಧಾರಣಾರ್ಥಕಾವ್ಯಯ ಬಿ) ಸಾಮಾನ್ಯ ಅವ್ಯಯ

ಸಿ) ಸಂಬಂಧಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ

8. **ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.**

ಎ) ಅವಧಾರಣಾರ್ಥಕಾವ್ಯಯ ಬಿ) ಸಾಮಾನ್ಯ ಅವ್ಯಯ

ಸಿ) ಸಂಬಂಧಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ

**9. ಸಾಮಾನ್ಯವ್ಯಯ ಪದ :**

ಎ) ನೀನೇ ಬಿ) ಧಗಧಗ

ಸಿ) ಬೇಗನೆ ಡಿ) ಆದ್ದರಿಂದ

**ಸಂಬಂಧೀ ಪದಗಳು:**

1. ಅಲ್ಲದೆ : ಸಂಬಂಧಾರ್ಥಕಾವ್ಯಯಗಳು : : ಅದುವೇ : ________
2. ಚೆನ್ನಾಗಿ : ಸಾಮಾನ್ಯಾವ್ಯಯ : : ಸಾಕು : __________
3. ಬೇಡ : ಕ್ರಿಯಾರ್ಥಕಾವ್ಯಯ : : ಆದ್ದರಿಂದ : ___
4. ಅಲ್ಲದೆ : ಸಂಬಂಧಾರ್ಥಕಾವ್ಯಯಗಳು : : ಅದುವೇ : __
5. ಅಹಾ : ಭಾವಸೂಚಕಾವ್ಯಯ :: ಊಂ :___________

## ಕೃದಂತಗಳು

**ವಸ್ತುನಿಷ್ಟ ಪ್ರಶ್ನೆಗಳು:**

1. **'ನೋಟ' ಎಂಬುದು ಈ ವ್ಯಾಕರಣಾಂಶವಾಗಿದೆ**

ಎ) ಕೃದಂತನಾಮ ಬಿ) ಕೃದಂತಭಾವನಾಮ

ಸಿ) ಕೃದಂತಾವ್ಯಯ ಡಿ) ತದ್ಧಿತಾಂತ

2. **ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ**

ಎ) ತೊಡುಗೆ — ಬಿ) ತಿನ್ನುವಿಕೆ

ಸಿ) ನಡೆಯುವ — ಡಿ) ಮಾಡಲಿಕ್ಕೆ

3. **ಇದೊಂದು ಕೃದಂತನಾಮ ಪದ**

ಎ) ಓಟ — ಬಿ) ಓಡುವ

ಸಿ) ಮೆರವಣಿಗೆ — ಡಿ) ನೋಡಲು

4. **ಇದು ಕೃದಂತ ಭಾವನಾಮಕ್ಕೆ ಉದಾಹರಣೆ :**

ಎ) ಚೆಲುವಿಕೆ — ಬಿ) ಉಡುಗೆ

ಸಿ) ಕನ್ನಡಿಗ — ಡಿ) ರಾಮನಂತೆ

5. **'ತೊಡುಗೆ' ಪದವು ಈ ವ್ಯಾಕಾರಣಾಂಲಿಕ್ಕೆ ಉದಾಹರಣೆಯಾಗಿದೆ:**

ಎ) ಕೃದಂತನಾಮ — ಬಿ) ಕೃದಂತಭಾವನಾಮ

ಸಿ) ಕೃದಂತಾವ್ಯಯ — ಡಿ) ತದ್ಧಿತಾಂತಭಾವನಾಮ

6. **'ಅಂಜಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ**

ಎ) ಕೃದಂತನಾಮ — ಬಿ) ಕೃದಂತಭಾವನಾಮ

ಸಿ) ಕೃದಂತಾವ್ಯಯ — (ಡಿ) ತದ್ಧಿತಾಂತಭಾವನಾಮ

**ಸಂಬಂಧೀ ಪದಗಳು:**

1. ಮಾಡಿದ : ಕೃದಂತನಾಮ :: ನಡೆತ :: ________
2. ನೆನಪು : ಕೃದಂತಭಾವನಾಮ : ನಡೆಯುತ್ತಾ : __________
3. ಕೊರೆತ : ಕೃದಂತಭಾವನಾಮ : ಬರೆದು : ______
4. ಬಾಳುವ : ವರ್ತಮಾನಕೃದಂತ :: ಬರೆಯದ _____
5. ಪೆರ್ಮೆ : ತದ್ಧಿತಾಂತ ಭಾವನಾಮ :: ಮಾಡಲಿಕ್ಕೆ : _______________

## ತದ್ಧಿತಾಂತಗಳು

**ವಸ್ತುನಿಷ್ಠ ಪ್ರಶ್ನೆಗಳು:**

1. **ತದ್ಧಿತಾಂತನಾಮಕ್ಕೆ ಉದಾಹರಣೆ**

ಎ) ಬಳೆಗಾರ — ಬಿ) ಸಿರಿತನ

ಸಿ) ಚಂದ್ರನಂತೆ — ಡಿ) ಕಪ್ಪು

2. **'ಕನ್ನಡಿಗ' ಪದದಲ್ಲಿರುವ ತದ್ದಿತ ಪ್ರತ್ಯಯ**

ಎ) ಕಾರ — ಬಿ) ಗಾರ

ಸಿ) ಅಡಿಗ — ಡಿ) ಇಗ

3. **ಈ ಕೆಳಗಿನ ಪದಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ :**

ಎ) ಬಡತನ — ಬಿ) ಮಡಿವಾಳ

ಸಿ) ರಾಧೆಗಿಂತ — ಡಿ) ಬರೆಯುವ

4. **ತದ್ಧಿತಾಂತ ನಾಮಪದ :**

ಎ) ವಾಚಾಳಿ — ಬಿ) ಪೆರ್ಮೆ

ಸಿ) ಅಂಜಿಕೆ — ಡಿ) ತಿನ್ನುತ್ತ

5. **ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾಗಿದೆ :**

ಎ) ಮಾಲೆಗಾರ್ತಿ　　　　ಬಿ) ನೋಟ

ಸಿ) ಶಾಲೆಯವರೆಗೆ　　　　ಡಿ) ಜಾಣತನ

**ಸಂಬಂಧೀ ಪದಗಳು:**

1. ನೆನಪು : ಕೃದಂತಭಾವನಾಮ :: ಹಿರಿಮೆ : ______
2. ಸಿರಿತನ : ತದ್ಧಿತಾಂತ ಭಾವನಾಮ :: ಸಿರಿವಂತ : ______
3. ನಡೆಯುತ್ತ : ಕೃದಂತಾವ್ಯಯ :: ಪಟ್ಟಣದವರೆಗೆ : ______________
4. ಬಳೆಗಾರ : ಬಳೆಗಾರ್ತಿ :: ಒಕ್ಕಲಿಗ :____________
5. ಅಂಜಿಕೆ : ಕೃದಂತ ಭಾವನಾಮ : : ಜಾಣ್ಮೆ : ___________

## ವಾಕ್ಯಗಳು

**ವಸ್ತುನಿಷ್ಟ ಪ್ರಶ್ನೆಗಳು:**

1. **ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆ ಇದು.**

   ಎ) ಪೂರ್ಣ ವಿರಾಮ　　　　ಬಿ) ಅರ್ಧವಿರಾಮ

   ಸಿ) ಅಲ್ಪವಿರಾಮ　　　　ಡಿ) ಭಾವಸೂಚಕ

2. **ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು – ಇದು**

   ಎ) ಸಾಮಾನ್ಯವಾಕ್ಯ　　　　ಬಿ) ಸಂಯೋಜಿತ ವಾಕ್ಯ

   ಸಿ) ಮಿಶ್ರವಾಕ್ಯ　　　　ಡಿ) ಸಂಬಂಧಿತ ವಾಕ್ಯ

3. **ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ :**

   ಎ) ಮಿಶ್ರವಾಕ್ಯ　　　　ಬಿ) ಸಂಯೋಜಿತವಾಕ್ಯ

   ಸಿ) ಸಾಮಾನ್ಯವಾಕ್ಯ　　　　ಡಿ) ಪ್ರಶ್ನಾರ್ಥಕವಾಕ್ಯ

4. **ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಿದ್ದರೆ ಅದನ್ನು ಹೀಗೆನ್ನುವರು.**

   ಎ) ಸಾಮಾನ್ಯವಾಕ್ಯ　　　　ಬಿ) ಸಂಯೋಜಿತವಾಕ್ಯ

   ಸಿ) ಮಿಶ್ರವಾಕ್ಯ　　　　ಡಿ) ಪ್ರಶ್ನಾರ್ಥಕವಾಕ್ಯ

5. **ಕಾರವಾರದಲ್ಲಿ ಮಲೇರಿಯ ಹಬ್ಬಿತ್ತು. ಈ ವಾಕ್ಯವು**

   ಎ) ಸಾಮಾನ್ಯವಾಕ್ಯ　　　　ಬಿ) ಸಂಯೋಜಿತವಾಕ್ಯ

   ಸಿ) ಮಿಶ್ರವಾಕ್ಯ　　　　ಡಿ) ಪ್ರಶ್ನಾರ್ಥಕವಾಕ್ಯ

## ಲೇಖನ ಚಿಹ್ನೆಗಳು

**ವಸ್ತುನಿಷ್ಟ ಪ್ರಶ್ನೆಗಳು:**

1. **ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ**

   ಎ) ಉದ್ಧರಣ ಚಿಹ್ನೆ　　　　ಬಿ) ವಾಕ್ಯವೇಷ್ಟನ ಚಿಹ್ನೆ

   ಸಿ) ಆವರಣ ಚಿಹ್ನೆ　　　　ಡಿ) ವಿವರಣಾತ್ಮಕ ಚಿಹ್ನೆ

**2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.**

ಎ) ವಿವರಣಾತ್ಮಕ ಚಿಹ್ನೆ ಬಿ) ವಾಕ್ಯವೇಷ್ಟನಚಿಹ್ನೆ

ಸಿ) ಉದ್ಧರಣ ಚಿಹ್ನೆ ಡಿ) ಆವರಣಚಿಹ್ನೆ

**3. ಅಯ್ಯೋ ! ಹೀಗಾಗ ಬಾರದಿತ್ತು. ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ :**

ಎ) ಭಾವಸೂಚಕ ಬಿ) ಪೂರ್ಣವಿರಾಮ

ಸಿ) ಆವರಣ ಡಿ) ಉದ್ಧರಣ

**4. ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.**

ಎ) ಭಾವಸೂಚಕ ಬಿ) ಪೂರ್ಣವಿರಾಮ

ಸಿ) ಅಲ್ಪವಿರಾಮ ಡಿ) ಉದ್ಧರಣ

**5. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಹಾಕಬೇಕು.**

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ

ಸಿ) ಅರ್ಧವಿರಾಮ ಡಿ) ಉದ್ಧರಣ

**6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ :**

ಎ) ಆವರಣ ಚಿಹ್ನೆ ಬಿ) ವಿವರಣಾತ್ಮಕ ಚಿಹ್ನೆ

ಸಿ) ಉದ್ಧರಣ ಚಿಹ್ನೆ ಡಿ) ವಾಕ್ಯವೇಷ್ಟನ

**7. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.**

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ

ಸಿ) ಅರ್ಧವಿರಾಮ ಡಿ) ಉದ್ಧರಣ

***************

## ಭಾಗ – ೧

### ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. **ಭಾಷೆ ಯಾವುದಕ್ಕೆ ಸಾಧನವಾಗಿದೆ?**

   **ಉತ್ತರ:** ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

2. **ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ ?**

   **ಉತ್ತರ:** ಪ್ರಾಣಿಗಳು ಚಲನವಲನಗಳ ವಿಷಯವಾಗಿ, ಆಹಾರ ವಿಚಾರಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ಸಹಜವಾಗಿ ತರಪೇತು ಕೊಡುತ್ತವೆ.

3. **ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು ?**

   **ಉತ್ತರ:** ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು.

4. **ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?**

   **ಉತ್ತರ:** ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ

5. **ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?**

   **ಉತ್ತರ:** ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ.

6. **ಭಗವದ್ಗೀತೆಯನ್ನು ರಚಿಸಿದವರು ಯಾರು?**

   **ಉತ್ತರ :** ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.

7. **ಹುಲಿಗೆ ಪರಮಾನಂದವಾಗಲು ಕಾರಣವೇನು?**

   **ಉತ್ತರ:** ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

8. **ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**

   **ಉತ್ತರ :** ಹುಲಿಗೆ ತಮ್ಮ ಮುಖ ದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರ ತಲೆ ಸುತ್ತಲಾರಂಭಿಸಿತು.

9. **ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?**

   **ಉತ್ತರ :** ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.

10. **ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**

    **ಉತ್ತರ :** ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

11. **ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?**

    **ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು 1895 ರಲ್ಲಿ ಪಟ್ಟಾಭಿಷಿಕ್ತರಾದರು.

12. **ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?**

    **ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವೋತೋಮುಖ ಅಬಿವೃದ್ಧಿಗೆ ಕಂಕಣಬದ್ಧರಾದರು.

13. **ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್‌ಯೋಜನೆ ಯಾವುದು?**

    **ಉತ್ತರ :** ಶಿವನಸಮುದ್ರ ಜಲವಿದ್ಯುತ್ ಯೋಜನೆ ಏಷ್ಯಾ ಖಂಡದಲ್ಲೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆಯಾಗಿದೆ.

14. **ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

    **ಉತ್ತರ :** ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

15. **ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

    **ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು.

16. **ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**

    **ಉತ್ತರ :** ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

17. **ಇಂದಲ್ಲ – ನಾಳೆ ಫಲ ಕೊಡುವ ಅಂಶಗಳಾವುವು?**

    **ಉತ್ತರ :** ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

**18. ಮನೆಮಂಚಮ್ಮ ಯಾರು?**

**ಉತ್ತರ :** ಮನೆಮಂಚಮ್ಮ ಗ್ರಾಮದೇವತೆ.

**19. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?**

**ಉತ್ತರ :** ಮನೆ ಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ

**20. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?**

**ಉತ್ತರ :** ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಫ.ಗು. ಹಳಕಟ್ಟಿಯವರು.

**21. ವಚನಕಾರರಿಗೆ ಯಾವುದು ದೇವರಾಗಿತ್ತು?**

**ಉತ್ತರ :** ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

**22. ಅಶೋಕ ಪೈ ಅವರ ವೃತ್ತಿ ಯಾವುದು?**

**ಉತ್ತರ :** ಅಶೋಕ ಪೈ ಅವರು ಮನೋವೈದ್ಯರು.

**23. ದೇವನೂರರ 'ನನ್ನದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.**

**ಉತ್ತರ :** ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ ಎಂದು ದೇವನೂರ ಮಹದೇವ ಅವರು ನನ್ನ ದೇವರು ಯಾರು ಎಂಬುದನ್ನು ಸ್ಪಷ್ಟಿಕರಿಸುತ್ತಾರೆ.

**24. ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗಿರುವ ದೇವತೆ ಯಾರು?**

**ಉತ್ತರ :** ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆಮಂಚಮ್ಮ ಇಂದು ಪೂಜಿತಳಾಗುತ್ತಿದ್ದಾಳೆ.

**25. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?**

**ಉತ್ತರ :** ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.

**26. ನದೀಜಲಗಳು ಏನಾಗಿವೆ ?**

**ಉತ್ತರ :** ನದೀಜಲಗಳು ಕಲುಷಿತವಾಗಿವೆ.

**27. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?**

**ಉತ್ತರ :** ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

**28. ಕಾಡುಮೇಡುಗಳ ಸ್ಥಿತಿ ಹೇಗಿದೆ ?**

**ಉತ್ತರ :** ಕಾಡುಮೇಡುಗಳು ಬರಡಾಗಿವೆ.

**29. ಯಾವ ಎಚ್ಚರದೊಳು ಬದುಕಬೇಕಿದೆ ?**

**ಉತ್ತರ :** ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

**30. ಸುತ್ತಲು ಕವಿಯುವ ಕತ್ತಲೆಯೊಳಗೆ ಏನನ್ನು ಹಚ್ಚಬೇಕಿದೆ ?**

**ಉತ್ತರ :** ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆ ಹಚ್ಚಬೇಕಿದೆ.

**31. ಯಾವುದನ್ನು ವಸಂತವಾಗುತ ಮುಟ್ಟಬೇಕಿದೆ ?**

**ಉತ್ತರ :** ಬರಡಾಗಿರುವೀ ಕಾಡುಮೇಡುಗಳ ವಸಂತವಾಗುತ ಮುಟ್ಟಬೇಕಿದೆ.

**32. ನಾಳಿನ ಕನಸನ್ನುಎಲ್ಲಿ ಬಿತ್ತಬೇಕೆಂದು ಕವಿ ಶಿವರುದ್ರಪ್ಪನವರು ಹೇಳಿದ್ದಾರೆ ?**

**ಉತ್ತರ :** ನಾಳಿನ ಕನಸನ್ನುಕಂದಿದಕಣ್ಣಲ್ಲಿ ಬಿತ್ತಬೇಕೆಂದು ಕವಿ ಶಿವರುದ್ರಪ್ಪನವರು ಹೇಳಿದ್ದಾರೆ.

**33. ಸಂಕಲ್ಪಗೀತೆ ಪದ್ಯಭಾಗದ ಆಕರ ಕೃತಿ ಯಾವುದು ?**

**ಉತ್ತರ :** ಸಂಕಲ್ಪಗೀತೆ ಪದ್ಯಭಾಗದ ಆಕರ ಕೃತಿ – ಎದೆ ತುಂಬಿ ಹಾಡಿದೆನು.

**34. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?**

**ಉತ್ತರ :** ಹಕ್ಕಿಯು ಎವೆ ತೆರೆದಿಕ್ಕುವ ಹೊತ್ತಿನೊಳಗೆ ಸಮಯದಲ್ಲಿ ಗಾವುದಗಾವುದ ಮುಂದೆ ಹಾರುತ್ತಿದೆ.

**35. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?**

**ಉತ್ತರ :** ಹಕ್ಕಿಯ ಗರಿಯಲ್ಲಿ ಕರಿ, ಬಿಳಿ, ಕೆಂಪು, ಹೊನ್ನಿನ ಹೊಳೆಯುವ ಬಣ್ಣಗಳಿವೆ.

**36. ಹಕ್ಕಿಯ ಕಣ್ಣುಗಳು ಯಾವುವು?**

**ಉತ್ತರ :** ಸೂರ್ಯಚಂದ್ರರೇ ಹಕ್ಕಿಯ ಕಣುಗ್ಣಳು.

37. **ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**

ಉತ್ತರ :ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

38. **ಹಕ್ಕಿ ಯಾರನ್ನು ಹರಸಿದೆ?**

ಉತ್ತರ :ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

39. **ಹಕ್ಕಿಯು ಯಾವುದರ ಸಂಕೇತವಾಗಿದೆ ?**

ಉತ್ತರ : ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

40. **ಹಕ್ಕಿಯ ಚುಂಚಗಳು ಎಲ್ಲಿಯವರೆ ಗೂಚಾಚಿವೆ ?**

ಉತ್ತರ : ಹಕ್ಕಿಯ ಚುಂಚಗಳು ದಿಗ್ಮಂಡಲಗಳ ಆಚೆ ಚಾಚಿವೆ.

41. **ಹಕ್ಕಿಯು ಯಾವುದರ ಮೇರೆ ಮೀರಿದೆ ?**

ಉತ್ತರ : ಬೆಳ್ಳಿಯ ಹಳ್ಳಿಯ ಮೇರೆಯ ಮೀರಿದೆ.

42. **ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?**

ಉತ್ತರ : ಕೃಷ್ಣನು ಕರ್ಣನ ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ ಪೀಠದಲ್ಲಿ ಕೂರಿಸಿದನು.

43. **ಕುಮಾರವ್ಯಾಸನ ಆರಾಧ್ಯದೈವ ಯಾರು?**

ಉತ್ತರ : ಕುಮಾರವ್ಯಾಸನ ಆರಾಧ್ಯದೈವ ಗದುಗಿನ ವೀರನಾರಾಯಣ.

44. **ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?**

ಉತ್ತರ : ಅಶ್ವಿನೀ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

45. **ಕುಮಾರವ್ಯಾಸನಿಗಿರುವ ಬಿರುದು ಯಾವುದು?**

ಉತ್ತರ : ಕುಮಾರವ್ಯಾಸನಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದು ಇದೆ.

46. **ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು?**

ಉತ್ತರ : ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕರ್ನಾಟ ಭಾರತ ಕಥಾಮಂಜರಿ ಎಂದು ಕನ್ನಡದಲ್ಲಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿತು.

47. **ನಿಮಗೆ ನಮಸ್ಕರಿಸಿ ಹೋಗಲು ಬಂದನೆಂದು ದುರ್ಯೋಧನ ಯಾರಿಗೆ ಹೇಳುವನು?**

ಉತ್ತರ : ನಿಮಗೆ ನಮಸ್ಕರಿಸಿ ಹೋಗಲು ಬಂದೆನೆಂದು ದುರ್ಯೋಧನ ಭೀಷ್ಮರಿಗೆ ಹೇಳುವನು.

48. **ದಿನಪಸುತ ಎಂದರೆ ಯಾರು?**

ಉತ್ತರ : ದಿನಪಸುತ ಎಂದರೆ ಕರ್ಣ.

49. **ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?**

ಉತ್ತರ : ಅರ್ಜುನ ಮತ್ತು ಭೀಮ ಇವರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

50. **ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?**

ಉತ್ತರ : ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.

51. **ಅಂತಕಾತ್ಮಜ ಎಂದರೆ ಯಾರು?**

ಉತ್ತರ : ಅಂತಕಾತ್ಮಜ ಎಂದರೆ ಧರ್ಮರಾಯ.

52. **ಪಾಂಡವರನ್ನು ಸಂಧಿಗೆ ಒಪ್ಪಿಸುವುದಾಗಿ ದುರ್ಯೋಧನನಿಗೆ ಹೇಳಿದವರು ಯಾರು ?**

ಉತ್ತರ : ಪಾಂಡವರನ್ನು ಸಂಧಿಗೆ ಒಪ್ಪಿಸುವುದಾಗಿ ದುರ್ಯೋಧನನಿಗೆ ಹೇಳಿದವರು ಭೀಷ್ಮ.

53. **ದುರ್ಯೋಧನ ಧರ್ಮರಾಜನೊಂದಿಗೆ ಯಾವಾಗ ಸಂಧಿಗೆ ಸಿದ್ದವೆಂದು ತಿಳಿಸಿದ ?**

ಉತ್ತರ : ದುರ್ಯೋಧನ ಧರ್ಮರಾಜನೊಂದಿಗೆ ಪಾರ್ಥಭೀಮರನ್ನು ಕೊಂದ ಬಳಿಕ ಸಂಧಿಗೆ ಸಿದ್ದವೆಂದು ತಿಳಿಸಿದ

54. **ನೆಲಕ್ಕಾಗಿ ಹೋರಾಡುತ್ತಿಲ್ಲವೆಂದು ಹೇಳಿದವರು ಯಾರು ?**

ಉತ್ತರ : ನೆಲಕ್ಕಾಗಿ ಹೋರಾಡುತ್ತಿಲ್ಲವೆಂದು ಹೇಳಿದವರು ದುರ್ಯೋಧನ.

55. **ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?**

ಉತ್ತರ : ಪುಟ್ಟ ಪೋರಿ ಹೊರಗೆ ಮುಸುರೆ ತಿಕ್ಕುತ್ತಿದ್ದಾಳೆ.

**56. ಅಮ್ಮ ಎಲ್ಲಿ ಮಲಗಿದ್ದಾಳೆ?**

**ಉತ್ತರ:** ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.

**57. ಯಾರಿಗೆ ವಸಂತ ಮುಖ ತೋರಲಿಲ್ಲ?**

**ಉತ್ತರ :** ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

**58. ಗುಡಿಸಲೊಳಗೆ ಬರಲು ಹೆದರಿದವರು ಯಾರು?**

**ಉತ್ತರ :** ಕತ್ತಲೆಗವ್ವೆನ್ನುವ ಗುಡಿಸಲೊಳಗೆ ವಸಂತ ಬರಲು ಹೆದರಿದನು.

**59. ಬಾಲರವಿ ಎಲ್ಲಿ ಸೊರಗಿದ್ದಾನೆ?**

**ಉತ್ತರ :** ಬಾಲರವಿ ತೂತು ಬಿದ್ದ ಅಮ್ಮನ ಸೀರೆಯಲ್ಲಿ ಸೊರಗಿದ್ದಾನೆ.

**60. ಪುಟ್ಟಿ ಏಕೆ ಮೂಕವಿಸ್ಮಿತಳಾಗಿದ್ದಾಳೆ ?**

**ಉತ್ತರ :** ಹೊಳೆವ ರಂಗೋಲಿಯಲಿ ಥಳಥಳಿಸುವ ಬಾಲರವಿಯ ಕಂಡು ಮೂಕವಿಸ್ಮಿತಳಾಗಿದ್ದಾಳೆ.

**61. ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?**

**ಉತ್ತರ:** ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ 1919ರ ಏಪ್ರಿಲ್ 13 ರಂದು ನಡೆಯಿತು.

**62. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?**

**ಉತ್ತರ:** ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರು ಜನರಲ್ ಡಯರ್

**63. ಅಂಬೇಡ್ಕರ್ ಹೇಳುವಂತೆ ಮೂಲಭೂತವಾದ ಸ್ವಾತಂತ್ರ್ಯ ಯಾವುದು?**

**ಉತ್ತರ:** ಅಂಬೇಡ್ಕರ್ ಹೇಳುವಂತೆ ಮೂಲಭೂತವಾದ ಸ್ವಾತಂತ್ರ್ಯ ಪೌರ ಸ್ವಾತಂತ್ರ್ಯ

**64. ರಸ್ಕಿನ್‌ನ ಯಾವ ಕೃತಿಯು ಗಾಂಧೀಜಿಯವರ ಮೇಲೆ ಪರಿಣಾಮ ಬೀರಿತು?**

**ಉತ್ತರ:** ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಕೃತಿಯು ಗಾಂಧೀಜಿಯವರ ಮೇಲೆ ಪರಿಣಾಮ ಬೀರಿತು.

**65. ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಗಾಂಧೀಜಿ ಗುಜರಾತಿ ಭಾಷೆಗೆ ಯಾವ ಹೆಸರಿನಲ್ಲಿ ಅನುವಾದಿಸಿದರು?**

**ಉತ್ತರ:** ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಗಾಂಧೀಜಿ ಗುಜರಾತಿ ಭಾಷೆಗೆ ಸರ್ವೋದಯವೆಂಬ ಹೆಸರಿನಲ್ಲಿ ಅನುವಾದಿಸಿದರು.

**66. ಯಾವ ಸಂದೇಶವನ್ನು ಸಾರುವ ಮೂಲಕ ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕೆಂದು ವಿವೇಕಾನಂದರು ಹೇಳುತ್ತಾರೆ?**

**ಉತ್ತರ:** ವೇದಾಂತದ ಸಂದೇಶವನ್ನು ಸಾರುವ ಮೂಲಕ ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸ ಬೇಕೆಂದು ವಿವೇಕಾನಂದರು ಹೇಳುತ್ತಾರೆ.

## 2–3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

**1. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?**

ಉತ್ತರ: ವ್ಯಾವಹಾರಿಕವೆಂದರೆ ಜೀವದ್ಭಾಷೆ, ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ, ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದಕ್ಕೆ ಉದಾಹರಣೆ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ.

ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದ್ದು, ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ

**2. ಲಿಪಿಯ ಜಾಡು ಆರಂಭಗೊಂಡ ಬಗೆ ಹೇಗೆ ?**

ಉತ್ತರ: ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು. ಯಾವ ಓದು ಬರೆಹವಿಲ್ಲದ ಹಳ್ಳಿಯ ಕೆಲಸಗಾರನಾದರೂ ಸರಿಯೆ, ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಎಣಿಸಿ ಲೆಕ್ಕಹಾಕಿ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರೂ ಹೀಗೆಯೇ ಲೆಕ್ಕವಿಡುವುದುಂಟು. ಈ ರೀತಿಯಾಗಿ ಲಿಪಿಯ ಜಾಡು ಆರಂಭಗೊಂಡಿತು.

3. **ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು ?**

**ಉತ್ತರ:** ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು, ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡಿರಬೇಕು. ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆದಿರಬೇಕು. ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಮೂಲಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಆ ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಆ ಮೂಲಕ ಜ್ಞಾನ ಭಂಡಾರ ಭದ್ರವಾಯಿತು.

4. **ಕನ್ನಡ ಭಾಷೆ ಹದಗೊಂಡದ್ದು ಹೇಗೆ** ?

**ಉತ್ತರ:** ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

5. **ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು** ?

**ಉತ್ತರ:** ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ವಿಶ್ವವ್ಯಾಪಿಯಾಯಿತು.

6. **ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

**ಉತ್ತರ** : ಒಂದು ದಿನ ಖಜಾನೆಗೆ ಹಣಕಟ್ಟಲು ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಹೋಗಿರುತ್ತಾರೆ. ಹಣ ಕಟ್ಟಿ, ಸ್ನೇಹಿತರನ್ನು ಮಾತನಾಡಿಸಿಕೊಂಡು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಕಾಡುದಾರಿ ಬೆಳದಿಂಗಳ ದಿನ **"ಸ್ವಲ್ಪ ದೊಡ್ಡದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು"** ಎಂದು ಶಾನುಭೋಗರು ಯೋಚಿಸುತ್ತಾ ಬೇಗ ಬೇಗ ನಡೆದರು.

7. **ಹುಲಿಯು ಹಿಂದಿನಿಂದ ಹಾರಿಕೊಲ್ಲದಿರಲು ಕಾರಣಗಳೇನು?**

**ಉತ್ತರ** : ಭರತಖಂಡದ ಹುಲಿಗಳ ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ.

8. **ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

**ಉತ್ತರ** : ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು; ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದು ಕೊಂಡು ತಮ್ಮ ಹಳ್ಳಿಗೆ ಹಿಂದಿರುಗಿ ಬರುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳು ಕಣಿ ಹಾಕಿಕೊಂಡು ನಿಂತವು. ಅತ್ತ ಎತ್ತುಗಳ ಘಂಟೆಯ ಶಬ್ದ ಮತ್ತು ರೈತರ ಮಾತು ಕೇಳಿ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಸ್ವಲ್ಪ ಹೊತ್ತುಗಾಡಿಯ ಬಳಿಯಲ್ಲೇ ನಿಂತು ನೋಡಿದರು. ಮತ್ತೆ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಕೊಂಡು ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನುಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

9. **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

**ಉತ್ತರ** : ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ , ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

10. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?

**ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1900ರಲ್ಲಿ ಶಿವನಸಮುದ್ರದ ಬಳಿ ಕಾವೇರಿ ನದಿ ನೀರಿನಿಂದ ಪ್ರಾರಂಭಿಸಿದ ಶಿವನಸಮುದ್ರ ಜಲವಿದ್ಯುತ್ ಯೋಜನೆ, 1907ರಲ್ಲಿ ವಾಣಿ ವಿಲಾಸ ಸಾಗರಆಣೆಕಟ್ಟು (ಮಾರಿಕಣಿವೆ) ಮತ್ತು 1911ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ

ಕನ್ನಾಂಬಾಡಿಯಲ್ಲಿ ಕೃಷ್ಣರಾಜ ಸಾಗರ ಆಣೆಕಟ್ಟು ನಿರ್ಮಾಣ ಮುಂತಾದ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು.

11. **ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

**ಉತ್ತರ :** ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು **"ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ, ಶಿಕ್ಷಣವು ಸಂಜೀವಿನಿ, ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"** ಎಂದು ಹೇಳಿದ್ದಾರೆ.

12. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯಅವರ ಬಗ್ಗೆ ಏನೆಂದು ಹೇಳಿದ್ದಾರೆ?

**ಉತ್ತರ** : ನೆಹರೂಅವರು ಸರ್.ಎಂ. ವಿಶ್ವೇಶ್ವರಯ್ಯಅವರ ಬಗ್ಗೆ **"ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ"**. ಎಂದು ಹೇಳಿದ್ದಾರೆ.

13. **ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

**ಉತ್ತರ :** ವಿಶ್ವೇಶ್ವರಯ್ಯನವರು ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಲು **1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವ ವಿಮಾಯೋಜನೆ ಜಾರಿಗೆ ತಂದರು.** ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆಗೊಳಿಸಿದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡು ಕೊಂಡರು.

14. **ವಿಶ್ವೇಶ್ವರಯ್ಯನವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಏನು?**

**ಉತ್ತರ** : ವಿಶ್ವೇಶ್ವರಯ್ಯನವರು **'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ', 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯ'** ಹಾಗೂ **'ಮೆಮೋರೀಸ್ ಆಫ್ ಮೈ ವರ್ಕಿಂಗ್ ಲೈಫ್** (ಆತ್ಮಚರಿತ್ರೆ)**'**, 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಕೃತಿಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ.

15. **ವಿಶ್ವೇಶ್ವರಯ್ಯನವರು ಹೈದರ್‌ಬಾದ್ ನಗರಕ್ಕೆ ಸಲ್ಲಿಸಿದ ಸೇವೆ ಏನು?**

**ಉತ್ತರ** : ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

16. **ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?**

**ಉತ್ತರ :** ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಇರುವ ಎಲ್ಲಾ ಜೀವಗಳಲ್ಲೂ ಕಂಪನ ಉಂಟು ಮಾಡುತ್ತದೆ. ಈ ಅನುಕಂಪನ ಇಡೀ ಜೀವ ಸಂಕುಲವೆಲ್ಲ ಒಂದೇ ಎಂದು ಹೇಳುತ್ತದೆ ಎಂಬುದು ಅಶೋಕ ಪೈಯವರ ಸಂಶೋಧನಾ ಸತ್ಯದ ತಿರುಳು.

17. **ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

**ಉತ್ತರ :** ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

18. **ವಚನಕಾರರ ಪ್ರಜ್ಞೆಯ ಬಗ್ಗೆ ದೇವನೂರು ಮಹಾದೇವರ ಅಭಿಪ್ರಾಯವೇನು?**

**ಉತ್ತರ:** ವಚನಕಾರರು ನಮ್ಮ ಸುತ್ತಮುತ್ತ ರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಆದ ಇಷ್ಟದೈವ ಇದ್ದಿತು. ಅದೇ ಪ್ರಜ್ಞೆ, ಅಂದರೆ **"ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."** ಅವರು ತಮ್ಮ ಕಷ್ಟ ಸುಖ, ದುಃಖ ದುಮ್ಮಾನ, ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳಿತ್ತಾ ಒದ್ದಾಡುತ್ತಿದ್ದರೆಂದು ಕಾಣುತ್ತದೆ. ಈ ಒದ್ದಾಟಕ್ಕೆ ಅವರು ನುಡಿಕೊಟ್ಟರು.

19. **ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**

**ಉತ್ತರ :** ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಅತ್ಯಂತ ಎಚ್ಚರದಿಂದ ಜ್ಞಾನದೀವಿಗೆಯ ಮೂಲಕ ಬದುಕೆಂಬ ಹಡಗನ್ನು ಮುನ್ನಡೆಸಬೇಕಿದೆ.

20. **ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

**ಉತ್ತರ :** ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚ ಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ. ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ. ಆ ಮೂಲಕ ಬರಡಾಗಿರುವಲ್ಲಿ ಧನಾತ್ಮಕ ಭಾವನೆ, ಆತ್ಮವಿಶ್ವಾಸ, ದೃಢಸಂಕಲ್ಪಗಳಿಂದ ಸಮೃದ್ಧಿ ಮೂಡಲಿ ಎಂಬುದು ಕವಿಯ ಆಶಯವಾಗಿದೆ.

21. **ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ** ?

**ಉತ್ತರ :** ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ ಎಂದು ಕವಿ ಹೇಳಿದ್ದಾರೆ.

22. **ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು** ?

**ಉತ್ತರ :** ಎಲ್ಲ ಮತಧರ್ಮಗಳೂ ಒಂದೊಂದು ಮಾರ್ಗಗಳಾಗಿದ್ದು, ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಪರಸ್ಪರರಲ್ಲಿ ಮೂಡಿರುವ ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತಾ ಬದುಕು ನಡೆಸಬೇಕು.

23. **ಹಕ್ಕಿಯ ಹಾರಾಟವನ್ನುಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ** ?

**ಉತ್ತರ :** ತರತಮ ರಹಿತ ಸಮದೃಷ್ಟಿಯಿಂದ ಕೂಡಿದ ನೀಲ ಮೇಘ ಮಂಡಲ – ಸಮ ಬಣ್ಣದಲ್ಲಿ ಹಕ್ಕಿಯು ಕಾಲದ ದೈತ್ಯತೆಯನ್ನು ಸಂಕೇತಿಸುವ ಹಾಗೆ ಮುಗಿಲಿಗೆ ರೆಕ್ಕೆಗಳನ್ನು ಮೂಡಿಸುತ್ತಾ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿದೆ ಎಂದು ಕವಿ ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

24. **ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ** ?

**ಉತ್ತರ :** ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗು ಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಭಾಗ್ಯಗಳಿಗೆ ಕಾರಣವಾಗಿದೆ. ಹಕ್ಕಿಯುತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸುತ್ತಾ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆಎಂದು ಕವಿ ಬೇಂದ್ರೆ ಹೇಳಿದ್ದಾರೆ.

25. **ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ** ?

**ಉತ್ತರ :** ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರ ಗ್ರಹವನ್ನು ಹಳ್ಳಿಗೆ ಹೋಲಿಸಿ, ಕಾಲದ ಹಕ್ಕಿ ಆ ಹಳ್ಳಿಯ (ಶುಕ್ರಗ್ರಹದ) ಮೇರೆಯನ್ನು ದಾಟಿ ಹಾರಿ ಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಕಾಲವೆಂಬ ಹಕ್ಕಿಯು ಮಾನವ ರೂಪದಲ್ಲಿ ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ ಎಂದು ಕವಿ ಬೇಂದ್ರೆ ವರ್ಣಿಸಿದ್ದಾರೆ.

26. **ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು**?

**ಉತ್ತರ :** ಕೃಷ್ಣನು **"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ"** ಎಂದು ಹೇಳುತ ಕರ್ಣನ ಕಿವಿಯಲ್ಲಿ ಭಯವನ್ನು ಭಿತ್ತಿದನು.

27. **ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು**?

**ಉತ್ತರ :** ಕುಂತಿಯು **ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು** ಪಡೆದಳು. **ಮಾದ್ರಿಯು ಅಶ್ವಿನೀ ದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು** ಪಡೆದಳು.

28. **ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು** ?

**ಉತ್ತರ :** ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ಹೆಚ್ಚಾಗಿ ಬಹಳವಾಗಿ ನೊಂದುಕೊಳ್ಳುತ್ತಾ ಕರ್ಣನು ದುಃಖಿತನಾಗಿ ಮನಸ್ಸಿನಲ್ಲಿಯೇ **"ಅಯ್ಯೋ, ದುರ್ಯೋಧನನಿಗೆ ಕೇಡಾಯಿತು"** ಎಂದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ; ಸುಮ್ಮನೆ ಹೋಗುವುದೇ?, **ಕೃಷ್ಣನು ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು"** ಎಂದು ಮನದಲ್ಲಿ ನೊಂದುಕೊಂಡನು.

29. **ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು**?

**ಉತ್ತರ :** ಕರ್ಣನು ಕೃಷ್ಣನಿಗೆ **"ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ "**ಎಂದನು.

30. **ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು** ?

**ಉತ್ತರ :** ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಭಾರತ ಯುದ್ಧದಲ್ಲಿ ಮೃತ್ಯು ದೇವತೆಗೆ ಔತಣಕೂಟ ಏರ್ಪಡಿಸುತ್ತೇನೆ. ನಾನು ಕೌರವನ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು

ವೀರಯೋಧರ ಕೊಲ್ಲುತ್ತಾ, ಅಗತ್ಯ ಬಂದರೆ ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

31. **ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?**

**ಉತ್ತರ:** ದುರ್ಯೋಧನನು ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ಹೋರಾಡುತ್ತಿಲ್ಲ, ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೆ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ" ಎಂದು ಹೇಳುತ್ತಾನೆ.

32. **ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ ?**

**ಉತ್ತರ :** ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. ಅವನು "ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವುದಿಲ್ಲ" ಎನ್ನುತ್ತಾನೆ.

33. **ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

**ಉತ್ತರ:** "ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ" ಎಂಬುದು ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

34. **'ವಸಂತ ಮುಖ ತೋರಲಿಲ್ಲ' ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ :** ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತಹ ಸಂಭ್ರಮ ಈ ಕವನದಲ್ಲಿ ವ್ಯಕ್ತವಾಗಿದೆ.

35. **'ವಸಂತ ಮುಖ ತೋರಲಿಲ್ಲ' ಕವನದ ಆಶಯವೇನು ?**

**ಉತ್ತರ : ಮಹಿಳಾ ಶೋಷಣೆಂಬುದು ಬ್ರೂಣದಿಂದಲೇ** ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನ್ನೂ ಆಕ್ರಮಿಸಿಕೊಂಡಿದೆ. ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ. ಸಾಮಾಜಿಕ ನ್ಯಾಯದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬ ಆಶಯ ಹೊಂದಿದೆ.

36. **'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟಿಯ ಪ್ರಶ್ನೆಗಳೇನು ?**

**ಉತ್ತರ :** ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ ? ಎಂಬುವು ಪುಟ್ಟಿಯ ಪ್ರಶ್ನೆಗಳಾಗಿವೆ.

37. **ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ ಹೇಳಿದ್ದೇನು?**

**ಉತ್ತರ:** ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ ' ಇದು ಬಹಳ ಪೂಜ್ಯನೀಯವಾದ ಮಣ್ಣು, ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ ' ಎಂದು ಮಣ್ಣನ್ನು ತೋರಿಸುತ್ತಾ ಹೇಳಿದನು.

38. **ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**

**ಉತ್ತರ:** ಜಲಿಯನ್ ವಾಲಾಬಾಗ್‌ನ ಮಾರಣ ಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. 1921ರಲ್ಲಿ ಒಂದು ನಿರ್ಧಾರಕ್ಕೆ ಬಂದ ಭಗತ್‌ಸಿಂಗ್, ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನಾದರೂ ಮಾಡಿಯೇ ತೀರುತ್ತೇನೆಂದು ನಿರ್ಧರಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ.

39. **ಕ್ರಿಯಾ ಸ್ವಾತಂತ್ರ್ಯ ಎಂದರೇನು?**

**ಉತ್ತರ:** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ಅದು ಜಾರಿಯಲ್ಲಿರಬೇಕು ಹಾಗೂ ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅದೇ ನಿಜವಾದ ಕ್ರಿಯಾ ಸ್ವಾತಂತ್ರ್ಯ.

40. **ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**

**ಉತ್ತರ:** ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ

ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲ ಎಂದು ಇದರ ಅರ್ಥವಾಗುತ್ತದೆ.

41. **ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

**ಉತ್ತರ:** ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತ ಗಾಂಧೀಜಿ ತನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದರು. ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರು ಹೇಳಿದ್ದಾರೆ.

42. **'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**

**ಉತ್ತರ:** ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಗಾಂಧೀಜಿಯವರಿಗೆ ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿದರು. ಅವರ ಬಾಳಿನಲ್ಲಿ ತಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು.

43. **ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

**ಉತ್ತರ:** ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಅದರೊಂದಿಗೆ ಅವರಿಗೆ ಮತ್ತೊಂದು ಆವಶ್ಯಕತೆಯಾದ ಸಂಸ್ಕೃತಿ ನೀಡಬೇಕಾಗುತ್ತದೆ. ಜನರಿಗೆ ಶಿಕ್ಷಣ ಮತ್ತು ಸಂಸ್ಕೃತಿ ಎರಡನ್ನೂ ನೀಡಿದಾಗ ಜನರ ಹಾಗೂ ದೇಶದ ಪ್ರಗತಿ ಸ್ಥಿರವಾಗುವುದು.

44. **ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

**ಉತ್ತರ:** ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ನಿಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ಇರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

## ಭಾಗ – ೨

### ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. **ರಾಹಿಲನು ಯಾರು?**

**ಉತ್ತರ :** ರಾಹಿಲನು ಒಬ್ಬ ಸೈನಿಕ ವೈದ್ಯ.

1. **ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**

**ಉತ್ತರ:** ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ **ಔಷಧ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು** ಭದ್ರವಾಗಿ ಹಿಡಿದುಕೊಂಡಿದ್ದನು.

2. **ಗಡಿ ಪ್ರದೇಶಗಳಲ್ಲಿ 'ಬ್ಲಾಕ್‌ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**

ಉತ್ತರ : ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್‌ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

3. **ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?**

**ಉತ್ತರ :** ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ, ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು.

4. **ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?**

**ಉತ್ತರ :** "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ" ಎಂದು ಗೊಣಗಿಕೊಂಡು ಬಾಗಿಲು ತೆರೆದಳು.

5. **ಬ್ಲಾಕ್ ಔಟ್ ನಿಯಮ ಎಂದರೇನು?**

**ಉತ್ತರ** : ಯುದ್ಧ ಕಾಲದಲ್ಲಿ ರಾತ್ರಿ ವೇಳೆ ಶತ್ರು ಸೈನಿಕರು ವೈಮಾನಿಕ ದಾಳಿಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದನ್ನು 'ಬ್ಲಾಕ್‌ಔಟ್ ನಿಯಮ' ಎಂದು ಕರೆಯಲಾಗುತ್ತದೆ.

6. **ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಏಕೆ ಕೆರಳಿದವು?**

**ಉತ್ತರ** : ತಮ್ಮ ಮನೆಗೆ ಬಂದಿರುವಾತ ತಮ್ಮವನಲ್ಲ, ತಮಗೆ, ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಕೆರಳಿದವು.

7. **ರಾಹಿಲನು ಮುದುಕಿಗೆ ಏನೆಂದು ಅಂಗಲಾಚಿದನು?**

**ಉತ್ತರ** : ರಾಹಿಲನು ಹೆಂಗಸಿಗೆ **"ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ. ಪ್ಲೀಸ್"** ಎಂದು ಅಂಗಲಾಚಿದನು.

8. **ಯಾರ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆ ಯಾಕೆಆಗುತ್ತದೆ?**

**ಉತ್ತರ** : ಯುದ್ಧದ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆ ಆಗುತ್ತದೆ.

9. **ಮುದುಕಿ ತನ್ನ ಮಗ ಎಲ್ಲಿಗೆ ಹೋಗಿದ್ದಾನೆಂದು ರಾಹಿಲನಿಗೆ ತಿಳಿಸಿದಳು?**

**ಉತ್ತರ** : ಮುದುಕಿ ತನ್ನ ಮಗ ಯುದ್ಧಕ್ಕೆ ಹೋಗಿದ್ದಾನೆಂದು ರಾಹಿಲನಿಗೆ ತಿಳಿಸಿದಳು.

10. **ಭೂಮಿಜಾತೆ ಎಂದರೆ ಯಾರು?**

**ಉತ್ತರ** : ಭೂಮಿಜಾತೆ ಎಂದರೆ ಸೀತೆ.

11. **ಶ್ರೀರಾಮನ ತಂದೆಯ ಹೆಸರೇನು?**

**ಉತ್ತರ:** ಶ್ರೀ ರಾಮನತಂದೆಯ ಹೆಸರುದಶರಥ.

12. **ಶ್ರೀರಾಮನಿಗೆ ಸಮರ್ಪಿಸಲು ಶಬರಿಏನನ್ನು ಸಂಗ್ರಹಿಸಿದ್ದಳು?**

**ಉತ್ತರ** : ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಹೂವು, ಹಣ್ಣು ಮತ್ತು ಮಧುಪರ್ಕವನ್ನು ಸಂಗ್ರಹಿಸಿದ್ದಳು.

13. **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**

**ಉತ್ತರ:** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

14. **ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**

**ಉತ್ತರ** : ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು ಮಹರ್ಷಿ.

15. **'ಶಬರಿ' ಗೀತನಾಟಕದ ಕರ್ತೃ ಯಾರು?**

**ಉತ್ತರ:** ಶಬರಿ ಗೀತನಾಟಕದ ಕರ್ತೃ ಪು.ತಿ. ನರಸಿಂಹಾಚಾರ್ಯರು.

16. **ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?**

**ಉತ್ತರ** : ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು 'ವೂಲವರ್ಥ'

17. **ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?**

**ಉತ್ತರ** : ನೆಲ್ಸನ್ ಮೂರ್ತಿಇರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್'.

18. **'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?**

**ಉತ್ತರ** : 'ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ.

19. **ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?**

**ಉತ್ತರ** : ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್ ಕ್ರಾಸ್'.

20. **ಆಂಗ್ಲರ ಕೀರ್ತಿಧ್ವಜವನ್ನು ನಿಲಿಸ್ಲಿದವರು ಯಾರು?**

**ಉತ್ತರ** : ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದವರು ಅಲ್ಲಿಯ ಚತುರ ರಾಜಕಾರಿಣಿಗಳು.

21. **ಕಲ್ಲುಪಾಟಿಯನ್ನು 3ನೇ ಎಡ್ವರ್ಡನು ಯಾವ ಅರಸರಿಂದ ಕಿತ್ತುಕೊಂಡು ಬಂದನು?**

**ಉತ್ತರ** : ಕಲ್ಲುಪಾಟಿಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದನು.

22. **ಇಂದಿಗೂ ಕಬ್ಬಿಗರ ಸ್ಫೂರ್ತಿಯೆಂದು ಮನೆಯಾಗಿರುವುದು ಯಾವುದು?**

**ಉತ್ತರ** : ಇಂದಿಗೂ ಕಬ್ಬಿಗರ ಸ್ಫೂರ್ತಿಯಂತೆ ಮನೆಯಾಗಿರುವುದು ವೆಸ್ಟ್ ಮಿನ್‌ಸ್ಟರ್ ಅಬೆ ಎಂಬ ಪ್ರಾರ್ಥನಾ ಮಂದಿರ.

23. **ಕೌಸಂಬಿಯ ಅರಸ ಯಾರು?**

**ಉತ್ತರ:** ಕೌಸಂಬಿಯ ಅರಸ ಅತಿಬಲ.

24. **ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?**

**ಉತ್ತರ:** ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ವಾಯುಭೂತಿ.

25. **ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**

**ಉತ್ತರ:** ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಸೋದರನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

26. **ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?**

**ಉತ್ತರ:** ಸಲುಗೆಯಿಂದ ಕೆಡಬಾರದೆಂದು ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಅಗ್ನಿಭೂತಿ ವಾಯುಭೂತಿಯರಿಗೆ ಹೇಳಿದನು.

27. **ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?**

**ಉತ್ತರ:** ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಮಂತ್ರಿಪದವಿ.

28. **ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?**

**ಉತ್ತರ** : ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಎದೆಯ ಹಸುರಿನಂತಿದೆ

**29. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?**

**ಉತ್ತರ :** ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ.

**30. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?**

**ಉತ್ತರ :** 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

**31. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?**

**ಉತ್ತರ :** ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆ ಯಜಮಖಾನೆಯ ರೀತಿ ಕಂಡಿದೆ.

**32. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಸ್ಥಳ ಯಾವುದು ?**

**ಉತ್ತರ :** ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಸ್ಥಳ ಮಲೆನಾಡಿನ ಕುಪ್ಪಳಿಯ ಕವಿಶೈಲ.

**33. ಹಕ್ಕಿಯ ಕೊರಲಿಂಪು ಕುವೆಂಪುರವರಿಗೆ ಹೇಗೆ ಗೋಚರಿಸಿತು ?**

**ಉತ್ತರ :** ಹಕ್ಕಿಯ ಕೊರಲಿಂಪು ಕುವೆಂಪುರವರಿಗೆ ಹಸುರಾಗಿ ಗೋಚರಿಸಿತು.

**34. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?**

**ಉತ್ತರ:** ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು.

**35. ಹಲಗಲಿಯ ನಾಲ್ವರು ಪ್ರಮುಖರುಯಾರು ?**

**ಉತ್ತರ:** ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.

**36. ಹಲಗಲಿ ಗುರುತು ಉಳಿಯದಂತಾದುದು ಏಕೆ ?**

**ಉತ್ತರ:** ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.

**37. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?**

**ಉತ್ತರ :** ಹಲಗಲಿಯ ಬೇಡರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.

**38. ಹಲಗಲಿ ಗ್ರಾಮಎಲ್ಲಿದೆ ?**

**ಉತ್ತರ :** ಹಲಗಲಿ ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

**39. ಚಟೆಕಾರರು ಎಂದರೆ ಯಾರು ?**

**ಉತ್ತರ :** ಚಟೆಕಾರರು ಎಂದರೆ ಆಂಗ್ಲೋ ಇಂಡಿಯನ್ನರು.

**40. ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು ?**

**ಉತ್ತರ :** ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.

**41. ಯಜ್ಞಾಶ್ವವನ್ನು ಕಟ್ಟಿದವರು ಯಾರು?**

**ಉತ್ತರ :** ಯಜ್ಞಾಶ್ವವನ್ನು ಕಟ್ಟಿದವರು ಲವ.

**42. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?**

**ಉತ್ತರ :** ಕುದುರೆಯನ್ನು ಲವನು ತಾನು ತೊಟ್ಟಿದ್ದ ಉತ್ತರೀಯದಿಂದ ಕಟ್ಟಿದನು.

**43. ಕುದುರೆಯನ್ನು ಲವನು ಯಾವುದಕ್ಕೆ ಕಟ್ಟಿದನು ?**

**ಉತ್ತರ :** ಕುದುರೆಯನ್ನು ಲವನು ತಾನುತೊಟ್ಟಿದ್ದ ಉತ್ತರೀಯದಿಂದ ಕದಳಿ ದ್ರುಮಕ್ಕೆ ಕಟ್ಟಿದನು.

**44. ಮುನಿಸುತರು ಹೆದರಲು ಕಾರಣವೇನು ?**

**ಉತ್ತರ :** ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

**45. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?**

**ಉತ್ತರ :**ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು ( ಸಂಪತ್ತು ) ಬೇಡುವುದಕ್ಕಾಗಿ ಬಂದನು.

**46. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?**

**ಉತ್ತರ :** ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.

**47. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?**

**ಉತ್ತರ :** ಪರಶುರಾಮನು ದ್ರೋಣನಿಗೆ ವರುಣ, ವಾಯುವ್ಯ, ಆಗ್ನೇಯ, ಐಂದ್ರಾದಿ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.

**48. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು?**

**ಉತ್ತರ :** ದ್ರುಪದನು ಪಡಿಯರನಿಗೆ " ಅಂತಹವನನ್ನು ನಾನು ತಿಳಿದಿಲ್ಲ; ಅವನನ್ನು ಹೊರಕ್ಕೆ ತಳ್ಳು" ಎಂದು ಹೇಳಿ ಕಳುಹಿಸಿದನು.

**49. ಕುಂಭಸಂಭವನೆಂದರೆ ಯಾರು ?**

**ಉತ್ತರ :** ಕುಂಭಸಂಭವನೆಂದರೆ ದ್ರೋಣ.

**50. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ?**

ಉತ್ತರ: ಅಕ್ಕಮಹಾದೇವಿಯ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ

**51. ಅಕ್ಕಮಹಾದೇವಿಯು ಯಾವುದನ್ನು ಹಾನಿ ಎಂದಿದ್ದಾಳೆ ?**

ಉತ್ತರ: ಅಕ್ಕಮಹಾದೇವಿಯು ನಾನು ಹಿಂದೆ ಮಾಡಿದ ಕೆಡುಕುಗಳೆಲ್ಲವನ್ನು ತಂದು ಮುಂದಿಟ್ಟರೆ ಅದರಿಂದ ನಿಮಗೇ ಹಾನಿ ಎಂದಿದ್ದಾರೆ.

**52. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು ?**

ಉತ್ತರ: ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ ಆಗುತ್ತದೆ.

**53. ಪೈಗಳೂ ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**

**ಉತ್ತರ:** ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರು – ಮಕರಾಕ್ಷಸನ ಕಾಳಗ.

**54. 'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಯಾರು?**

**ಉತ್ತರ:** ಬಿಲ್ಲಹಬ್ಬವನ್ನು ರಚಿಸಿದ ಕವಿ ಮೂಲ್ಕಿ ವಾಸುದೇವ ಪ್ರಭು.

**55. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು?**

**ಉತ್ತರ:** ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು 'ಸುಭದ್ರಾ ವಿಲಾಪ' ನಂತರ 'ಕಾಲಿಯ ಮರ್ದನ' ಕೃತಿಗಳನ್ನು ರಚಿಸಿದರು.

**56. ಯಾರಿಗೆ ಗುರುವಾಣಿ ಹೊರೆಯೆನಿಸುತ್ತದೆ ?**

**ಉತ್ತರ:** ಮೂರ್ಖನ ಕಿವಿಗೆ ಗುರುವಾಣಿ ಹೊರೆಯೆನಿಸುತ್ತದೆ.

**57. ಯಾರ ಕಿವಿಗೆ ಉಪದೇಶ ನಾಟವುದಿಲ್ಲ ?**

**ಉತ್ತರ:** ರಾಜರ ಮನೆತನದಲ್ಲಿ ಹುಟ್ಟಿ, ಅಹಂಕಾರದಿಂದ ಕೂಡಿದವರ ಕಿವಿಗೆ ಉಪದೇಶ ನಾಟುವುದಿಲ್ಲ.

**58. ದುಡ್ಡಿನ ಪೈತ್ಯ ಅಡರಿದವರಿಗೆ ಯಾವುದು ಕ್ಷುದ್ರವಾಗಿ ಕಾಣುತ್ತದೆ ?**

**ಉತ್ತರ:** ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ.

## 2–3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

**1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?**

**ಉತ್ತರ :** ಡಾಕ್ಟರ್‌ಗೆ ವಿಮಾನದ ಪೈಲಟ್ **"ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಭೂ ಪ್ರದೇಶದೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗುತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣ ಎಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾಇಲ್ಲವಲ್ಲ"** ಎಂದು ಹೇಳಿದನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

**ಉತ್ತರ :** ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ "ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು? ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್‌ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

**3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

**ಉತ್ತರ:** ಮುದುಕಿಯು ರಾಹಿಲನ ಬಳಿ "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟು ಇತ್ತು. ಈಗಲೂ ಇದೆ. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾಗಿವೆ.

**4. ನಿರ್ಜೀವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

**ಉತ್ತರ :** ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ **"ಇಷ್ಟು ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?"** ನಿರಾಶೆಯಿಂದ ಹೇಳಿದಳು.

**5. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

**ಉತ್ತರ :** ರಾಮನು "ಎಲೈ ಗಿರಿ ವನವೇ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ ಹೇಳಿರಿ ನನ್ನ ಪ್ರೀತಿಯರಾಣಿ ಸೀತೆಯು ದೊರೆಯುವಳೇ? ದೊರೆಯುವುದಿಲ್ಲವೋ? ಅವಳು ಇರುವ ನೆಲೆ ಯಾರಾದರೂ ತಿಳಿದಿರುವಿರಾ. ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ." ಎಂದು ಗಿರಿವನಗಳನ್ನು ಪ್ರಾರ್ಥಿಸುತ್ತಾನೆ.

**6. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**

**ಉತ್ತರ** : ಲಕ್ಷ್ಮಣನು **"ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?** ಎಂದು ಅಣ್ಣನನ್ನು ಸಂತೈಸಿದನು.

7. **ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

**ಉತ್ತರ** : ರಾಮನ ಸ್ವಾಗತಕ್ಕಾಗಿ ಶಬರಿ ಕಡು ಸವಿಯಾದ ಬಗೆಬಗೆಯ **ಹಣ್ಣು – ಹಂಪಲುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ತಳಿರು, ಸುವಾಸನೆಯಿಂದ ಕೂಡಿದ ಹೂವುಗಳನ್ನು** ಸಂಗ್ರಹಿಸಿ ಸಿದ್ಧತೆ ಮಾಡಿಕೊಂಡಿದ್ದಳು.

8. **ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

**ಉತ್ತರ** : ರಾಮ–ಲಕ್ಷ್ಮಣರು ಬಂದುತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ 'ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲದಿಂದ ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಹೂಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗ್ಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣುಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟು ಉಪಚರಿಸಿದಳು.

9. **ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?**

**ಉತ್ತರ** : ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು **"ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಕಾಡಿನಲ್ಲಿ ಈ ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರ ಋಣಿಗಳಾಗಿದ್ದೇವೆ. ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆ ಕಾಣಲಿಲ್ಲ, ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೆ ತಿಳಿದೆವು"** ಎಂದು ಶಬರಿಗೆ ಹೇಳಿದರು.

10. **ಶಬರಿ ಶ್ರೀರಾಮನ ಗುಣಗಾನಗಳನ್ನು ಹೇಗೆ ಹಾಡಿ ಹೊಗಳಿದಳು?**

**ಉತ್ತರ**: "ದಶರಥನ ಮಗನಂತೆ, ಸಾಧು–ಸಜ್ಜನರ ಮಿತ್ರನಂತೆ, ಧೀರ ಶೂರ ವೀರ ಗಂಭೀರ ಸದ್ಗುಣಗಳ ಸಾರನಂತೆ, ಹೆದರಿಸುವವರ ಹೆದರುವಂತೆ ಬಿಲ್ಲು ಹಿಡಿದು ಬರುವನಂತೆ ಆದರೂ ತುಂಬ ಸೌಮ್ಯ ಸ್ವಭಾವದವನಂತೆ, ಮಗುವಿನಂತೆ ಕಾಣುವನಂತೆ, ರಾಜಪದವಿಯ ತ್ಯಾಗ ಮಾಡಿದನಂತೆ, ತಪಸ್ವಿತನವ ಹಿಡಿದನಂತೆ, ತಮ್ಮನೊಡನೆ ಕಾಡಿಗೆ ಬರಲು ಮನದಲ್ಲಿ ಭಯವೇ ಇಲ್ಲವಂತೆ, ಕೆಟ್ಟಕನಸಿನ ರಾತ್ರಿಯನ್ನು ಕಳೆಯುವ ಸುಂದರವಾದ ಬೆಳಗಿನಂಥವನು. ಗುರುಗಳು, ತಪಸ್ವಿಗಳು ಮೆಚ್ಚಿದಂತ ಸನ್ಮಂಗಳ ಮೂರ್ತಿಯನ್ನು ಎಂದು ಕಾಣುವೆನೋ" ಎಂದು ಶಬರಿ ಶ್ರೀರಾಮನ ಗುಣಗಾನ ಮಾಡುತ್ತಾ ಹಾಡಿ ಹೊಗಳಿದಳು.

11. **ಶಬರಿ ಅಗ್ನಿ ಪ್ರವೇಶದ ನಂತರ ರಾಮಲಕ್ಷ್ಮಣರ ಸಂಭಾಷಣೆಯನ್ನು ಬರೆಯಿರಿ.**

**ಉತ್ತರ** : ಶ್ರೀ ರಾಮನು ನೋಡು ಲಕ್ಷ್ಮಣ **"ಹೆಣ್ಣ ರೀತಿಯ ನರಿಯಬಹುದೇ ಅವರ ಬಗೆ ಬಲು ಸೋಜಿಗ ಎಂಥ ನಿಷ್ಠೆ ಎಂಥ ಪ್ರೀತಿ ಈ ಶಬರಿಯನ್ನು ಮರೆವುದೆ ಈ ಜಗ?"** ಎಂದಾಗ ಹೌದು ಅಣ್ಣ. **"ನಾವು ಈ ಆಶ್ರಮಕ್ಕೆ ಬಂದಾಗ, ಯಾರು, ಎತ್ತ, ಏಕೆ ಎನ್ನದೆ । ಹಸುಳೆಯಂದದಿ ಒಲಿದಳು ಕಾಣುತಲೆ ಬಹು ನಲಿದಳಣ್ಣಾ ನಲವೊಳೆಮ್ಮನೆ ಮರೆತಳು"** ಇದಕ್ಕೆ ಶ್ರೀರಾಮನು 'ಬೆಳಕಿಗೊಲಿದವರ್ ಉರಿವ ಬತ್ತಿಯಕರುಕಕಾಣರು ಲಕ್ಷ್ಮಣ' ಎಂದು ಶಬರಿ ಭಕ್ತಿ, ನಿಷ್ಠೆಗಳ ಬಗ್ಗೆ ಮಾತನಾಡಿಕೊಂಡರು.

12. **ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**

**ಉತ್ತರ** : 'ವೂಲವರ್ಥ' ಎಂಬುದು 'ಸ್ಟೇಷನರಿ' ಅಂಗಡಿ. ಇದೊಂದು ಮಹಾಕೋಶದಂತಿದೆ. ಈ ವೂಲವರ್ಥ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ(ಚಡ್ಡಿ), ಸಾಬೂನು, ಔಷಧ ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಎಲ್ಲವೂ ದೊರೆಯುತ್ತವೆ.

13. **ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**

**ಉತ್ತರ** : ಲಂಡನ್ನಿನ ಹೆಣ್ಣು ಮಕ್ಕಳು ಉಪಹಾರಗೃಹಗಳಲ್ಲಿ ಮಾಣಿಗಳಾಗಿ, ದೊಡ್ಡದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್ ಆಗಿ, ಕಾರಕೂನರಾಗಿ (ಗುಮಾಸ್ತರು), ಹಾಗೂ ಸಿನಿಮಾ ಗೃಹಗಳಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ.

14. **ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸ್ ಹೇಗೆ ಇದೆ ತಿಳಿಸಿ.**

**ಉತ್ತರ** : ಆಂಗ್ಲ ಸಾಮ್ರಾಜ್ಯದ ವೈಭವಕಂಡು ಬರುವಓಣಿ 'ಚೇರಿಂಗ್‌ಕ್ರಾಸ್' ಓಣಿಯಲ್ಲಿ ಇಂಡಿಯಾ ಆಫೀಸು ಇದೆ. ಅಲ್ಲಿಯ ವಾಚನಾಲಯದಲ್ಲಿ ಅನೇಕ ಮಹತ್ತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ವಿಷಯಗಳು ಇಲ್ಲಿ ಗೊತ್ತಾಗಬಹುದೆಂದು ಕಾಣುತ್ತದೆ. ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಹಿಂದೂಸ್ಥಾನದ ಲಲಿತಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ. ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ.

15. **ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**

**ಉತ್ತರ** : ಲೇಖಕರು ಲಂಡನ್ ನಗರದ ಹೆಣ್ಣು ಮಕ್ಕಳ ಟೊಪ್ಪಿಗೆಯನ್ನು ಕುತೂಹಲದಿಂದ ನೋಡುತ್ತಾರೆ. ಒಂದು ಟೊಪ್ಪಿಗೆಯಂತ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದೆಂದು ಹೇಳಿದರು. ಒಬ್ಬ ಮನುಷ್ಯರಂತೆ ಇನ್ನೊಬ್ಬ ಮನುಷ್ಯರು ಹೇಗೆ ಇಲ್ಲವೋ ಹಾಗೆ ಟೊಪ್ಪಿಗೆಗಳೆಂದು ಅವುಗಳ ವಿಶೇಷತೆಯನ್ನು ದಾಖಲಿಸಿದ್ದಾರೆ.

16. **ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?**

**ಉತ್ತರ** : ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್, ಪ್ರಸಿದ್ಧ ವಿಮರ್ಶಕನಾದ ಡ್ರಾಯಡನ್, ಬ್ರಿಟನ್‌ನ್ನಿನರಾಷ್ಟ್ರಕವಿ ವರ್ಡ್ಸ್‌ವರ್ತ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಮೊದಲಾದವರ ಸಮಾಧಿಗಳಿವೆ.

17. **ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?**

**ಉತ್ತರ** : ಸಾಮ್ರಾಟರು ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನೆಂದರೇ ಬ್ರಿಟೀಷ್ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರು ಕೂರುವ ಸಿಂಹಾಸನದ ಮೇಲೆ ಈ ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರುಇದರ ಮೇಲೆ ಕೂಡಬೇಕು. ಈ ಶಿಲೆಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಈ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನವಿದೆ. ಸ್ಟೋನ್ ಆಫ್ ಸ್ಕೋನ್ ಎಂದು ಇದರ ಹೆಸರು.

18. **ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ?**

**ಉತ್ತರ:** ಅತಿಬಲ ಮಹಾರಾಜನು ಅಗ್ನಿಭೂತಿ ವಾಯುಭೂತಿಯನ್ನು ರಾಜಸಭೆಗೆ ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುತ್ತಿದ್ದರು. ಸಭೆಯಲ್ಲಿದ್ದ ಎಲ್ಲರೂ ಇವರು ಮೂರ್ಖರು, ಯಾವ ವಿದ್ಯೆಗಳನ್ನು ತಿಳಿದಿಲ್ಲ, ಸಪ್ತ ವ್ಯಸನಗಳಿಗೆ ಒಳಗಾದವರು ಎಂದು ತೀರ್ಮಾನಿಸಿದರು.

19. **ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು?**

**ಉತ್ತರ:** ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಹಗಲು ರಾತ್ರಿಯೆನ್ನದೆ ನಿರಂತರವಾಗಿ ಕಟ್ಟುನಿಟ್ಟಿನಿಂದ ಓದಿ, ಏಳೆಂಟು ವರ್ಷಗಳೊಳಗೆ ನಾಲ್ಕು ವೇದಗಳು, ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳನ್ನೂ, ಹದಿನೆಂಟು ಧರ್ಮಶಾಸ್ತ್ರಗಳನ್ನು, ಮೀಮಾಂಸೆ, ತರ್ಕ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ ನಾಟಕಗಳು, ಅರ್ಥಶಾಸ್ತ್ರ, ಸಾಮುದ್ರಿಕ, ಅಶ್ವಶಾಸ್ತ್ರ, ಗಜಶಾಸ್ತ್ರ, ಹಾನಿತ ಸುಶ್ರುತನ ವೈದ್ಯಶಾಸ್ತ್ರ, ಚರಕ ಸಂಹಿತ, ಕ್ಷಾರಪಾನೀಯ ಮುಂತಾದ ನರವೈದ್ಯಶಾಸ್ತ್ರಗಳನ್ನೂ, ಜ್ಯೋತಿಷ್ಯ ಮಂತ್ರವಾದ ಮೊದಲಾದ ಶಾಸ್ತ್ರಗಳೆಲ್ಲವನ್ನು ಕಲಿತರು.

20. **ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?**

**ಉತ್ತರ:** ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ – " ನೀವು ನನ್ನ ತಂಗಿಯ ಮಕ್ಕಳು. ನನಗೆ ಸೋದರ ಅಳಿಯಂದಿರಾಗುವಿರಿ. ನಿಮಗೆ ನಾನು ಸಲುಗೆಯನ್ನು ಕೊಡಲಿಲ್ಲ. ಏಕೆಂದರೆ ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲೂ ಸಹ ಎಲ್ಲಿಯಾದರೂ ಸೊಕ್ಕಿ ಕೆಟ್ಟುಹೋಗುವಿರೆಂದು ಭಾವಿಸಿ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆ ಕೊಡಲಿಲ್ಲ. ಇದಕ್ಕೆ ಕೋಪಗೊಳ್ಳದಿರಿ, ನನ್ನನ್ನು ಕ್ಷಮಿಸಿ ಎಂದು ಹೇಳಿದನು.

21. **ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?**

**ಉತ್ತರ:** ಸೂರ್ಯಮಿತ್ರನು ಮಾವನೆಂದು ತಿಳಿದಾಗ ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. " ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲಿ, ಉಪ್ಪನ್ನಾಗಲಿ, ಮಜ್ಜಿಗೆಯನ್ನಾಗಲಿ ನಮಗೆ ಎಂದಿಗೂ ಕೊಡಲೂ ಇಲ್ಲ ಕೊಡಿಸಲೂ ಇಲ್ಲ. ಕೆರೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ನೀಡಲಿಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ನೆಂಟರನ್ನು ಆಳುಗಳನ್ನು ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ ಇವರಿಗೆ ಊಟ ಹಾಕಿ ಎಂದು ಹೇಳಲಿಲ್ಲ. ಇವನು ಪಂಚ ಮಹಾಪಾತಕ ಮಾಡಿದನು. ನಮ್ಮನ್ನು ಏಳೆಂಟು ವರ್ಷಗಳವರೆಗೆ ಶತ್ರುಗಳಂತೆ ದಂಡಿಸಿದನೆಂದು ವಾಯುಭೂತಿಯು ಕೋಪದಿಂದ ಮನದಲ್ಲಿ ಅಂದು ಕೊಂಡನು.

22. **ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?**

**ಉತ್ತರ** : ಕವಿಗೆ ನವರಾತ್ರಿಯಲ್ಲಿ , ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ, ಹಸುರಾದ ಕವಿಯ ಹೃದಯಕ್ಕೆ **ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಲಿನಲ್ಲಿ,** ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರುಕಾಣುತ್ತಿದೆ.

23. **ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?**

**ಉತ್ತರ :** ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಗೋಚರವಾದರೆ , ಹೂವಿನ ಕಂಪಿನ ಹಸುರು ಮೂಗಿಗೆ , ಎಲರಿನ ತಂಪಿನ ಸ್ಪರ್ಷಹಕ್ಕಿಯ ಕೊರಲಿನ ಚಿಲಿಪಿಲಿ ಗಾನ ಕಿವಿಗೆ, ಶ್ಯಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಗೆಗೆ – ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರೀಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತಪೂರ್ಣವಾಗಿ ವರ್ಣಿಸಿದ್ದಾರೆ.

24. **ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು** ?

**ಉತ್ತರ :** ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ನವ ರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ; ಹಸುರು ಮುಗಿಲು; ಹಸುರುಗದ್ದೆಯ ಬಯಲು ; ಹಸುರಿನ ಮಲೆ; ಹಸುರುಕಣಿವೆ; ಸಂಜೆಯ ಬಿಸಿಲು, ಅಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ; ಕಾಡಂಚಿನಲ್ಲಿ ಫಲಭರಿತ ಅಡಕೆಯತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸರು..ಇವೆಲ್ಲ ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾಗಿವೆ.

25. **ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು** ?

**ಉತ್ತರ :** ಬ್ರಿಟಿಷ್ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು **ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ** ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಿಟಿಷ್ ಸಿಪಾಯಿಗಳು ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು. ಇದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

26. **ಹಲಗಲಿಗೆ ದಂಡು ಬರಲು ಕಾರಣವೇನು** ?

**ಉತ್ತರ :** ಹಲಗಲಿಯ ಬೇಡರು ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗು ಬಡಿಯಲು ದಂಡನ್ನು ಕರೆಯಿಸಿದರು.

27. **ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು** ?

**ಉತ್ತರ :** ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬಿಟ್ರಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

28. **ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ** ?

**ಉತ್ತರ :** ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

29. **ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

**ಉತ್ತರ :** ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದಲ್ಲಿ ಸಮೃದ್ಧವಾಗಿ ಬೆಳೆದಿದ್ದ ಹಸುರಾದ ಹುಲ್ಲನ್ನು ತಿನ್ನಲು ಬಯಸಿ ಒಳಹೊಕ್ಕಿತು.

30. **ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

**ಉತ್ತರ :** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ **"ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು, ಇದು ಅವನ ಯಾಗದ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ"** ಎಂದು ಬರೆಯಲಾಗಿತ್ತು.

31. **ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

**ಉತ್ತರ :** ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು **"ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು"** ಎಂದು ಹೇಳಿದರು. ಆಗ ಲವನು ನಗುತ **"ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ? ನೀವು ಹೋಗಿ"** ಎಂದು ಶೌರ್ಯದಿಂದ ಹೇಳಿದನು.

**32. . ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?**

**ಉತ್ತರ :** ಪರಶುರಾಮನು ತನ್ನಲ್ಲಿದ್ದ ಎಲ್ಲಾ ಬೇಡಿದವರಿಗೆ ದಾನ ಮಾಡಿದ್ದರಿಂದ ಆತನ ಬಳಿ ಬಿಲ್ಲು – ಬಾಣಗಳಲ್ಲದೆ ಬೇರೇನೂ ಇರಲಿಲ್ಲ. ಆ ಸಂದರ್ಭದಲ್ಲಿ ದ್ರೋಣನು ಅಶ್ವತ್ಥಾಮನ ಜೊತೆಯಲ್ಲಿ ಏನಾದರೂ ದ್ರವ್ಯ ಬೇಡಲೆಂದು ಪರಶುರಾಮನ ಬಳಿಗೆ ಬಂದನು. ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

**33. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?**

**ಉತ್ತರ:** ದ್ರುಪದನು ದ್ರೋಣರಿಗೆ " ನೀನು ಯಾರೆಂದು ನನಗೆ ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ಮನಸ್ಸಿಗೆ ಆಘಾತವಾಗುವಂತೆ ಹಿಯ್ಯಾಳಿಸಿದನು.

**34. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು ?**

**ಉತ್ತರ :** ದ್ರುಪದನ ಮಾತಿಗೆ ದ್ರೋಣನು "ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ? ಜೊತೆಯಲ್ಲಿ ಅಭ್ಯಾಸ ಮಾಡಿದೆವೆಂಬ ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ. ಈ ಸಭಾ ವಲಯದಲ್ಲಿ ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನೀನು ಬೆಚ್ಚುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಪ್ರತ್ಯುತ್ತರ ಕೊಟ್ಟನು.

**35. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?**

**ಉತ್ತರ :** ಚಂದನವ ಕಡಿದು ಕೊರೆದು ತೇದೊಡೆ ಅದು ನೊಂದೆನೆಂದು ಸುಗಂಧವನ್ನು ಬಿಡುವುದಿಲ್ಲ. ಚಿನ್ನವನ್ನು ಕಡಿದು ತಿಕ್ಕಿದರೂ ಅದು ಹೊಳಪನ್ನು ಕಳೆದು ಕೊಳ್ಳುವುದಿಲ್ಲ. ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದರೂ ಸಿಹಿಯ ಬಿಡುವುದಿಲ್ಲ. ಪ್ರಕೃತಿಯಲ್ಲಿರುವ ವಸ್ತಗಳು ತಮ್ಮ ಮೂಲ ಗುಣವನ್ನು ಬಿಡುವುದಿಲ್ಲ. ನಾನು ಹಿಂದೆ ಮಾಡಿದ ಕೆಡುಕುಗಳೆಲ್ಲವನ್ನು ತಂದು ಮುಂದಿಟ್ಟರೆ ಅದರಿಂದ ನಿಮಗೇ ತೊಂದರೆ, ನೀವು ಕೊಂದರೂ ನಾನು ಶರಣೆಂಬುದ ಬಿಡುವುದಿಲ್ಲ ಎಂಬ ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

**36. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು ?**

**ಉತ್ತರ:** ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ, ಬಲ್ಲವರೊಂದಿಗೆ ಸ್ನೇಹವ ಮಾಡಿದರೆ ಮೊಸರ ಕಡೆದು ಬೆಣ್ಣೆಯ ತೆಗೆದುಕೊಂಡಂತೆ, ಚೆನ್ನಮಲ್ಲಿಕಾರ್ಜುನ ದೇವ ನಿಮ್ಮ ಶರಣರ ಸ್ನೇಹವ ಮಾಡಿದರೆ ಕರ್ಪುರದ ಗಿರಿಗೆ ಬೆಂಕಿ ತಗುಲಿದಂತೆ. ಯಾವುದಾದರು ವಸ್ತುವಿಗೆ ಬೆಂಕಿ ತಗುಲಿದರೆ ಅದು ಸುಟ್ಟು ಹೋಗಿ ಬೂದಿ ಉಳಿಯುತ್ತದೆ. ಆದರೆ ಕೊಂಬಂತೆ. ಆದರೆ ಕರ್ಪುರದ ಗಿರಿಗೆ ಬೆಂಕಿ ತಗುಲಿದರೆ ಯಾವ ಶೇಷವೂ ಉಳಿಯಲಾರದು. ಇದು ಭಕ್ತರು ಭಗವಂತನಲ್ಲಿ ಶರಣಾಗುವ ಭಾವವಾಗಿದೆ ಎಂದು ಅಕ್ಕಮಹಾದೇವಿಯು ಹೇಳಿದ್ದಾಳೆ.

**37. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**

**ಉತ್ತರ:** ಪೈಗಳ ತಮ್ಮನ ನೂಲು ಮದುವೆಯ ದಿನ ಚಪ್ಪರದಲ್ಲಿ ಒಂದು ಕಡೆಯಲ್ಲಿ ಒಡ್ಡುಗೆಗಳನ್ನು ಕಟ್ಟುತ್ತಾರೆ. ಮತ್ತೊಂದು ಕಡೆ ಮಂಡಿಗೆಗಳನ್ನು ಮಡಚುತ್ತಾರೆ. ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ. ಆನಡುವೆ ಕುಗ್ಗಿದ ಕೊರಳಲ್ಲಿ ಹಾಡೊಂದು ಕೇಳಿಸಿತು.

**38. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**

**ಉತ್ತರ:** ಹಾಡು ಕಿವಿಗೆ ಬಿದ್ದಾಗ ಪೈಗಳು ನೆಟ್ಟಗೆ ಹೋಗಿ ಅಭ್ಯಾಸದ ಪುಸ್ತಕ ಹಿಡಿದು ಬರೆಯ ತೊಡಗಿದರು. ಒಂದು ನಾಟಕವನ್ನು ಇಳಿ ಹೊತ್ತಿನವರೆಗೆ ಬರೆದು ಮುಗಿಸಿದರು. ಅದಾದ 2–3 ದಿನಗಳಲ್ಲಿ ಅಂತಹುದೇ ಮತ್ತೊಂದು ನಾಟಕವನ್ನು ಬರೆದರಾದರೂ ಪೂರ್ಣ ಮಾಡಲಿಲ್ಲ.

**39. ಬಾಸೆಲ್ ಮಿಶನ್‌ರವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?**

**ಉತ್ತರ:** ಬಾಸೆಲ್ ಮಿಶನ್‌ರವರು ಪ್ರಕಟಿಸಿದ್ದ ಹಳಗನ್ನಡ ವ್ಯಾಕರಣ ಸೂತ್ರಗಳು, ಕನ್ನಡ ಜೈಮಿನಿ ಭಾರತ, ಗದುಗಿನ ಭಾರತ, ಶಬರಶಂಕರ ವಿಲಾಸ ಮೊದಲಾದ ಕೃತಿಗಳನ್ನು ಲೇಖಕರು ಓದಿಕೊಂಡರು.

**40. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?**

**ಉತ್ತರ:** 1899ರಲ್ಲಿ ಶೇಕ್ಸ್‌ಪಿಯರ್ 'ಟ್ವೆಲ್ಸ್ ನೈಟ್' ಎಂಬ ನಾಟಕದ ಮೊದಲನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ – ಕಂಡಗಳಲ್ಲಿ ಕನ್ನಡಿಸಿ ಮುದ್ದಣನವರಿಗೆ ಉಡುಪಿಗೆ ಕಳಿಸಿಕೊಟ್ಟಾಗ ಮುಂದರಿಸು ಎಂದು ಅವರು ಹೇಳಿದರು.

**41. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ ?**

**ಉತ್ತರ:** ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಮೀಹ, ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು, ಬೊಜ್ಜು ಬೆಳೆಯದೆ ಬರುವ ಗುರುತ್ವ, ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ, ಪಂಜು ಇಲ್ಲದೆ ಬೆಳಗುವ ಬೆಳಕು, ಉದ್ವೇಗ ಬರಿಸದ ಜಾಗರಣೆ – ಇವು ಗುರೂಪದೇಶದ ಗುಣಗಳಾಗಿವೆ.

42. **ರಾಜರ ಪ್ರಕೃತಿ ಹೇಗಿರುತ್ತದೆ ?**

**ಉತ್ತರ:** ಅಹಂಕಾರದ ದಾಹ ಜ್ವರ ತಲೆಗಡೆರಿ ಅವರ ಮನಸ್ಸಿನಲ್ಲಿ ಕತ್ತಲೆ ತುಂಬಿರುತ್ತದೆ. ಇದು ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯವೆಂಬ ವಿಷ ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. – ಈ ರೀತಿಯಲ್ಲಿ ರಾಜರ ಪ್ರಕೃತಿ (ಸ್ವಭಾವ) ಇರುತ್ತದೆ.

43. **ಗುರೂಪದೇಶವು ಯಾರಿಗೆ ಮೆಚ್ಚಿಗೆ ಯಾಗುವುದಿಲ್ಲ ?**

**ಉತ್ತರ:** ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು, ಅಹಂಕಾರದಿಂದ ಅವರ ಕಿವಿ ಕಿವುಡಾಗಿ ಬಿಡುತ್ತದೆ. ಎಂತಹ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ಯಾರದೋ ದಾಕ್ಷಿಣ್ಯಕ್ಕೆ ಉಪದೇಶವನ್ನು ಆಲಿಸಿದರೂ, ಅವರ ಮುಖದಲ್ಲಿ ಉಪೇಕ್ಷೆಯಿರುತ್ತದೆ. ಇಂತಹವರಿಗೆ ಉಪದೇಶ ಮಾಡುವ ದೌರ್ಭಾಗ್ಯ ತಮಗೇಕೆ ಬಂತು ಎಂದು ಗುರುಗಳೂ ನೊಂದುಕೊಳ್ಳುತ್ತಾರೆ.

****************

## ಲೇಖಕರು–ಕವಿಗಳ ಪರಿಚಯ

**1. ಎಂ. ಮರಿಯಪ್ಪ ಭಟ್ಟರು**

ಎಂ. ಮರಿಯಪ್ಪ ಭಟ್ಟರು (1906) ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಬಕ ಗ್ರಾಮದವರು.
ಇವರು **ತುಳು–ಇಂಗ್ಲಿಷ್ ನಿಘಂಟು, ಅಭಿನವಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಅವರಿಗೆ ಲಭಿಸಿದೆ.

**2. ಎ.ಎನ್.ಮೂರ್ತಿರಾವ್**

ಅಕ್ಕಿ ಹೆಬ್ಬಾಳು ನರಸಿಂಹ ಮೂರ್ತಿರಾವ್‌ರವರು ಕ್ರಿ.ಶ. 1900ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಜನಿಸಿದರು.
ಇವರು **'ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ, ಚಂಡಮಾರುತ, ಚಿತ್ರಗಳು–ಪತ್ರಗಳು'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳು ಲಭಿಸಿವೆ.

**3. ಡಿ. ಎಸ್. ಜಯಪ್ಪಗೌಡ**

ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ ಇವರು ಕ್ರಿ.ಶ.1947 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಜನಿಸಿದರು.
ಇವರು **'ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಕ್ಕೆ ಭಾಜನರಾಗಿದ್ದಾರೆ.

**4. ದೇವನೂರ ಮಹಾದೇವ**

ದೇವನೂರ ಮಹಾದೇವರವರು ಕ್ರಿ.ಶ. 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು.
ಇವರು **'ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ'** ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ** ಪ್ರಶಸ್ತಿಗಳು ಲಭಿಸಿವೆ.

**5. ಜಿ.ಎಸ್.ಶಿವರುದ್ರಪ್ಪ**

ಜಿ. ಎಸ್. ಶಿವರುದ್ರಪ್ಪರವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. ಇವರ ಕಾಲ ಕ್ರಿ.ಶ.1926.
ಇವರು **'ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪುರಸ್ಕಾರ, ರಾಷ್ಟ್ರಕವಿ ಬಿರುದು, ಪಂಪ** ಪ್ರಶಸ್ತಿಗಳು ಲಭಿಸಿವೆ.

**6. ದ. ರಾ. ಬೇಂದ್ರೆ**

ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯರಾಮಚಂದ್ರ ಬೇಂದ್ರೆಯವರು ಕ್ರಿ.ಶ 1896 ಧಾರವಾಡದಲ್ಲಿ ಜನಿಸಿದರು.

ಇವರು **'ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

**7. ಕುಮಾರವ್ಯಾಸ**

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪನು ಕ್ರಿ.ಶ.1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು.

ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ **'ಕರ್ಣಾಟ ಭಾರತಕಥಾಮಂಜರಿ'** ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ **'ಐರಾವತ'** ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ.

ಇವರು **"ರೂಪಕ ಸಾಮ್ರಾಜ್ಯ ಚಕ್ರವರ್ತಿ"** ಎಂಬ ಬಿರುದಿಗೆ ಪಾತ್ರನಾಗಿದ್ದಾರೆ.

**8. ರನ್ನ**

ಮಹಾಕವಿ ರನ್ನ ಕ್ರಿ.ಶ. 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು.

ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದ ರನ್ನನು **'ಸಾಹಸ ಭೀಮ ವಿಜಯಂ(ಗದಾಯುದ್ಧ), ಅಜಿತತೀರ್ಥಂಕರ ಪುರಾಣ, ಪರಶುರಾಮಚರಿತಂ, ಚಕ್ರೇಶ್ವರಚರಿತ'** ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ರನ್ನನಿಗೆ ತೈಲಪನು **"ಕವಿಚಕ್ರವರ್ತಿ"** ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ.

**9. ಸಾ. ರಾ. ಅಬೂಬಕ್ಕರ್**

ಸಾ. ರಾ ಅಬೂಬಕ್ಕರ್ ಅವರು **30 ಜೂನ್ 1936ರಂದು ಕಾಸರಗೋಡಿನ**ಲ್ಲಿ ಜನಿಸಿದರು.

ಇವರು **'ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ತಳ ಒಡೆದ ದೋಣಿಯಲಿ, ಚಪ್ಪಲಿಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು'** ಮೊದಲಾದ ಕಥಾಸಂಕಲನಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ **ನೃಪತುಂಗ ಪ್ರಶಸ್ತಿ** ಲಭಿಸಿವೆ.

**10. ಪು. ತಿ. ನರಸಿಂಹಾಚಾರ್.**

ಪು.ತಿ.ನ. ನರಸಿಂಹಾಚಾರ್ ಇವರು ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು.

**ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ,** ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸ ಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು.

ಇವರ ಸಾಹಿತ್ಯ ಸೇವೆಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ** ಲಭಿಸಿದೆ.

**11. ವಿ. ಕೃ. ಗೋಕಾಕ್**

ವಿ. ಕೃ. ಗೋಕಾಕರು ಕ್ರಿ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು.

ಇವರು **'ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧು ರಶ್ಮಿ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಸೇವೆಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ,** ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.

**12. ಶಿವಕೋಟ್ಯಾಚಾರ್ಯ**

**ಶಿವಕೋಟ್ಯಾಚಾರ್ಯ**ರ ಕಾಲ ಕ್ರಿ. ಶ. ಸುಮಾರು 10 ನೆಯ ಶತಮಾನ. **ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಕೋಗಳಿ ನಾಡಿನವನು** ಇವರು ಕನ್ನಡದ ಪ್ರಥಮ ಗದ್ಯಕೃತಿ **'ವಡ್ಡಾರಾಧನೆ'**ಯ ಕರ್ತೃ. ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ 19 ಕಥೆಗಳಿವೆ. ಇವರಿಗೆ ಕನ್ನಡದ ಮೊದಲ **ಗದ್ಯಕವಿ** ಎಂಬ ಬಿರುದಿದೆ.

**13. ಕುವೆಂಪು**

**ಕುವೆಂಪು** ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ.ಶ. 1904 ಡಿಸೆಂಬರ್ 29ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.

ಇವರು **'ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ , ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ,** ಮೊದಲಾದ ಪ್ರಶಸ್ತಿಗಳು ಲಭಿಸಿವೆ.

**14. ಲಕ್ಷ್ಮೀಶ**

ಲಕ್ಷ್ಮೀಶನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನವನು. ಈತನ ಕಾಲ ಕ್ರಿ. ಶ. 1550. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದು, **'ಜೈಮಿನಿ ಭಾರತ'** ವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ.

ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕವಿ ಚೂತವನ ಚೈತ್ರ** ಎಂಬ ಬಿರುದುಗಳಿವೆ.

**15. ಪಂಪ**

**ಮಹಾಕವಿ ಪಂಪನು** ಕ್ರಿ.ಶ. **902** ರಲ್ಲಿ **ವೆಂಗಿ ಮಂಡಲದ ವೆಂಗಿಪಳು** ಎಂಬ ಆಗ್ರಹಾರದಲ್ಲಿ ಜನಿಸಿದನು.

ಪಂಪ **'ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ.

ಪಂಪನಿಗೆ **'ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ'** ಎಂಬ ಬಿರುದುಗಳಿವೆ. ಆದಿಕವಿಯೆಂಬ ಬಿರುದೂ ಇದೆ.

****************

## ಮಾದರಿ ಛಂದಸ್ಸು

**1.**

| | | | | | |
|---|---|---|---|---|---|
| 4 | 4 | 4 | = 12 | | |
| ∪∪∪∪<br>ನೆಲಕಿಜೆ | ∪ – ∪<br>ವೆನೆಂದು | ∪∪∪∪<br>ಬಗೆದಿರೆ | | | |
| 4 | 4 | 4 | 4 | 4 | =12 |
| ∪∪∪∪<br>ಚಲಕಿಜೆ | – –<br>ವೆಂ ಪಾಂ | ∪∪∪∪<br>ಡುಸುತರೊ | –∪∪<br>ಳೀನೆಲ | ∪∪ –<br>ನಿದು ಪಾ | |

**ಛಂದಸ್ಸು – ಕಂದ ಪದ್ಯ**

**2.**

| | | | | | | | |
|---|---|---|---|---|---|---|---|
| 3 | 4 | 3 | 4 | = 14 | | | |
| ∪∪∪<br>ಕೊರಳ | ∪∪–<br>ಸೆರೆ ಹಿ | ∪∪∪<br>ಗ್ಗಿದವು | ∪∪∪∪<br>ದೃಗುಜಲ | | | | |
| 3 | 4 | 3 | 4 | = 14 | | | |
| ∪∪∪<br>ಉರವ | ∪∪∪∪<br>ಣೆಸಿ ಕಡು | –∪<br>ನೊಂದ | ∪∪–<br>ನಕಟಾ | | | | |
| 3 | 4 | 3 | 4 | 3 | 4 | 1ಗು =23 | |
| ∪∪∪<br>ಕುರುಪ | ∪∪–<br>ತಿಗೆ ಕೇ | –∪<br>ಡಾದು | –∪∪<br>ದೆಂದನು | –∪<br>ತನ್ನ | ∪∪∪∪<br>ಮನದೊಳ | –<br>ಗೆ | |

**ಛಂದಸ್ಸು – ಭಾಮಿನಿ ಷಟ್ಪದಿ**

**3.**

| 5 | 5 | 5 | 5 |
|---|---|---|---|
| ∪∪–∪ | –∪– | ∪∪∪∪∪ | ∪∪∪∪∪ |
| ತೆಗೆದುತ್ತ | ರೀಯಮಂ | ಮುರಿದುಕುದು | ರೆಯ ಗಳಕೆ |

| 5 | 5 | 5 | 5 |
|---|---|---|---|
| ∪∪∪∪∪ | –∪∪∪ | ––∪ | ∪∪∪– |
| ಬಿಗಿದುಕದ | ಳೀದ್ರುಮಕೆ | ಕಟ್ಟಲ್ಕೆ | ಮುನಿಸುತರ್ |

| 5 | 5 | 5 | 5 | 5 | 5 | 1 ಗುರು |
|---|---|---|---|---|---|---|
| ∪∪∪∪∪ | –∪– | ∪∪∪∪∪ | –∪– | ∪∪∪∪∪ | –∪∪∪ | – |
| ಮಿಗೆನಡುಗಿ | ಬೇಡಬೇ | ಡರಸುಗಳ | ವಾಜಿಯಂ | ಬಿಡುಬಡಿವ | ರೆಮ್ಮನೆನ | ಲು |

**ಛಂದಸ್ಸು – ವಾರ್ಧಕ ಷಟ್ಪದಿ**

---

4.

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪∪∪ | ∪–∪ | –∪∪ | ∪–∪ | ∪–∪ | ∪–∪ | –∪– |
| ಒಡವೆ | ಯನರ್ಥಿ | ಗಿತ್ತೆನ | ವನೀತ | ಳಮಂ ಗು | ರುಗಿತ್ತೆ | ನೀಗಳೊಂ |

**ಛಂದಸ್ಸು– ಚಂಪಕ ಮಾಲಾ ವೃತ್ತ**

---

*************

# ಅಲಂಕಾರಗಳು

**1. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ.**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ'.

**ಉಪಮೇಯ** : ನೀಚರಿಗೆ ಮಾಡುವಉಪಕಾರ

**ಉಪಮಾನ** : ಹಾವಿಗೆ ಎರೆದ ಹಾಲು

**ಉಪಮಾ ವಾಚಕ** : ಅಂತೆ

**ಸಮಾನಧರ್ಮ** : ಲುಪ್ತ (ಪ್ರಯೋಜನವಿಲ್ಲ)

**ಸಮನ್ವಯ** : ಇಲ್ಲಿಉಪಮೇಯವಾದ ನೀಚರಿಗೆ ಮಾಡಿದಉಪಕಾರವನ್ನುಉಪಮಾನವಾದ ಹಾವಿಗೆ ಎರೆದ ಹಾಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದಇದುಉಪಮಾಲಂಕಾರ.

**2. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ'.

**ಉಪಮೇಯ** : ಭೀಮ ದುರ್ಯೋಧನರು

**ಉಪಮಾನ** : ಮದಗಜಗಳು

**ಉಪಮಾವಾಚಕ** : ಅಂತೆ

**ಸಮಾನಧರ್ಮ** : ಹೋರಾಡುವುದು

**ಸಮನ್ವಯ:** ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ

**3. "ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ:** ಒಳಗಿನ ಮಂದಿ ಗುಂಡು ಹೊಡೆಯುವುದು

**ಉಪಮಾನ:** ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

**ಉಪಮಾವಾಚಕ** : ಹಾಂಗ

**ಸಮಾನಧರ್ಮ** : ಸ್ಪಷ್ಟವಾಗಿಲ್ಲ (ಸಿಡಿಯುವುದು)

**ಸಮನ್ವಯ:** ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.

**4. "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** : ಗುಂಡು ಸುರಿಯುವುದು

**ಉಪಮಾನ** : ಸಿಡಿಲು ಸಿಡಿಯುವುದು

**ಉಪಮಾವಾಚಕ** : ಹಾಂಗ

**ಸಮಾನಧರ್ಮ** : ಲುಪ್ತ (ಸಿಡಿಯುವುದು)

**ಸಮನ್ವಯ:** ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.

**5. ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರ ಮುಂಟೆ ನಿನ್ನದೊಂದಳವು.**

**ಅಲಂಕಾರ:** ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

**ಉಪಮೇಯ** : ಆಂಬರ ಮುಂಟೆ ನಿನ್ನದೊಂದಳವು (ದ್ರುಪದನಯೋಗ್ಯತೆ)

**ಉಪಮಾನ** : ನೊಳವಿಂಗೆ ಕುಪ್ಪೆ ವರಂ

**ಉಪಮಾ ವಾಚಕ** : ವೊಲ್

**ಸಮಾನಧರ್ಮ** : ಲುಪ್ತ

**ಸಮನ್ವಯ:** ಇಲ್ಲಿ ಉಪಮೇಯವಾದ ಆಂಬರಮುಂಟೆ ನಿನ್ನದೊಂದಳವು (ದ್ರುಪದನ ಯೋಗ್ಯತೆ) ಎಂಬುದನ್ನು ಉಪಮಾನವಾದ ನೊಳವಿಂಗೆ ಕುಪ್ಪೆ ವರಂ ಎಂದು ವರ್ಣಿಸಲಾಗಿದೆ. ಆದುದರಿಂದ ಈ ವಾಕ್ಯವು ಉಪಮಾಲಂಕಾರ.

**6. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ**

**ಅಲಂಕಾರ** : ರೂಪಕಾಲಂಕಾರ

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ' ರೂಪಕಾಲಂಕಾರ'.

**ಉಪಮೇಯ** : ಒಡಲಬೇಗೆ

**ಉಪಮಾನ** : ಬೆಂಕಿಯುರಿ

**ಸಮನ್ವಯ** : ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ. ಆದುದರಿಂದ ಇದು ರೂಪಕಾಲಂಕಾರ.

**7. "ಮಾರಿಗೌತಣವಾಯ್ತು ನಾಳಿನ ಭಾರತವು"**

**ಅಲಂಕಾರ** : ರೂಪಕಾಲಂಕಾರ

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ' ರೂಪಕಾಲಂಕಾರ'.

**ಉಪಮೇಯ** : ನಾಳಿನ ಭಾರತಯುದ್ಧ

**ಉಪಮಾನ** : ಮಾರಿಯಔತಣ

**ಸಮನ್ವಯ** : ಇಲ್ಲಿ ಉಪಮೇಯವಾದ' ನಾಳಿನ ಭಾರತ ಯುದ್ಧ'ವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ. ಆದುದರಿಂದ ಇದು ರೂಪಕಾಲಂಕಾರ.

**8. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆರೋಗವಿಲ್ಲ.**

**ಅಲಂಕಾರ** : ದೃಷ್ಟಾಂತಾಲಂಕಾರ

**ಲಕ್ಷಣ** : ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು' ದೃಷ್ಟಾಂತಾಲಂಕಾರ'.

**ಉಪಮೇಯ (ಪ್ರತಿಬಿಂಬ)** : ಮಾತು ಬಲ್ಲವನಿಗೆ ಜಗಳವಿಲ್ಲ

**ಉಪಮಾನ (ಬಿಂಬ)** : ಊಟ ಬಲ್ಲವನಿಗೆ ರೋಗವಿಲ್ಲ

**ಸಮನ್ವಯ** : ಇಲ್ಲಿ ಉಪಮೇಯವಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬ ಭಾವದಂತೆ ಪ್ರತಿಪಾದಿತವಾಗಿದೆ, ಆದ್ದರಿಂದ ಈ ವಾಕ್ಯವು ದೃಷ್ಟಾಂತಾಲಂಕಾರಕ್ಕೆ ಉದಾಹರಣೆಯಾಗಿದೆ.

**9. ಅಚ್ಛೋದ ಸರೋವರವುತ್ರೈಲೋಕ್ಯಲಕ್ಷ್ಮಿಯುತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

**ಅಲಂಕಾರ** : ಉತ್ಪ್ರೇಕ್ಷಾಲಂಕಾರ

**ಲಕ್ಷಣ:** ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.

**ಉಪಮೇಯ** : ಅಚ್ಛೋದ ಸರೋವರ

**ಉಪಮಾನ** : ರನ್ನಗನ್ನಡಿ

**ಸಮನ್ವಯ** : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ)ವರ್ಣಿಸಲಾಗಿದೆ. ಈ ವಾಕ್ಯವು ಆದ್ದರಿಂದ ಇದು ಉತ್ಪ್ರೇಕ್ಷಾಲಂಕಾರ.

**10. ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?**

**ಅಲಂಕಾರ** : ಅರ್ಥಾಂತರನ್ಯಾಸಾಲಂಕಾರ.

**ಲಕ್ಷಣ:** ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

**ಉಪಮೇಯ** : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದುಉತ್ತೀರ್ಣನಾದನು.

**ಉಪಮಾನ** : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**ಸಮನ್ವಯ:** ಇಲ್ಲಿ ಉಪಮೇಯವಾದ' ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷವಾಕ್ಯವನ್ನು ಉಪಮಾನವಾದ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ'? ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಈ ವಾಕ್ಯವು ಅರ್ಥಾಂತರನ್ಯಾಲಂಕಾರಕ್ಕೆ ಉದಾಹರಣೆಯಾಗಿದೆ.

**********************

# ಮಾದರಿ ಗಾದೆ ವಿಸ್ತರಣೆ

**(ಗಾದೆಯ ಅರ್ಥ ಮತ್ತು ಮಹತ್ವ –1 ಅಂಕ, ಗಾದೆಯ ವಿವರಣೆ 1 ಅಂಕ, ಭಾಷಾ ಶೈಲಿ 1 ಅಂಕ. ಒಟ್ಟು 3 ಅಂಕಗಳು )**

**ಗಾದೆಯ ಮಹತ್ತ್ವ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತುಗಾದೆಯ ಮಹತ್ವವನ್ನು ಬಹು ಸಾರುತ್ತದೆ.**

**1. ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.**

ಗಾದೆಗಳು ಜನಪದರಜೀವನದಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತುಗಾದೆಯ ಮಹತ್ವವನ್ನು ಸಾರುತ್ತದೆ. **'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ'** ಎಂಬುದು ಪ್ರಸಿದ್ಧ ಗಾದೆ ಮಾತಾಗಿದೆ.

ಉಪನಿಷತ್ತಿನಲ್ಲಿ ಬರುವ **'ಸತ್ಯಮೇವಜಯತೇ'** ಎಂಬ ಮಾತು **'ಸತ್ಯ ಎಂದಿಗೂ ಗೆಲ್ಲುತ್ತದೆ'** ಎಂಬುದೇಆಗಿದೆ. ಸತ್ಯ – ಸುಳ್ಳುಗಳ ಹೋರಾಟದಲ್ಲಿ ಕೆಲವೊಮ್ಮೆ ಸುಳ್ಳು ಜಯಿಸಿದರೂ ಅದುತಾತ್ಕಾಲಿಕ. ಕೊನೆಗೆ ಗೆಲ್ಲುವುದು ಸತ್ಯವೇ ಆಗಿರುತ್ತದೆ. ದುರ್ಗಸಿಂಹನ ಪಂಚತಂತ್ರದ 'ವೃಕ್ಷಸಾಕ್ಷಿ' ಕಥೆಯಲ್ಲಿ ದುಷ್ಟಬುದ್ಧಿಯು ಸ್ನೇಹಿತನಾದ ಧರ್ಮಬುದ್ಧಿಯ ಮೇಲೆ ಕಳ್ಳತನದ ಸುಳ್ಳು ಆಪಾದನೆ ಹೊರಿಸಿ ನ್ಯಾಯಾಧಿಕರಣದವರೆಗೂ ಎಳೆದು, ಕೊನೆಗೆ ದುಷ್ಟಬುದ್ಧಿಯು ತನ್ನ ಸಂಪತ್ತನ್ನು ಕಳೆದುಕೊಂಡು, ತಂದೆಯ ಸಾವಿಗೂ ಕಾರಣನಾಗುತ್ತಾನೆ. ಈ ಕಥೆಯು ಈ ಗಾದೆಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಸುಳ್ಳಿನ ಬಲೆಯಲ್ಲಿ ಸಿಲುಕಿದರೆ ಹೊರಬರುವುದು ಕಷ್ಟ. ಆದ್ದರಿಂದ ಸುಳ್ಳಿಗೆ ಸುಖವಿಲ್ಲ ಎಂಬುದನ್ನು ಅರಿತು ಸುಳ್ಳಿನ ದಾಸರಾಗಿ ಜೀವನವನ್ನು ಹಾಳು ಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಈ ಗಾದೆಯು ತಿಳಿಸುತ್ತದೆ.

**ಅಭ್ಯಾಸಕ್ಕಾಗಿ :**

1. ಮಾಡಿದ್ದುಣ್ಣೋ ಮಾರಾಯ.
2. ತಾಳಿದವನು ಬಾಳಿಯಾನು
3. 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'
4. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.
5. ಆಳಾಗಬಲ್ಲವನುಅರಸನಾಗಬಲ್ಲ
6. ಕೈ ಕೆಸರಾದರೆ ಬಾಯಿ ಮೊಸರು.
7. ಮನಸಿದ್ದರೆ ಮಾರ್ಗ.
8. ಕೂಡಿಬಾಳಿದರೆ ಸ್ವರ್ಗ ಸುಖ.
9. ಮಾತೇ ಮುತ್ತು, ಮಾತೇ ಮೃತ್ಯು.
10. ಎತ್ತುಏರಿಗೆ ಎಳೆಯಿತು ಕೋಣ ನೀರಿಗೆ ಎಳೆಯಿತು
11. ಗುಣನೋಡಿ ಗೆಳೆತನ ಮಾಡು.
12. ಬೆಕ್ಕಿ ಆಟ ಇಲಿಗೆ ಪ್ರಾಣ ಸಂಕಟ
13. ಉಪ್ಪುತಿಂದ ಮನೆಗೆ ದ್ರೋಹ ಬಗೆಯ ಬೇಡ
14. ದೇಶ ಸುತ್ತಿ ನೋಡು ಕೋಶ ಓದಿ ನೋಡು
15. ಅತಿಯಾಸೆ ಗತಿ ಕೆಡಿಸಿತು.
16. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
17. ದೂರದ ಬೆಟ್ಟ ನುಣ್ಣಗೆ
18. ತುಂಬಿದ ಕೊಡ ತುಳುಕುವುದಿಲ್ಲ
19. ಮಿಂಚಿಹೋದ ಕಾಳಕ್ಕೆ ಚಿಂತಿಸಿ ಫಲವೇನು?
20. ಬೆಳ್ಳಗಿರುವುದೆಲ್ಲ ಹಾಲಲ್ಲ

# ಕಂಠಪಾಠದ ಪದ್ಯಗಳು

**1. ಸಂಕಲ್ಪಗೀತೆ – ಜಿ. ಎಸ್. ಶಿವರುದ್ರಪ್ಪ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

**2. ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**3. ಹಲಗಲಿ ಬೇಡರು**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**4. ಕೌರವೇಂದ್ರನ ಕೊಂದೆ ನೀನು – ಕುಮಾರವ್ಯಾಸ**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**5. ಹಸುರು – ಕುವೆಂಪು**

ಹಸುರಾಗಸ ; ಹಸುರು ಮುಗಿಲು
ಹಸುರು ಗದ್ದೆಯಾ ಬಯಲು
ಹಸುರಿನ ಮಲೆ; ಹಸುರು ಕಣಿವೆ
ಹಸುರು ಸಂಜೆಯೀ ಬಿಸಿಲೂ !

**6. ಛಲಮೆನೆ ಮೆಚೆವೆಂ – ರನ್ನ**

ಪುಟ್ಟಿದ ನೂರ್ವರುಮೆನ್ನೊಡ।
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥
ಪುಟ್ಟಿ ಪೊದಟ ್ದದು ಸತ್ತರ್ ।
ಪುಟ್ಟರೆ ಪಾಂಡವರೊಳಿಚ ಿದು ಛಲಮನೆ ಮೆಚೆವೆಂ ॥

**7. ವೀರಲವ – ಲಕ್ಷ್ಮೀಶ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥

**8. ಕೆಮ್ಮನೆ ಮೀಸೆವೊತ್ತೆನೇ – ಪಂಪ**

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಚಿಂತೆನಗೆ ಕೆಳೆಯನೇ ನೂಂ
ಕಂತಪ್ಪನನಚ ಿಯೆನೆಂದು ಸಭೆಯೊಳ್ ನ್ಮಡಿದಂ

## ಮಾದರಿ ಪ್ರಶ್ನೆಪತ್ರಿಕೆಗಳು (ಉತ್ತರ ಸಹಿತ)

# ಮಾದರಿ ಪ್ರಶ್ನೆಪತ್ರಿಕೆ – 1

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ :** **6 X 1 = 6**

1. 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   (ಎ) ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಗುಣ ಸಂಧಿ ಡಿ) ಆದೇಶ ಸಂಧಿ
2. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ
   (ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ
   (ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ
3. ಹಳಗನ್ನಡ ಪಂಚಮೀ ವಿಭಕ್ತಿ ಪ್ರತ್ಯಯವಿದು.
   (ಎ) ಇಂದಂ (ಬಿ) ಅನ್ನು (ಸಿ) ಅತ್ತಣಿಂ (ಡಿ) ಒಳ್
4. 'ಹನುಮಭೀಮರಾಮರು' ಪದವು ಈ ಸಮಾಸಕ್ಕೆ ಉದಾಹರಣೆ:
   (ಎ) ತತ್ಪುರುಷ ಸಮಾಸ (ಬಿ) ಕರ್ಮಧಾರೆಯ ಸಮಾಸ
   (ಸಿ) ದ್ವಂದ್ವ ಸಮಾಸ (ಡಿ) ಕ್ರಿಯಾ ಸಮಾಸ.
5. ಈ ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದ.
   (ಎ) ಕೆನೆಮೊಸರು (ಬಿ) ಸುತ್ತಮುತ್ತ
   (ಸಿ) ಮಕ್ಕಳುಮರಿ (ಡಿ) ಊರೂರು
6. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಿದ್ದರೆ ಅದನ್ನು ಹೀಗೆನ್ನುವರು.
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ
   (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ:** **4 X 1 = 4**

7. ಮಾಡೋಣ : ವಿಧ್ಯರ್ಥಕ :: ಮಾಡರು ___________
8. ದ್ರೋಣ : ಅಂಕಿತನಾಮ :: ವಿದ್ಯಾರ್ಥಿ : ___________
9. ಪೆರ್ಮೆ : ತದ್ಧಿತಾಂತ ಭಾವನಾಮ :: ಮಾಡಲಿಕ್ಕೆ : ___________
10. ವಂಧ್ಯಾ : ಬಂಜೆ : : ಧಾತ್ರ : _______

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?
12. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
13. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?
14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?
15. ನದೀಜಲಗಳು ಏನಾಗಿವೆ?
16. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?
19. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?

20. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ?
22. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?
23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
25. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?
26. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?
27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6**

28. ದೇವನೂರ ಮಹಾದೇವ
29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ನೆಲಕಿಜಿವೆನೆಂದು ಬಗೆದಿರೆ।
ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. "ಮಾರಿಗೌತಣವಾಯ್ತು ನಾಳಿನ ಭಾರತವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಕೈ ಕೆಸರಾದರೆ ಬಾಯಿ ಮೊಸರು.

**ಅಥವಾ**

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ.** 6 x 3 = 18

33. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ."
34. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"
35. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"
36. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"
37. "ಜಾನಕಿಯ ಮಗನಿದಕೆ ಬೆದರುವನೆ"
38. "ಜಲಕ್ಕನೀಗಳರಜೆದೆಂ ಸಿರಿ ಕಳ್ವೊಡವುಟ್ಟಿತೆಂಬುದಂ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ನೀಲ ಮೇಘ ಮಂಡಲ ..............................................

..........................................................................

.......................................................................... .

.......................................... ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ ಯುಗಗಳ ...................................................

..........................................................................

..........................................................................

.......................................... ಹಕ್ಕಿ ಹಾರುತಿದೆ ನೋಡಿದಿರಾ?

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ವಿಲಾತಿಯಿಂದ ಹುಕುಮು ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ

ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4 = 4 [2+2]**

43. ಪುಟ್ಟರಾಜರು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಸಮಾಜದ ಜೊತೆ ಬೆರೆತು, ವಿಶ್ವದ ಕಣ್ಮಣಿಯಾಗಿದ್ದಾರೆ. ಪುಟ್ಟರಾಜರು ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ದೇವರ ಹೊಸಪೇಟೆಯ ವೆಂಕಟಾಪುರ ಮಠದ ಜಂಗಮ ದಂಪತಿಗಳಾದ ರೇವಣ್ಣಯ್ಯ ಮತ್ತು ಸಿದ್ದಮ್ಮ ಅವರ ಮಗನಾಗಿ 1914 ರ ಮಾರ್ಚ್ 3 ರಂದು ಜನಿಸಿದರು. ಬಾಲ್ಯದಲ್ಲಿಯೆ ಕಣ್ಣು ಕಳೆದುಕೊಂಡ ಅವರು "ನಾನು ಹುಟ್ಟಿದ ಆರು ತಿಂಗಳಿಗೆ ದೃಷ್ಟಿ ಹೋಗ್ಯಾವ, ಕಣ್ಣು ಬೇನೆ ಬಂದು ಕಣ್ಣಿಗೆ 'ಪರಿ' ಅಂತ ಬರತೈತಲ್ಲ, ಅಮ್ಮ 'ಅರೀ' ಅಂತಾರ. ಆವಾಗ ಬರೀ ನಾಟೀ ವೈದ್ಯ ಇತ್ತು. ಅವರು ಕಣ್ಣುಗುಡ್ಡಿಗೆ ತೊನಸಿಯನ್ನು (ನಾಯಿಯ ಮೈಯಲ್ಲಿರುವ ಹುಳು) ಮುಟ್ಟಿಸಬೇಕು ಅಂತ ಹೇಳಿದ್ದರು. ಆಗ ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣು ಒಳಗ ಬಿದ್ದುಬಿಟ್ಟವು. ಆವಾಗ ಅದು ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು." ಹೀಗೆ ಹೇಳುವಾಗ ಗವಾಯಿಗಳಲ್ಲಿ ಯಾವ ವೇದನೆಯೂ ಇರುತ್ತಿರಲಿಲ್ಲ.

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಮ್‌ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು.

**ಪ್ರಶ್ನೆಗಳು :**

ಅ) ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡಿದ್ದು ಹೇಗೆ?

ಆ) ಬಾಲಕ ಪುಟ್ಟಯ್ಯ ಹಾರ್ಮೋನಿಯಮ್ ನುಡಿಸಿದ ಪ್ರಸಂಗವನ್ನು ವಿವರಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5**

44. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ರಘುನಂದನ್' ಎಂದು ಭಾವಿಸಿಕೊಂಡು, 'ಕನ್ನಡ ವಿಶ್ವಕೋಶ' ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಗೊಂದು ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಶುಭ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ' ಕಾರ್ಯಕ್ರಮವನ್ನು ಕುರಿತು ಕೋಲಾರದಲ್ಲಿ ವಾಸವಾಗಿರುವ 'ಅನ್ನಪೂರ್ಣಮ್ಮ' ಎಂಬ ಹೆಸರಿನ ತಾಯಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಗ್ರಾಮಸ್ವರಾಜ್ಯ

**ಅಥವಾ**

ತ್ಯಾಜ್ಯವಸ್ತು ನಿರ್ವಹಣೆ

**********

# ಮಾದರಿ ಪ್ರಶ್ನೆಪತ್ರಿಕೆ – 2

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ಕಣ್ದೆರೆ' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಎ) ತತ್ಪುರುಷ ಬಿ) ದ್ವಿಗು ಸಿ) ಗಮಕ ಡಿ) ಕ್ರಿಯಾ
2. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆಇದು.
   ಎ) ಪೂರ್ಣ ವಿರಾಮ ಬಿ) ಅರ್ಧವಿರಾಮ ಸಿ) ಅಲ್ಪವಿರಾಮ ಡಿ) ಭಾವಸೂಚಕ
3. ಹಳಗನ್ನಡ ಸಪ್ತಮೀ ವಿಭಕ್ತಿ ಪ್ರತ್ಯಯವಿದು.
   ಎ) ಇಂದಂ ಬಿ) ಅನ್ನು ಸಿ) ಅತ್ತಣಿಂ ಡಿ) ಒಳ್
4. 'ಧಗಧಗ' ಪದ ಈ ಅವ್ಯಯಕ್ಕೆ ಉದಾಹರಣೆ.
   ಎ) ಅನುಕರಣಾವ್ಯಯ ಬಿ) ಸಾಮಾನ್ಯಾರ್ಥಕಾವ್ಯಯ ಸಿ) ಕ್ರಿಯಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ
5. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.
   ಎ) ಅವಧಾರಣೆ ಬಿ) ಸಾಮಾನ್ಯ ಅವ್ಯಯ ಸಿ) ಸಂಬಂಧಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ
6. ಇವುಗಳಲ್ಲಿ ವಿಧ್ಯರ್ಥಕ ಕ್ರಿಯಾರೂಪವಿದು.
   ಎ) ಮಾಡೀತು ಬಿ) ಮಾಡದು ಸಿ) ಮಾಡಲಿ ಡಿ) ಮಾಡಿಯಾವು

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ಯುದ್ಧ : ಜುದ್ಧ : : ಯಜ್ಞ : ____________
8. ಸ್ವರಗಳು : ಹದಿಮೂರು : : ಯೋಗವಾಹಕಗಳು : ________
9. ಊರೂರು : ಲೋಪಸಂಧಿ : : ಕೈಯನ್ನು : ___________
10. ಅಬ್ಬೆ : ತಾಯಿ : : ಅರ್ತಿ : ____________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು ?
12. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
13. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
14. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?
15. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
16. ಕಾಡುಮೇಡುಗಳ ಸ್ಥಿತಿ ಹೇಗಿದೆ?
17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು ?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
20. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
21. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
22. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?
23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
24. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

25. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?

26. ರಾಜರ ಪ್ರಕೃತಿ ಹೇಗಿರುತ್ತದೆ ?

27. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2 x 3 = 6**

28. ಎ.ಎನ್. ಮೂರ್ತಿರಾವ್

29. ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. "ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**ಅಥವಾ**

ಆಳಾಗಬಲ್ಲವನು; ಅರಸಾಗಬಲ್ಲನು.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

34. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

35. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"

36. "ಮುಂಗಾರಿನ ಮಳೆಯಾಗೋಣ."

37. "ಹೊಸಗಾಲದ ಹಸುಮಕ್ಕಳ ಹರಸಿ"

38. "ಜೀವ ಸತ್ತು ಹೋಗುವುದು ಗೊತ್ತ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

________________________

______________________________________

________________________

________________________

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

**ಅಥವಾ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

________________________

______________________________________

________________________

________________________

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು. ॥

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ॥
ಸಮಕೊಳಿಸಲೆಂದು ಬಂದೆನೆ।
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಸಪ್ತವ್ಯಸನಿಗಳಾಗಿದ್ದ ಅಗ್ನಿಭೂತಿ ವಾಯುಭೂತಿಯರು ಪಂಡಿತರಾದುದು ಹೇಗೆ?

**ಅಥವಾ**

ಸೂರ್ಯಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ.

42. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಅಥವಾ**

ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

**XIII. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತರ ಬರೆಯಿರಿ. 2x2= 4**

43. ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದನು. ಆ ಸಂದರ್ಭದಲ್ಲಿ ಮರದ ಆಶ್ರಯ ಪಡೆದ ಬಳ್ಳಿಯು ಹೂ ಅರಳಿಸಿ ಸುಗಂಧವನ್ನು ಹೊರ ಸೂಸಿತು. ತಾಯಿ ಹಕ್ಕಿಯೊಂದು ತನ್ನ ಮರಿಗೆ ಆಹಾರವನ್ನು ಕೊಟ್ಟು ಸಂತೋಷದಿಂದ ಹಾರಾಡಿತು. ಇರುವೆಗಳು ಹುತ್ತದಿಂದ ಸಾಲು-ಸಾಲಾಗಿ ಹೊರಗೆ ಬರುವಂತೆ, ಬೆಳ್ಳಕ್ಕಿಗಳು ಗುಂಪು-ಗುಂಪಾಗಿ ಉದ್ದನೆಯ ಸಾಲು ಮಾಡಿ ಆಕಾಶಕ್ಕೆ ಏಣಿ ಹಾಕಿದಂತೆ ಪ್ರಕೃತಿಯಲ್ಲಿ ವಿಸ್ಮಯ ಕಂಡು ಬಂದಿತು. ಪ್ರಪಂಚದ ಐಹಿಕ ಸುಖಗಳಿಂದ ದೂರವಾದ ಸಿದ್ಧಾರ್ಥನ ಮನಸ್ಸು ಸಂತೋಷದಿಂದ ನಲಿಯಿತು. ಕಾಡಿನ ತುಂಬ ಪ್ರೀತಿಯೆಂಬ ಅಲೆಯು ನೀರಿನಂತೆ ಹರಿಯಿತು. ಹಕ್ಕಿಗಳ ಗೂಡಿನಲ್ಲಿ ಹಾಡು ಹುಟ್ಟಿ, ಹೊಸ ರಾಗ ಹಾಡುವಂತೆ, ಹೂವಿನಲ್ಲಿರುವ ಮಕರಂದವನ್ನು ಸವಿಯಲು ದುಂಬಿಯು ಹೂವನ್ನು ಸೇರುವಂತೆ, ಮರ-ಗಿಡಗಳು ಪರಸ್ಪರ ಅಪ್ಪಿಕೊಂಡು ಕುಣಿಯುವಂತೆ, ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಸಂತೋಷದಿಂದ ಮುಂದೆ ನಡೆದನು.

**ಪ್ರಶ್ನೆಗಳು :**

ಅ) ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಹೇಗೆ ಬಂದನು?

ಆ) ಸಿದ್ಧಾರ್ಥನಿಗೆ ಜ್ಞಾನೋದಯವಾದಾಗ ಪ್ರಕೃತಿಯಲ್ಲಾದ ವಿಸ್ಮಯವೇನು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5= 5**

44. ನಿಮ್ಮನ್ನು ಧಾರವಾಡದ ಕಾಡ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ ನಂದನ್/ ನಂದಿತ ಎಂದು ಭಾವಿಸಿಕೊಂಡು ನಿಮ್ಮ ಜಿಲ್ಲಾ ಮಟ್ಟದಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಬೆಂಗಳೂರಿನಲ್ಲಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ದಾವಣಗೆರೆಯ ಮುರಾರ್ಜಿದೇಸಾಯಿ ವಸತಿಶಾಲೆಯ ವಿದ್ಯಾರ್ಥಿ 'ನರೇಶ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಸ್ವಚ್ಛ ಭಾರತ ಅಭಿಯಾನ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

**************

# ಮಾದರಿ ಪ್ರಶ್ನೆಪತ್ರಿಕೆ – 3

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ಕೋಟ್ಯಧೀಶ್ವರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಜಶ್ತ್ವಸಂಧಿ ಬಿ) ಶ್ಚುತ್ವಸಂಧಿ ಸಿ) ಯಣ್‌ಸಂಧಿ ಡಿ) ವೃದ್ಧಿಸಂಧಿ
2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.
   ಎ) ವಿವರಣಾತ್ಮಕ ಚಿಹ್ನೆ ಬಿ) ವಾಕ್ಯವೇಷ್ಟನಚಿಹ್ನೆ ಸಿ) ಉದ್ಧರಣ ಚಿಹ್ನೆ ಡಿ) ಆವರಣಚಿಹ್ನೆ
3. ಸಪ್ತಮೀ ವಿಭಕ್ತಿಯ ಕಾರಕಾರ್ಥವಿದು.
   ಎ) ಅಪಾದಾನ ಬಿ) ಸಂಪ್ರದಾಯ ಸಿ) ಅಧಿಕರಣ ಡಿ) ಸಂಬಂಧ
4. ಇದು ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಾಗಿದೆ.
   ಎ) ಅವನೇ ಬಿ) ಆಹಾ! ಸಿ) ಆದ್ದರಿಂದ ಡಿ) ದಡದಡ
5. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ.
   ಎ) ಸಿರಿತನ ಬಿ) ಕನ್ನಡಿಗ ಸಿ) ನಿನಗಾಗಿ ಡಿ) ಮಾಲೆಗಾರ
6. 'ಇಸವಾಸ' ಪದದ ಗ್ರಾಂಥಿಕ ರೂಪವಿದು.
   ಎ) ವಿಶೇಷ ಬಿ) ವಿಶ್ವಾಸ ಸಿ) ವಿಷವಾಸ ಡಿ) ವಿಶದ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ಮೆಲ್ಲಮೆಲ್ಲನೆ : ದ್ವಿರುಕ್ತಿ :: ಮಕ್ಕಳುಮರಿ : ______
8. ಪಾದುಕಾ : ಹಾವುಗೆ :: ಅಂಕುಶ : ________
9. ಇಮ್ಮಾವು : ಕರ್ಮಧಾರಯ ಸಮಾಸ :: ನೇಯ್ದುವಸ್ತ್ರ : ________
10. ಅವರು : ಪ್ರಥಮಪುರುಷ :: ತಾವು : ________

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
12. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
13. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?
14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?
15. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?
16. ಹಲಗಲಿ ಗುರುತು ಉಳಿಯದಂತಾದುದು ಏಕೆ?
17. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
19. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
21. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
22. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?
23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?
24. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?
25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

26. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

27. ಗುರೂಪದೇಶವು ಯಾರಿಗೆ ಮೆಚ್ಚಿಗೆ ಯಾಗುವುದಿಲ್ಲ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6**

28. ಲೇಖಕಿ ಸಾ ರಾ ಅಬೂಬಕ್ಕರ್

29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. "ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಕೂಡಿಬಾಳಿದರೆ ಸ್ವರ್ಗ ಸುಖ.

**ಅಥವಾ**

ಮಾತೇ ಮುತ್ತು, ಮಾತೇ ಮೃತ್ಯು

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಸಂಸ್ಕೃತಿಯ ಇತಿಹಾಸ ಉಳಿಯಿತು"

34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

35. "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ "

36. "ಸಾರ್ವಭೌಮರಾ ನೆತ್ತಿಯ ಕುಕ್ಕಿ"

37. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

38. 'ಈಗಳೊಂದಡಕೆಯುಮಿಲ್ಲ ಕೈಯೊಳ್ '

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಕಲುಷಿತವಾದೀ .................................... **ಅಥವಾ** ಮತಗಳೆಲ್ಲವೂ....................................

.......................................... ಮುಟ್ಟೋಣ ............................................. ಬಿತ್ತೋಣ

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4 = (2+2)**

43. ಕೆಲವು ದಿನಗಳ ತರುವಾಯ ರಂಗಣ್ಣ ಸ್ಕೂಲುಗಳ ಭೇಟಿಗೆಂದು ಹೊರಟ. ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೋ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ತಿಪ್ಪೇನಹಳ್ಳಿಗೆ ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಹೋದ. ರಂಗಣ್ಣ ಬೈಸ್ಕಲ್ಲಿಂದ ಇಳಿದು, ಆದನ್ನು ಗೋಡೆಗೆ ಒರಗಿಸಿದನು. ಮೇಷ್ಟ್ರು ವೆಂಕಣ್ಣ ಭಯದಿಂದ ನಡುಗುತ್ತ ಹೊರಕ್ಕೆ ಬಂದು ನಮಸ್ಕಾರ ಮಾಡಿದನು. ಪಾಠಶಾಲೆಯ ಗೋಡೆಗೆ ನೋಟೀಸ್ ಬೋರ್ಡ್ 1) ಮೇಲೆ ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. 2) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು. 3) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. 4) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು. ಎಂದು ಬರೆಯಲಾಗಿತ್ತು. – ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು. ರಂಗಣ್ಣ ಅವುಗಳನ್ನೆಲ್ಲಾ ನೋಡಿ ತೃಪ್ತಿಪಟ್ಟುಕೊಂಡನು. **"**ಮೇಷ್ಟ್ರೇ! ಹಿಂದೆ ಸಾಹೇಬರು ಬಂದಾಗ ಈ ನೋಟೀಸ್ ಬೋರ್ಡ್‌ನ್ನು ಇಲ್ಲಿ ಹಾಕಿರಲಿಲ್ಲವೇ?**"** ಎಂದು ಕೇಳಿದನು.

**ಪ್ರಶ್ನೆಗಳು:**

ಎ) ತಿಪ್ಪೇನಹಳ್ಳಿ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು?

ಬಿ) ರಂಗಣ್ಣ ತಿಪ್ಪೇನಹಳ್ಳಿ ಶಾಲೆಗೆ ಭೇಟಿ ನೀಡಲು ಕಾರಣವೇನು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5= 5**

44. ನಿಮ್ಮನ್ನು ಹಾಸನದ ವಿಜಯನಗರದ ನಿವಾಸಿ **'ವಸಂತಕುಮಾರ್'** ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಉಂಟಾದ ಪ್ರವಾಹದ ಪರಿಸ್ಥಿತಿಯನ್ನು ವಿವರಿಸಿ, ಪರಿಹಾರ ಕಾರ್ಯಕ್ಕೆಗೊಳ್ಳುವಂತೆ ಕೋರಿ ಜಿಲ್ಲಾಧಿಕಾರಿಗೊಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ರಕ್ಷಿತ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಕುರಿತು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ **'ಹರ್ಷಿಕ'** ಎಂಬ ಹೆಸರಿನ ಗೆಳೆತಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಮಹಿಳಾ ಸಬಲೀಕರಣ,

**ಅಥವಾ**

ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ.

***********

# ಮಾದರಿ ಪ್ರಶ್ನೆಪತ್ರಿಕೆ – 4

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಗುಣ ಸಂಧಿ ಬಿ) ಜಶ್ತ್ವಸಂಧಿ
   ಸಿ) ವೃದ್ಧಿ ಸಂಧಿ ಡಿ) ಶ್ಚುತ್ವ ಸಂದಿ
2. 'ತೊಡುಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:
   **1.** ಎ) ಕೃದಂತನಾಮ ಬಿ) ಕೃದಂತ ಭಾವನಾಮ
   **2.** ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ಭಾವನಾಮ
3. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   ಎ) ತತ್ಪುರುಷ ಸಮಾಸ ಬಿ) ದ್ವಿಗುಸಮಾಸ
   ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ
4. 'ಮಾಡು' ಧಾತುವಿನ ವಿಧ್ಯರ್ಥಕ ರೂಪ
   ಎ) ಮಾಡೇವು ಬಿ) ಮಾಡಿಯಾರು
   ಸಿ) ಮಾಡರು ಡಿ) ಮಾಡಲಿ
5. 'ಸಾವಿತ್ರಿಗೆ' ಈ ಪದದಲ್ಲಿರುವ ವಿಭಕ್ತಿ
   ಎ) ಪ್ರಥಮಾ ಬಿ) ದ್ವಿತೀಯಾ
   ಸಿ) ತೃತೀಯ ಡಿ) ಚತುರ್ಥಿ
6. 'ವಿದ್ಯಾಧರ' ಪದದ ತದ್ಭವ ರೂಪ ಇದಾಗಿದೆ.
   ಎ) ಗಣಪತಿ ಬಿ) ಬಿಜ್ಜೋಧರ
   ಸಿ) ವಿನಾಯಕ ಡಿ) ಶಶಿಧರ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ವರ್ಗೀಯ ವ್ಯಂಜನಾಕ್ಷರಗಳು : 25 :: ಅವರ್ಗೀಯ ವ್ಯಂಜನಾಕ್ಷರಗಳು : __________
8. ಹಾಲ್ಜೇನು : ಜೋಡುನುಡಿ :: ಬೇಡಬೇಡ : ______________
9. ಪರ್ವತ : ರೂಢನಾಮ :: ಧರ್ಮರಾಯ : ______________
10. ಮ್ಯಾಗ : ಮೇಲೆ :: ಸಕ್ಕಾರಿ : __________

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಹುಲಿಗೆ ಪರಮಾನಂದವಾಗಲು ಕಾರಣವೇನು?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
13. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು?
14. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
15. ಹಕ್ಕಿಯ ಕಣ್ಣುಗಳು ಯಾವುವು?
16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
17. ಯಾರ ಕಿವಿಗೆ ಉಪದೇಶ ನಾಟವುದಿಲ್ಲ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
19. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
20. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?
22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
23. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?

24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು ?
26. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನದ ಬಗ್ಗೆ ಗೋವಿಂದ ಪೈ ಅವರು ಏನೆಂದು ಹೇಳಿದ್ದಾರೆ?
27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2x 3 = 6**

28. ಪು. ತಿ. ನರಸಿಂಹಾಚಾರ್
**29**. ದ. ರಾ. ಬೇಂದ್ರೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

**30**. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. "ಸೀತೆಯ ಮುಖ ಕಮಲದಂತೆ ಅರಳಿತು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ತಾಳಿದವನು ಬಾಳಿಯಾನು.

**ಅಥವಾ**

ಮನಸಿದ್ದರೆ ಮಾರ್ಗ.

**IX ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಒಬ್ಬ ತಾಯಿಯ ಗಾನದ ಶ್ರುತಿಯಂತೆ"
34. "ಸಾಮಾಜಿಕ ಕಾನೂನುಗಳ ಹರಿಕಾರ."
35. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!
36. "ಹಸುರಾದುದು ಕವಿಯಾತ್ಮಂ"
37. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"
38. 'ವಿದ್ಯಾಧನಮೆ ಧನಮಪ್ಪುದು'

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ನೆಲಕಿಜೆವೆನೆಂದು ಬಗೆದಿರೆ
______________________________
________________
________________ ಪುದುವಾಟ್ದಪೆನೇ

**ಅಥವಾ**

ಪುಟ್ಟಿದ ನೂರ್ವರುಮೆನ್ನೊಡ
______________________________
________________
________________ ಛಲಮನೆ ಮೆಱೆವೆಂ

**XI ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

**ಅಥವಾ**

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 4= (2+2)

43. ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗ ಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು; ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರ ಪಡಬಲ್ಲ. ಸಾಹಿತ್ಯಿಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲೂ ಬಲ್ಲ. ಆದರೆ ಉಳಿದ ಹೃದಯಗಳ ಆಸೆಗಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು. ಏಕೆಂದರೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತದೆ. ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ. ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?

**ಪ್ರಶ್ನೆಗಳು :**

ಅ) ಉಳಿದವರ ಯೋಗ ಕ್ಷೇಮ ನೋಡಿಕೊಳ್ಳುವುದು ಅಂತರ್ಜೀವಿಗೆ ಸಮಸ್ಯೆಯಾಗಲು ಕಾರಣಗಳೇನು

ಆ) ಅಂತರ್ಜೀವಿಯ ಲಕ್ಷಣಗಳನ್ನು ಪಟ್ಟಿ ಮಾಡಿರಿ.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1x 5= 5

44. ನಿಮ್ಮನ್ನು ರಾಮನಗರ ಸರ್ಕಾರಿ ಪ್ರೌಢಶಾಲೆಯ 'ಅಕುಲ/ ಸಹನ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರೋಪ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಹನುಮಂತನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ನಳಿನಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ ಮಂಡ್ಯದಲ್ಲಿರುವ ಚಂದ್ರಶೇಖರ್ ಎಂಬ ನಿಮ್ಮ ಚಿಕ್ಕಪ್ಪ ಅವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 X 5 = 5**

**45.** ಗ್ರಂಥಾಲಯಗಳ ಮಹತ್ವ

**ಅಥವಾ**

ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ

***************

# ಮಾದರಿ ಪ್ರಶ್ನೆಪತ್ರಿಕೆ – 5

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ. 6 X1 = 6**

1. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು
   ಎ) ಶಸ್ತ್ರ  ಬಿ) ಎಚ್ಚರ
   ಸಿ) ಅದ್ಭುತ  ಡಿ) ಅಕ್ಷರ
2. ಸನ್ಮಾನ–ಪದವು ಈ ಸಂಧಿಗೆ ಉದಾಹರಣೆ :
   ಎ) ಅನುನಾಸಿಕಸಂಧಿ  ಬಿ) ಆಗಮಸಂಧಿ
   ಸಿ) ಜಶ್ತ್ವಸಂಧಿ  ಡಿ) ಸವರ್ಣದೀರ್ಘಸಂಧಿ
3. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು
   ಎ) ಸಾಮಾನ್ಯವಾಕ್ಯ  ಬಿ) ಮಿಶ್ರವಾಕ್ಯ
   ಸಿ) ಪ್ರಶ್ನಾರ್ಥಕವಾಕ್ಯ  ಡಿ) ಸಂಯೋಜಿತವಾಕ್ಯ
4. ಷಷ್ಠೀ ವಿಭಕ್ತಿಯ ಕಾರಕಾರ್ಥ
   ಎ) ಸಂಬಂಧ  ಬಿ) ಅಧಿಕರಣ
   ಸಿ) ಸಂಪ್ರದಾನ  ಡಿ) ಅಪಾದಾನ
5. 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ.
   ಎ) ಭಾವನಾಮ  ಬಿ) ರೂಢನಾಮ
   ಸಿ) ಅನ್ವರ್ಥನಾಮ  ಡಿ) ಅಂಕಿತನಾಮ
6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ
   ಎ) ಉದ್ಧರಣ ಚಿಹ್ನೆ  ಬಿ) ಆವರಣ ಚಿಹ್ನೆ
   ಸಿ) ಭಾವಸೂಚಕ ಚಿಹ್ನೆ  ಡಿ) ವಾಕ್ಯವೇಷ್ಟನ ಚಿಹ್ನೆ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4 X1 = 4**

7. ಕಟ್ಟಕಡೆಗೆ : ದ್ವಿರುಕ್ತಿ :: ಹುಳಹುಪ್ಪಡಿ ___________
8. ಸ್ಥಾನ : ತಾಣ :: ವಂಧ್ಯಾ :: ___________
9. ಆ ಕಲ್ಲು : ಗಮಕ ಸಮಾಸ :: ಕಣ್ದೆರೆ ___________
10. ಕುರ್ಚಿ : ಹಿಂದುಸ್ಥಾನಿ :: ಇಲಾಖೆ : ___________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 X1 = 7**

11. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?
12. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
13. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
14. ವಚನಕಾರರಿಗೆ ಯಾವುದು ದೇವರಾಗಿತ್ತು?
15. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
16. ಹಲಗಲಿ ಗ್ರಾಮ ಎಲ್ಲಿದೆ?
17. ಆಲಿಯನ್ ವಾಲಾಭಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 x 2 = 20**

18. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
19. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
20. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
21. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

23. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
24. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?
25. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.
26. ರಾಜರ ಪ್ರಕೃತಿ ಹೇಗಿರುತ್ತದೆ ?
27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6**

28. ವಿ.ಕೃ. ಗೋಕಾಕ್
29. ಜಿ. ಎಸ್. ಶಿವರುದ್ರಪ್ಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು।

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. **ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಕಟ್ಟುವುದು ಕಠಿಣ; ಕೆಡಹುವುದು ಸುಲಭ. **ಅಥವಾ** ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಹುಲಿ ಈಗ ಎಷ್ಟು ಹಸಿದಿರಬೇಕು."
34. "ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ"
35. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"
36. "ನಿನ್ನಪದೆಸೆಯ ಬಯಸುವನಲ್ಲ"
37. "ಮೇಣಾಯ್ತು ಕೌರವಂಗವನಿತಳಂ."
38. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಹಸುರಾಗಸ ______________

______________

______________ಬಿಸಿಲು

**ಅಥವಾ**

ಹೊಸ ಹೂವಿನ ______________

______________

______________

______________ಯುಸಿರೂ!

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ?

**ಅಥವಾ**

ಕನ್ನಡಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ? ವಿವರಿಸಿ.

42. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

**ಅಥವಾ**

ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** **4 = (2+2)**

43. ಸಿ. ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು:

ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?

ಆ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x 5= 5**

44. ನಿಮ್ಮನ್ನು ದೇವನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ಅದ್ವಿತ್ ಎಂದು ಭಾವಿಸಿಕೊಂಡು ಬೀದಿದೀಪ ಸರಿಪಡಿಸುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆಗೊಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ಅಶ್ವತ್ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಸದ್ಭಾವನಾ ದಿನವನ್ನು ವಿವರಿಸಿ ಬೆಂಗಳೂರಿನ ವಿವೇಕನಂದ ನಗರದ ನಿವಾಸಿಯಾದ ಕಸ್ತೂರಿ ಎಂಬ ಹೆಸರಿನ ತಾಯಿಯವರಿಗೊಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 X 5 = 5**

45. ಸ್ವಚ್ಛಭಾರತ ಅಭಿಯಾನ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

***************

# ಮಾದರಿ ಉತ್ತರಗಳು – 1

| 1. ಗುಣಸಂಧಿ | 2. ಆವರಣ ಚಿಹ್ನೆ | 3. ಅತ್ತಣಿಂ | 4. ದ್ವಂದ್ವ ಸಮಾಸ | 5. ಊರೂರು | 6. ಸಂಯೋಜಿತ ವಾಕ್ಯ |
|---|---|---|---|---|---|

| 7. ನಿಷೇಧಾರ್ಥಕ | 8. ಅನ್ವರ್ಥನಾಮ | 9. ಕೃದಂತಾವ್ಯಯ | 10. ದಾತಾರ |
|---|---|---|---|

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ.
12. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು **'ಬ್ಲಾಕ್‌ಔಟ್'** ನಿಯಮವನ್ನು ಪಾಲಿಸಲಾಗುತ್ತದೆ.
13. **'ವೆಸ್ಟ್ ಮಿನ್‌ಸ್ಟರ್ ಅಬೆ'** ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ.
14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು **ಅಗ್ನಿಭೂತಿ ಮತ್ತು ವಾಯುಭೂತಿ.**
15. ನದೀಜಲಗಳು ಕಲುಷಿತವಾಗಿವೆ.
16. ಶ್ರೀಕೃಷ್ಣನು ಕರ್ಣನ ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ ಪೀಠದಲ್ಲಿ ಕೂರಿಸಿದನು.
17. ಪುಟ್ಟ ಪೋರಿ ಹೊರಗೆ ಮುಸುರೆ ತಿಕ್ಕುತ್ತಿದ್ದಾಳೆ.

18. ವ್ಯಾವಹಾರಿಕವೆಂದರೆ ಜೀವದ್ಭಾಷೆ, ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ, ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದ್ದು ಇದಕ್ಕೆ ಉದಾಹರಣೆ: ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ, ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಹಾಗೆಯೇ ಎಲ್ಲ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ದೇವಭಾಷೆ ಎನ್ನಿಸಿಕೊಂಡ ಸಂಸ್ಕೃತ ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆಯಾಗಿದೆ. ಆದರೆ ಇಂದು ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ.
19. ಲಕ್ಷ್ಮಣನು **"ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು**? **ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು**? ಎಂದು ಅಣ್ಣನನ್ನು ಸಂತೈಸಿದನು.
20. ರಾಮನ ಸ್ವಾಗತಕ್ಕಾಗಿ ಶಬರಿ ಕಡು ಸವಿಯಾದ ಬಗೆಬಗೆಯ **ಹಣ್ಣು – ಹಂಪಲುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ತಳಿರು, ಸುವಾಸನೆಯಿಂದ ಕೂಡಿದ ಹೂವುಗಳನ್ನು** ಸಂಗ್ರಹಿಸಿ ಸಿದ್ಧತೆ ಮಾಡಿಕೊಂಡಿದ್ದಳು.
21. ಸೋಮಶರ್ಮನು ಮರಣ ಹೊಂದಿದಾಗ ಇವನ ಮಕ್ಕಳನ್ನು ದೊರೆಯು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿ ಬೀಳ್ಕೊಟ್ಟನು. ಕೆಲದಿನ ಕಳೆದ ಮೇಲೆ ಮತ್ತೆ ಇವರಿಬ್ಬರನ್ನೂ ರಾಜನು ಅರಮನೆಗೆ ಕರೆಸಿಕೊಂಡು **"ನೀವು ಏನೇನು ಓದಿರುವಿರಿ?"** ಎಂದು ಕೇಳಿದಾಗ ಇವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಂಬನಿ ಸೂಸಿದರು. ಇವರ ಕಂಬನಿಯು ನೆಲದಲ್ಲಿ ಚಿತ್ತಾರವಾಯಿತು. **"ಇವರು ಕಡುಮೂರ್ಖರು. ಇವರು ಏನನ್ನೂ ಓದಿಲ್ಲ. ಇವರು ಸಪ್ತವ್ಯಸನದಲ್ಲಿ ಮುಳುಗಿರುವರು"** ಎಂದು ಸಭಾಸದರು ಅರಸನಲ್ಲಿ ನಿವೇದಿಸಿ, ಮೂರ್ಖರೆಂದು ತೀರ್ಮಾನಿಸಿದರು.
22. ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಆಸ್ತಿ ಅಂತಸ್ತು, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗಬೇಕಿದೆ.
23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ" ಎಂದು ಬರೆಯಲಾಗಿತ್ತು.
24. ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಅವಶ್ಯಕ ಅಂಶವಲ್ಲವೆಂಬ ಭಾವನೆ ಇಂಗ್ಲೆಂಡ್‌ಗೆ ಹೋಗುವವರೆಗೆ ಗಾಂಧೀಜಿಯವರಲ್ಲಿತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು. ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಎಂಬುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರು ಅಭಿಪ್ರಾಯವಾಗಿದೆ.

25. ಶ್ರೀಗಂಧವನ್ನು ಕಡಿದು ಕೊರೆದು ತೇದರೂ ನೋವು ಅಂತ ಕಂಪನ್ನು ಬಿಡುವುದಿಲ್ಲ. ಬಂಗಾರವು ಬೆಂಕಿಯಲ್ಲಿ ಬೆಂದು ಚಿನ್ನವಾಗುತ್ತದೆ. ಕಬ್ಬನ್ನು ತಂದು ಗಾಣದಲ್ಲಿ ಹಾಕಿ ಅರೆದರು. ಅದು ಸಿಹಿಯನ್ನು ಕೊಡದೆ ಇರುವುದಿಲ್ಲ. ಹಾಗೆ ಭಗವಂತನಲ್ಲಿ ಶರಣಾಗಬೇಕು ಎಂದು ಅಕ್ಕಮಹಾದೇವಿಯ ವಚನದಲ್ಲಿ ಹೀಗೆ ವ್ಯಕ್ತಗೊಂಡಿದೆ.

26. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'(ಸ್ನಾನ). ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ.

27. ಮಹಿಳಾ ಶೋಷಣೆಂಬುದು ಬ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನ್ನೂ ಆಕ್ರಮಿಸಿಕೊಂಡಿದೆ. ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ. ಸಾಮಾಜಿಕ ನ್ಯಾಯ ದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬ ಆಶಯ ಹೊಂದಿದೆ.

28. ದೇವನೂರ ಮಹಾದೇವರವರು ಕ್ರಿ.ಶ. 1949 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು.
ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾದ ಇವರು **'ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ'** ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ** ಪ್ರಶಸ್ತಿಗಳು ಲಭಿಸಿವೆ.

29. ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪನು ಕ್ರಿ.ಶ.1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು.
ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ **'ಕರ್ಣಾಟ ಭಾರತಕಥಾಮಂಜರಿ'** ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ **'ಐರಾವತ'** ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ.
ಇವರು **"ರೂಪಕ ಸಾಮ್ರಾಜ್ಯ ಚಕ್ರವರ್ತಿ"** ಎಂಬ ಬಿರುದಿಗೆ ಪಾತ್ರನಾಗಿದ್ದಾರೆ.

30.

| 4 | 4 | 4 | = 12 |
|---|---|---|---|
| ∪∪∪∪ | ∪–∪ | ∪∪∪∪ | |
| ನೆಲಕಿಜೆ | ವೆನೆಂದು | ಬಗೆದಿರೆ | |

| 4 | 4 | 4 | 4 | 4 | =12 |
|---|---|---|---|---|---|
| ∪∪∪∪ | –– | ∪∪∪∪ | –∪∪ | ∪∪– | |
| ಚಲಕಿಜೆ | ವೆಂ ಪಾಂ | ಡುಸುತರೊ | ಳೀನೆಲ | ನಿದು ಪಾ | |

**ಛಂದಸ್ಸು – ಕಂದಪದ್ಯ**

31. ಅಲಂಕಾರ : ರೂಪಕಾಲಂಕಾರ
ಲಕ್ಷಣ : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
ಉಪಮೇಯ : ನಾಳಿನ ಭಾರತಯುದ್ಧ
ಉಪಮಾನ : ಮಾರಿಯ ಔತಣ
ಸಮನ್ವಯ : ಇಲ್ಲಿ ಉಪಮೇಯವಾದ 'ನಾಳಿನ ಭಾರತ ಯುದ್ಧ'ವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ. ಆದುದರಿಂದ ಇದು ರೂಪಕಾಲಂಕಾರ.

32. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. **'ಕೈ ಕೆಸರಾದರೆ ಬಾಯಿ ಮೊಸರು'** ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಕಷ್ಟಪಟ್ಟು ದುಡಿದರೆ ಸುಖ ಎಂಬರ್ಥವನ್ನು ಕೊಡುತ್ತದೆ. ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು ಎಂಬ ಮಾತಿದೆ. ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವಿರಬೇಕು. ಕಷ್ಟಪಟ್ಟು ದುಡಿದರೆ ಜೀವನ ಸುಖವಾಗಿರುತ್ತದೆ. **'ಕರ್ಮಣ್ಯೇವಾಧಿಕಾಸ್ತೇ ಮಾ ಫಲೇಷು ಕದಾಚನ'** ಎಂಬ ಗೀತೆಯ ಮಾತು ಇದನ್ನೇ ಹೇಳುವುದು.

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. **'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. **"ಕಟ್ಟುವುದು ಕಠಿಣ ಕೆಡವುಹುದು ಸುಲಭ"** ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಅರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು, ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳುಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

33. **ಆಯ್ಕೆ :** ಈ ವಾಕ್ಯವನ್ನು **ಎ. ಎನ್. ಮೂರ್ತಿರಾವ್** ಅವರ **'ಸಮಗ್ರ ಲಲಿತ ಪ್ರಬಂಧಗಳು'** ಎಂಬ ಸಂಕಲನದಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಹುಲಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕೆಂದು ಪ್ರಯತ್ನಿಸಿ ವಿಫಲವಾದಾಗ ಬೆನ್ನ ಹಿಂದಿನಿಂದ ಬಿದ್ದೇ ಬಿಡಲೆ ಎಂದು ಅದರ ಮನಸ್ಸಿನಲ್ಲಿ ಗೊಂದಲ. ಆದರೆ ಆ ಗೊಂದಲ ಕ್ಷಣಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲಲಿಲ್ಲ. ಅದು ಸದ್ವಂಶದಲ್ಲಿ ಜನಿಸಿದ ಹುಲಿ. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕವ್ತಿದೆಕೋ" ಎಂದು ಆ ಪುಣ್ಯಕೋಟಿ ಹಸು ಆಹ್ವಾನ ಕೊಟ್ಟಾಗ ತನ್ನ ಅಜ್ಜ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನಬಹುದಾಗಿತ್ತು. ಆದರೂ ಆ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟಿತು. ಅಂಥ ಹುಲಿಯ ಮೊಮ್ಮಗನಾಗಿ ಹುಟ್ಟಿದ ನಾನು ಅಧರ್ಮಕ್ಕೆ ಕೈ ಹಾಕುವುದೆ? ಎಂದು ಹುಲಿ ಯೋಚಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಪುಣ್ಯಕೋಟಿ ಕಥೆಯಲ್ಲಿನ ವ್ಯಾಘ್ರನ ಆದರ್ಶ ತನಗೂ ಮಾದರಿಯಾದದ್ದು ಎಂಬ ಈ ಹುಲಿಯ ಚಿಂತನೆ ಅದರ ಆದರ್ಶ ಹಾಗೂ ಧರ್ಮಶ್ರದ್ಧೆಯನ್ನು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ.

34. **ಆಯ್ಕೆ :** ಈ ವಾಕ್ಯವನ್ನು **'ಶ್ರೀಮತಿ ಸಾ ರಾ ಅಬೂಬಕ್ಕರ್'** ಅವರ **'ಚಪ್ಪಲಿಗಳು'** ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ವೈದ್ಯ ಸೈನಿಕನಾದ ರಾಹಿಲನು ಮುದುಕಿಗೆ ಹೇಳಿದನು. ಯುದ್ಧದಲ್ಲಿ ಗಾಯಗೊಂಡು ಸಮುದ್ರಕ್ಕೆ ಬಿದ್ದ ರಾಹಿಲನು ಈಜುತ್ತ ದಡವನ್ನು ಸೇರುತ್ತಾನೆ. ದಡದಲ್ಲಿದ್ದ ಒಂಟಿ ಮನೆಯನ್ನು ನೋಡಿ ಅಲ್ಲಿಗೆ ಬರುತ್ತಾನೆ. ರಾಹಿಲ್ ತೆವಳುತ್ತಾ ಹೇಗೋ ಆ ಮನೆಯ ಮೆಟ್ಟಲು ಹತ್ತಿ ಬಾಗಿಲು ಬಡಿದು "ಅಮ್ಮಾ, ಬಾಗಿಲು ತೆಗಿಯಿರಿ..." ಎಂದನು. "ಹಾಂ... ಯಾರಪ್ಪಾ ಅದೂ? ಈ ಮಳೆಯಲ್ಲಿ, ಈ ಕತ್ತಲ ಗುಹೆಯಲ್ಲಿ... ಯಾರೂ?" ಎಂದು ಮನೆಯ ಒಳಗಿನಿಂದ ಹೆಂಗಸೊಬ್ಬಳು ಕೇಳಿದಳು. ಆಗ ರಾಹಿಲ್ "ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ. ಪ್ಲೀಸ್..." ಎಂದು ದಯನೀಯವಾಗಿ ಅಂಗಲಾಚುವ ಸಂದರ್ಭವಾಗಿದೆ.

**ಸ್ವಾರಸ್ಯ :** ಯುದ್ಧದ ಸಂದರ್ಭದಲ್ಲಿ ಗಾಯಗೊಂಡಿರುವ ರಾಹಿಲನು ರಕ್ಷಣೆಗಾಗಿ ಇನ್ನೊಬ್ಬರ ಸಹಾಯವನ್ನು ಬೇಡುವ ದಯಾನೀಯ ಸ್ಥಿತಿ ಇಲ್ಲಿ ಅಭಿವ್ಯಕ್ತಗೊಂಡಿದೆ.

35. **ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು **ವಿ.ಕೃ. ಗೋಕಾಕ್**ರು ಬರೆದ **'ಸಮುದ್ರದಾಚೆಯಿಂದ'** ಎಂಬ ಪ್ರವಾಸಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಲಂಡನ್ ಮೂಲೆಮೂಲೆಯಲ್ಲಿ, ಬೀದಿಬೀದಿಗಳಲ್ಲಿ ಪ್ರಸಿದ್ಧ ಕವಿಗಳು, ರಾಜಕಾರಣಿಗಳು, ರಾಜರುಗಳು, ಇತಿಹಾಸ ಪ್ರಸಿದ್ಧರ ಶಿಲಾಮೂರ್ತಿಗಳನ್ನು ಕೈಯೆತ್ತಿ ನಿಂತಿರುವಂತೆ ನಿಲ್ಲಿಸಿದ್ದಾರೆ. ಇದನ್ನು ನೋಡಿದ ಸಂದರ್ಭದಲ್ಲಿ ಲೇಖಕರು ಈ ಮಾತನ್ನ ಹೇಳಿದ್ದಾರೆ.

**ಸ್ವಾರಸ್ಯ :** ಬ್ರಿಟನ್‌ದೇಶವು ಶ್ರೇಷ್ಠವಾದ ರಾಷ್ಟ್ರ, ದೊಡ್ಡದಾದದೇಶ. ಈ ದೇಶದ ಪ್ರಸಿದ್ಧಿಯು ಮುಂದಿನ ಪೀಳಿಗೆಯವರಿಗೆ ಉಳಿಯಬೇಕು, ಕಾಪಾಡಬೇಕು ಎಂಬ ದೇಶಾಭಿಮಾನವು ಇಲ್ಲಿಯ ಸ್ವಾರಸ್ಯವಾಗಿದೆ.

36. **ಆಯ್ಕೆ :** ಪ್ರಸ್ತುತ ಈ ಹೇಳಿಕೆಯನ್ನು **'ಕುವೆಂಪು'** ರವರು ಬರೆದ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂಧರ್ಭ :** ಕವಿ ಕುವೆಂಪು ಅವರು ಅಶ್ವಯುಜ ಮಾಸದ ನವರಾತ್ರಿಯ ದಿನ ಮಲೆನಾಡಿನ ಸುತ್ತಲೂ ಕವಿದಿರುವ ಹಸುರನ್ನು ಕಂಡು ಅತ್ತಲೂ ಹಸುರು, ಇತ್ತಲೂ ಹಸುರು.ಭೂಮಿಯಿಂದ ಆಕಾಶದವರೆಗೂ ಹಸುರು ಎಂದು ವರ್ಣಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಭೂಮಿಯಲ್ಲಿನ ಭಾಗವಷ್ಟೆ ಅಲ್ಲ ಕಡಲು, ಹಕ್ಕಿಗಳ ಕೊರಳಿಂಚರ ಎಲ್ಲವೂ ಹಸುರು ಹಸುರು ಕವಿಯಾತ್ಮವೇ ಹಸುರಾಗಿರುವ ಅಂಶವು ಸ್ವಾರಸ್ಯಕರವಾಗಿದೆ.

37. **ಆಯ್ಕೆ** : ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

**ಸ್ವಾರಸ್ಯ** : ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

38. **ಆಯ್ಕೆ:** ಈ ವಾಕ್ಯವನ್ನು 'ಮಹಾಕವಿ ಪಂಪ' ಬರೆದ 'ವಿಕ್ರಮಾರ್ಜುನ ವಿಜಯ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ** : ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸ್ಪಷ್ಟವಾಗಿ ಸಂದೇಹವಿಲ್ಲದೆ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ತಿಳಿದೆನು" ಎಂದು ಹೇಳಿದ ಸಂದರ್ಭವಾಗಿದೆ.
**ಸ್ವಾರಸ್ಯ:** ಸಮುದ್ರಮಥನ ಕಾಲದಲ್ಲಿ ಐಶ್ವರ್ಯ(ಲಕ್ಷ್ಮಿ) ಮತ್ತು ಕಳ್ಳು (ಸುರಪಾನ) ಇವೆರಡೂ ಹುಟ್ಟಿದವು. ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು ದ್ರುಪದನ ಐಶ್ವರ್ಯ ಮದಕ್ಕೆ ಅನ್ವಯ ಮಾಡಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

| | |
|---|---|
| **ನೀಲಮೇಘಮಂಡಲ–ಸಮ ಬಣ್ಣ**<br>**ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ**<br>**ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು**<br>**ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ**<br>**ಹಕ್ಕಿ ಹಾರುತಿದೆ ನೋಡಿದಿರಾ?** | **ಯುಗ–ಯುಗಗಳ ಹಣೆ ಬರೆಹವ ಒರಸಿ**<br>**ಮನ್ವಂತರಗಳ ಭಾಗ್ಯವ ತೆರೆಸಿ**<br>**ರೆಕ್ಕೆಯ ಬೀಸುತ ಚೇತನಗೊಳಿಸಿ**<br>**ಹೊಸಗಾಲದ ಹಸುಮಕ್ಕಳ ಹರಸಿ**<br>**ಹಕ್ಕಿ ಹಾರುತಿದೆ ನೋಡಿದಿರಾ?** |

40. ಬ್ರಿಟಿಷ್ ಸರ್ಕಾರ (ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ) ವಿಲಾಯಿತಿಯಿಂದ (ವಿದೇಶ) ಎಲ್ಲಾ ಜನರಿಗೆ ಜೋರ(ದಬ್ಬಾಳಿಕೆ)ಮಾಡಿ ಆಯುಧಗಳನ್ನೆಲ್ಲ ಕಸಿದು ಕೊಳ್ಳಿರಿ ಎಂದು ಆದೇಶವನ್ನು ಕಳಿಸಿತು. ಮುಧೋಳದ ಹತ್ತಿರ ಇರುವ ಹಲಗರಹಳ್ಳಿ (ಹಲಗಲಿ) ಜನ ಇದರ ವಿರುದ್ಧ ಹೋರಾಡಿ ಸುತ್ತ–ಮುತ್ತ ಪ್ರಸಿದ್ಧಿಯಾಗುವಂತೆ ಮೆರೆಯಿತು. ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯುಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ (ನಮ್ಮ ಅನ್ನಕ್ಕೆ ಸಂಚಕಾರ ಬಂದು) ನಮ್ಮ ಜೀವ ಸತ್ತು ಹೋಗುತ್ತದೆ ಎಂದು ಪಿತೂರಿ ಮಾಡಿದರು. ನಾವು ಯಾವಾಗಲೂ ನಿಮ್ಮ ಸಹಾಯಕ್ಕೆ ಕೂಡಿಕೊಂಡು ಇರುತ್ತೇವೆ ಅವರ ಜೊತೆ(ಆಯುಧಗಳನ್ನು ಕಸಿದುಕೊಳ್ಳಲು ಬಂದವರ ಜೊತೆ) ಜಗಳ ತೆಗೆಯಿರಿ ಎಂದು ಹಲಗಲಿಯ ಬೇಡರೆಲ್ಲ ಒಂದೆಡೆ ಸೇರಿಕೊಂಡು ಒಳಗಿಂದೊಳಗೆ ಮಾತು ಕೊಟ್ಟರು.

41. ನಾಲ್ವಡಿ ಕೃಷ್ಣರಾಜ ಒಡೆಯರು 1902 ಆಗಸ್ಟ್ 8 ರಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು, ದಿವಾನರಾಗಿದ್ದ ಸರ್. ಕೆ ಶೇಷಾದ್ರಿಯವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಅರಸು ಮನೆತನದಿಂದ ಬಂದವರಾದರೂ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವುದು ಪರವಾಗಿದ್ದರು. **'ಪ್ರಜಾಪ್ರತಿನಿಧಿ ಸಭೆ'** ಹೊಸರೂಪ ಪಡೆಯಿತು. 1923 ರಲ್ಲಿ ಕಾನೂನೊಂದನ್ನು ಜಾರಿಗೆ ತಂದು 'ಪ್ರಜಾಪ್ರತಿನಿಧಿ ಸಭೆ'ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪ ನಡೆಸಿ, ವಾರ್ಷಿಕ ಆಯವ್ಯಯ, ಪರಿಶೀಲನೆ, ಪ್ರಶ್ನೋತ್ತರ, ಠರಾವು ಮಂಡಿಸಲಾಗುತ್ತಿತ್ತು. ಹೆಚ್ಚಿನ ಸದಸ್ಯರು ಜನರಿಂದಲೇ ಆಯ್ಕೆಯಾಗುತ್ತಿದ್ದರು. 1907 ರಲ್ಲಿ 'ನ್ಯಾಯ ವಿಧಾಯಕ ಸಭೆ' ಸ್ಥಾಪಿಸಿದರು.ಇದು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬೆಂಗಳೂರಿನಲ್ಲಿ ಎರಡು ಬಾರಿ ಸಮಾವೇಶಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾವನ್ನು ವಿಮರ್ಶಿಸುವ, ಕಾನೂನುನ್ನು ಜಾರಿಗೆ ತರುವ ಅಧಿಕಾರ ಇದ್ದಿತು. ಗ್ರಾಮ ನಿರ್ಮಲೀಕರಣ, ವೈದ್ಯೆ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ, ವಾಣಿವಿಲಾಸ ಸಾಗರ, ಕೃಷ್ಣಸಾಗರ ಜಲಾಶಯಗಳನ್ನು ನಿರ್ಮಿಸಿದರು. ಉಚಿತ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾನಿಲಯ, ಉಚಿತ ಅಸ್ಪತ್ರೆ, ಮೈಸೂರು ಬ್ಯಾಂಕ್,( ಈಗ ಎಸ್.ಬಿ ಐ) ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮಾಡಿ ಮೈಸೂರು ಸಂಸ್ಥಾನವನ್ನು **'ಮಾದರಿ ಮೈಸೂರು ರಾಜ್ಯ'**ವನ್ನಾಗಿ ರೂಪಿಸಿ ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಕೀರ್ತಿಗೆ ಪಾತ್ರರಾದರು.

**ಅಥವಾ**

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು. ದಿವಾನರಾದ ನಂತರ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮೈಸೂರು ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಕಾಲದಲ್ಲಾಯಿತು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. 'ಕನ್ನಡ ಸಾಹಿತ್ಯ ಪರಿಷತ್ತನ್ನು' ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಇವರ ಕಾಲದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿತವಾಯಿತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೊಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು – ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು. 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

42. ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಸಲಹೆ ಪಡೆಯಲು ರಣರಂಗಕ್ಕೆ ಬರುತ್ತಾನೆ. ಆಗ ಭೀಷ್ಮರು "ದುರ್ಯೋಧನ ನಾನು ಹೇಳುವ ಮಾತನ್ನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿಸಿ ಮೊದಲಿನಂತೆಯೇ ನಡೆದುಕೊಳ್ಳುವ ಹಾಗೆ ಮಾಡುವೆನು. ಈಗಲಾದರೂ ಅವರು ನಾನು ಹೇಳುವುದನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನು ನಾನು ಹೇಳುವುದುನ್ನು ಮೀರದೆ ನಡೆದುಕೊಳ್ಳಬೇಕು ಎಂದು ಸಂಧಿಗೆ ಒಪ್ಪಿಸಲು ಪ್ರಯತ್ನಿಸುತ್ತಾರೆ. ಆಗ ದುರ್ಯೋಧನನು ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ. ಮುಂದೆ ನಡೆಯುವ ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿರಿ. ಈ ಭೂಮಿಗಾಗಿ ಯುದ್ಧ ಮಾಡುವುದಿಲ್ಲ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲ. ಕರ್ಣನನ್ನು ಕೊಲ್ಲಿಸಿದ ನೆಲನೊಡನೆ ಮತ್ತೆ ಬಾಳಲು ಸಾಧ್ಯವಿಲ್ಲ. ಗೆಳೆಯ ಕರ್ಣ, ನನ್ನ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ–ಭೀಮರನ್ನು ಕೊಲ್ಲುವವರೆಗೆ ಸಂಧಿಗೆ ಒಪ್ಪುವುದಿಲ್ಲ. ನನ್ನ ಮಕ್ಕಳು, ಒಡ ಹುಟ್ಟಿದ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಅಧಿಕವಾಯಿತು. ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ಈ ನೆಲ ಕೌರವನದಾಗಬೇಕು ಎಂದು ದುರ್ಯೋಧನ ತನ್ನ ಛಲವನ್ನು ತೋರ್ಪಡಿಸುತ್ತಾನೆ.

**ಅಥವಾ**

"ಛಲದೊಳ್ ದುರ್ಯೋಧನಂ" ಎನ್ನುವ ಹಾಗೆ ಛಲವನ್ನೆ ಮುಖ್ಯ ಗುಣವುಳ್ಳವನು ದುರ್ಯೋಧನ. ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ ಯುದ್ಧ ಮಾಡಿಯೇತಿರಬೇಕೆಂಬ ಅವನ ಛಲದ ಗುಣ ಅವನ ಸ್ವಭಾವಕ್ಕೆ ತಕ್ಕನಾಗಿ ವ್ಯಕ್ತಗೊಂಡಿರುವುದನ್ನು 'ಛಲಮನೆ ಮೆಱೆವೆಂ' ಎಂಬ ಪದ್ಯದಲ್ಲಿ ನಿರೂಪಿತವಾಗಿದೆ. ಭೀಷ್ಮರು ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೋ ಎಂದು ಹೇಳುತ್ತಾರೆ. ಆಗ ದುರ್ಯೋಧನನು ಒಪ್ಪದೆ ಛಲದ ಮಾತುಗಳನ್ನು ಹೀಗೆ ಹೇಳುತ್ತಾನೆ. **"ನೆಲಕ್ಕಿರಿವೆನೆಂದು ಬಗೆದಿರೆ ಛಲಕ್ಕಿರಿವೆಂ"** ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಕರ್ಣನನ್ನು ಕೊಲ್ಲಿಸಿದ ಈ ನೆಲ ನನಗೆ ಪಾಳುಬಿದ್ದ ನೆಲ. ಇಂತಹ ನೆಲನೊಡನೆ ಮತ್ತೆ ಬಾಳುವುದಿಲ್ಲ. ಪ್ರೀತಿಯ ಗೆಳೆಯ ಕರ್ಣ, ನನ್ನ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ–ಭೀಮರನ್ನು ಇನ್ನು ಜೀವಂತವಾಗಿದ್ದಾರೆ ಅವರನ್ನು ಕೊಲ್ಲುವುದೆ ನನ್ನ ಛಲವಾಗಿದೆ. ನನ್ನ ಮಕ್ಕಳು, ಒಡಹುಟ್ಟಿದ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಅಧಿಕವಾಯಿತು. ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡುದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ಈ ನೆಲ ಕೌರವನದಾಗಬೇಕು ಎಂಬ ಛಲದಿಂದ ಯುದ್ಧದ ನಿರ್ಧಾರವನ್ನು ಕೈಗೊಂಡು ಛಲವನ್ನೇ ಸಾಧಿಸುತ್ತಾನೆ ಎಂಬ ದುರ್ಯೋಧನನ ಮಾತುಗಳಲ್ಲಿ ಛಲದ ಗುಣ ಅಭಿವ್ಯಕ್ತವಾಗಿದೆ ಎಂದು ವಿವರಿಸಬಹುದು.

43. ಅ) ಬಾಲಕ ಪುಟ್ಟಯ್ಯನವರಿಗೆ ಹುಟ್ಟಿದ ಆರು ತಿಂಗಳಿಗೆ ಕಣ್ಣಿಗೆ ಪೊರೆ ಬರುತ್ತದೆ. ಅದನ್ನು ಅರಿ ಎಂದು ಕರೆಯುತ್ತಾರೆ. ಆ ಕಾಲದಲ್ಲಿ ನಾಟೀ ವೈದ್ಯರು ಮಾತ್ರ ಇದ್ದರು. ಇವರು ಕಣ್ಣಿನ ಗುಡ್ಡೆಗೆ ತೊನಸಿ (ನಾಯಿ ಮೈಯಲ್ಲಿರುವ ಹುಳು) ಮುಟ್ಟಿಸಬೇಕು ಅಂತ ಹೇಳಿದ್ದರು. ಅದೇ ರೀತಿಗೆ ಚಿಕಿತ್ಸೆ ಮುಟ್ಟಿಸುವಾಗ ತೊನಸಿ ಕೈ ಜಾರಿ ಕಣ್ಣ ಒಳಗೆ ಬಿದ್ದುಬಿಟ್ಟವು. **ಅರಿ ಹರಿಯುವುದರ ಬದಲು ಕಣ್ಣಿನ ಗುಡ್ಡೆಯೇ ಹರಿದು ಬಿಟ್ಟವು**. ಇದರಿಂದ ಬಾಲಕ ಪುಟ್ಟಯ್ಯನವರು ಕಣ್ಣುಗಳನ್ನು ಕಳೆದುಕೊಳ್ಳಬೇಕಾಯಿತು.

ಆ) ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಮ್‌ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು.

ದಿ:

**44. ಇವರಿಂದ,**

ರಘನಂದನ್
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಮೈಸೂರು –09

**ಇವರಿಗೆ,**

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು,
ಮೋತಿ ಸರ್ಕಲ್, ಬೆಂಗಳೂರು –576523

**ಮಾನ್ಯರೇ ,**

**ವಿಷಯ : ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ**

ಸರ್, ಈ ಮೂಲಕ ತಿಳಿಸುವುದೇನೆಂದರೆ ನಾನು 10ನೇ ತರಗತಿ ಓದುತ್ತಿದ್ದು, ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಕನ್ನಡ ವಿಶ್ವಕೋಶ ಬೇಕಾಗಿದೆ. ಆದ್ದರಿಂದ ದಯಮಾಡಿ ಆ ಪುಸ್ತಕ ಕಳುಹಿಸಿಕೊಡಲು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಂಚೆಯ ಮೂಲಕ ಕಳುಹಿಸಿದರೆ ಹಣ ಸಂದಾಯ ಮಾಡಿ ಬಿಡಿಸಿಕೊಳ್ಳುತ್ತೇನೆ ಎಂದು ತಿಳಿಸುತ್ತೇನೆ. ಅಂಚೆ ವಿಳಾಸ: ರಘನಂದನ್ 10ನೇ ತರಗತಿ ಸರ್ಕಾರಿ ಪ್ರೌಢಶಾಲೆ, ಮೈಸೂರು –09 ಜಿಲ್ಲೆ ಅಂಚೆಪೆಟ್ಟಿಗೆ ಸಂಖ್ಯೆ576524.

**ವಂದನೆಗಳೊಂದಿಗೆ ..**

**ಇಂತಿ ತಮ್ಮ ವಿಶ್ವಾಸಿ**
ರಘನಂದನ್

**ಅಥವಾ**

ಶುಭ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಕುವೆಂಪುನಗರ, ಬೆಂಗಳೂರು.
ದಿನಾಂಕ: 01–01–2024

**ಮಾತೃಶ್ರೀಯವರಿಗೆ**

ನಿಮ್ಮ ಮಗ/ಳು ಶುಭ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಂದೆಯವರಿಗೆ ಪ್ರಣಾಮಗಳು. ದಿನಾಂಕ 26. 01–2024 ರಂದು ನಮ್ಮ ಶಾಲೆಯಲ್ಲಿ ಗಣರಾಜ್ಯೋತ್ಸವನ್ನು ಆಚರಿಸಲು ಮಾಡಲು ಸಿದ್ದತೆ ಮಾಡುತ್ತಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮವಿರುತ್ತದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸಿದ್ದೇನೆ. ದೇಶಭಕ್ತಿಗೀತೆಗೆ ನೃತ್ಯ ಮಾಡುತ್ತಿದ್ದೇನೆ. ಆದ್ದರಿಂದ ತಂಗಿ, ತಂದೆಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಪ್ರಣಾಮಗಳೊಂದಿಗೆ**

**ಇಂತಿ ನಿಮ್ಮ ಪ್ರೀತಿಯ ಮಗ/ಳು**
ನಂದನ

**ಹೊರ ವಿಳಾಸ**

ಶ್ರೀಮತಿ ಅನ್ನಪೂರ್ಣಮ್ಮ,
ವಿದ್ಯಾನಗರ 5ನೇ ಮುಖ್ಯರಸ್ತೆ
ಅನಂತಪುರ ರಸ್ತೆ

ಮನೆ ನಂ–125
ಕೋಲಾರ – ಅಂಚೆಪೆಟ್ಟಿಗೆ ಸಂಖ್ಯೆ–58313

45. ಸ್ವರಾಜ್ಯ ಅಂದರೆ ಸ್ವತಂತ್ರ ರಾಜ್ಯ. ಗ್ರಾಮ ಸ್ವರಾಜ್ಯ ಎಂದರೆ ಸ್ವತಂತ್ರ ರಾಜ್ಯಗಳ ರೀತಿಯಲ್ಲಿ ಸ್ವತಂತ್ರ ಗ್ರಾಮಗಳಾಗುವುದು ಎಂದರ್ಥ. ಪ್ರತಿಯೊಂದು ಗ್ರಾಮಗಳು ಸ್ವತಂತ್ರವಾಗಿ ಸ್ವಯಂ ಆಗಿ ಆಡಳಿತದ ಕೇಂದ್ರಗಳಾಗಿ, ತಮ್ಮ ಗ್ರಾಮದ ಸಮಗ್ರ ಅಭಿವೃದ್ಧಿ ಮತ್ತು ಸುಭಿಕ್ಷತೆಗೆ ಅವಕಾಶ ಮಾಡಿಕೊಳ್ಳುವುದು ಇದರ ಪರಿಕಲ್ಪನೆಯಾಗಿದೆ.

**ವಿಷಯ ನಿರೂಪಣೆ** : ಭಾರತ ಗ್ರಾಮಗಳ ದೇಶ. ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದೀತು. ಆದ್ದರಿಂದ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿಕೊಡಬೇಕು. ಹಾಗೆಯೇ ತಮ್ಮ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಯೋಜನೆಗಳನ್ನು ಆಯಾಯ ಗ್ರಾಮಗಳೆ ರೂಪಿಸಿಕೊಳ್ಳುವುದು ಉತ್ತಮ. ಇದಕ್ಕಾಗಿ ಸ್ಥಳಿಯವಾಗಿ ಗ್ರಾಮ ಪಂಚಾಯತಿಗಳು ಇರುವುದನ್ನು ಮನಗಾಣಬಹುದು. ಪ್ರಾಚೀನ ಕಾಲದಿಂದಲೂ ಗ್ರಾಮದ ಮುಖಂಡರು ಸೇರಿ ತಮ್ಮ ಗ್ರಾಮದ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದನ್ನು ಇತಿಹಾಸದಲ್ಲಿ ನೋಡಬಹುದು. ಪ್ರತಿಯೊಂದು ಗ್ರಾಮಗಳು ಬೇರೆಯ ಆಡಳಿತ ಕೇಂದ್ರಗಳ ಮೇಲೆ ಅವಲಂಬಿತವಾಗದೆ ಸ್ವಾವಲಂಬನೆಯಿಂದ ತಮ್ಮ ಗ್ರಾಮಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪರಿಶ್ರಮಿಸಬೇಕು. ಗ್ರಾಮದ ಜನರೆಲ್ಲ ಆಡಳಿತದಲ್ಲಿ ಪಾಲ್ಗೊಳ್ಳಬೇಕು. ಸಲಹೆ, ಸಹಕಾರ, ಸಂಪನ್ಮೂಲಗಳನ್ನು ನೀಡಬೇಕು ಮತ್ತು ಆಡಳಿತದ ಮುಖ್ಯಸ್ಥರು ಪಡೆದು ಸದುಪಯೋಗ ಮಾಡಬೇಕು ಅಂದಾಗ ಮಾತ್ರ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಅರ್ಥಪೂರ್ಣವಾಗುತ್ತದೆ. ಮಹಾತ್ಮ ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಪರಿಕಲ್ಪನೆಗೆ ಬಹು ಆದ್ಯತೆ ನೀಡಿದ್ದರು. ತಮ್ಮ ತಮ್ಮ ಗ್ರಾಮದ ಸ್ವಚ್ಛತೆ, ನೀರಿನ ಸೌಕರ್ಯ, ಶಿಕ್ಷಣದ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ, ರಸ್ತೆಗಳ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು ಗ್ರಾಮದವರೆಲ್ಲ ಒಟ್ಟಾಗಿ ಮಾಡಿಕೊಂಡರೆ ಗ್ರಾಮಗಳ ಅಭಿವೃದ್ಧಿ ಸಾಧ್ಯವೆಂದು ಹೇಳಬಹುದು. ಅಲ್ಲದೆ ಸರ್ಕಾರಗಳು ಕೂಡ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಸಮಗ್ರವಾಗಿ ಗ್ರಾಮಾಭಿವೃದ್ಧಿಗೆ ಸಹಾಯ ಮಾಡುವುದರಿಂದ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ.

**ಉಪಸಂಹಾರ** : ಗ್ರಾಮಗಳ ದೇಶವಾದ ಭಾರತವು ಅಭಿವೃದ್ಧಿ ಹೊಂದಿದೆ ಎಂದು ಹೇಳಬೇಕಾದರೆ ಮೊದಲು ಗ್ರಾಮಗಳು ಅಭಿವೃದ್ಧಿ ಹೊಂದಬೇಕು. ಅದಕ್ಕೆ ಗ್ರಾಮಗಳೆಲ್ಲವೂ ಸ್ವರಾಜ್ಯವಾಗಿ ಕಾರ್ಯನಿರ್ವಹಿಸಬೇಕು. ಇದಕ್ಕೆ ಗ್ರಾಮವಾಸಿಗಳ ಸಹಕಾರದಿಂದ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕನಸನ್ನು ನನಸು ಮಾಡಬಹುದೆಂದು ಹೇಳಬಹುದು.

**ಅಥವಾ**

**ಪೀಠಿಕೆ** : ತ್ಯಾಜ್ಯವಸ್ತು ಎಂದರೆ ತ್ಯಜಿಸಿದ ವಸ್ತು ಎಂದು ಅರ್ಥೈಸಬಹುದು. ಮಾನವ ಬಳಸಿಬಿಟ್ಟ ಅನುಪಯುಕ್ತ ವಸ್ತುಗಳು ತ್ಯಾಜ್ಯವಸ್ತುಗಳಲ್ಲಿ ಸೇರ್ಪಡೆಗೊಳ್ಳುತ್ತವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಅಥವಾ ಮರುಬಳಕೆ ಮಾಡುವುದನ್ನು ನಿರ್ವಹಣೆ ಎಂದು ಹೇಳಬಹುದು. ತ್ಯಾಜ್ಯ ವಸ್ತುಗಳು ಕೆಲವೊಂದು ಸಾರಿ ಪರಿಸರವನ್ನು ಕಲುಷಿತಗೊಳಿಸುವದರೊಂದಿಗೆ ಮಾನವ ಸೇರಿದಂತೆ ಇತರೆ ಜೀವಿಗಳ ಅನಾರೋಗ್ಯಕೆ ಕಾರಣವಾಗುತ್ತವೆ. ಆದ್ದರಿಂದ ಅವುಗಳ ಸರಿಯಾದ ನಿರ್ವಹಣೆ ಮಾಡುವುದು ಅತಿ ಅವಶ್ಯವಾದದ್ದು ಎಂದು ಹೇಳಬಹುದು.

**ವಿಷಯ ನಿರೂಪಣೆ** : ಆರೋಗ್ಯಕರ ವಾತಾವರಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ತ್ಯಾಜ್ಯವಸ್ತುಗಳು ಕೆಲವೊಂದು ಸಾರಿ ಮರುಬಳಕೆಗೆ ಯೋಗ್ಯವಾಗಿರುತ್ತವೆ. ಅಂತಹ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಬೇಕು. ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು ಹಾಗೂ ತ್ಯಾಜ್ಯವಸ್ತು ಉತ್ಪಾದಿಸುವ ಖಾಸಗಿ ಸಂಸ್ಥೆಗಳು, ಕೈಗಾರಿಕೆಗಳು ತ್ಯಾಜ್ಯವಸ್ತು ನಿರ್ವಹಣ ಘಟಕಗಳನ್ನು ಸ್ಥಾಪಿಸಿ ಸೂಕ್ತವಾಗಿ ನಿರ್ವಹಣೆ ಮಾಡಬೇಕು. ತ್ಯಾಜ್ಯವಸ್ತುಗಳನ್ನು ಘನ ಮತ್ತು ದ್ರವ ತ್ಯಾಜ್ಯವಸ್ತುಗಳನ್ನಾಗಿ ಸೂಕ್ತ ರೀತಿಯಲ್ಲಿ ಬೇರ್ಪಡಿಸಿ ವಿಲೇವಾರಿ ಮಾಡಬೇಕು. ಸಾಧ್ಯವಾದಲ್ಲಿ ಮರುಬಳಕೆಗೆ ಮೊದಲ ಆದ್ಯತೆ ನೀಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಕಸದ ಸಮಸ್ಯೆ ದೊಡ್ಡದೆ ಆಗಿದೆ. ಪ್ಲಾಸ್ಟಿಕ್, ಫೈಬರ್, ರಬ್ಬರ್, ಗಾಜು, ಕಬ್ಬಿಣ ಮತ್ತು ಇತರೆ ಲೋಹದ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡಲ್ಲಿ ಕಸದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ದೂರಮಾಡಬಹುದು. ತ್ಯಾಜ್ಯವಸ್ತುಗಳನ್ನು ಬಳಸಿಕೊಂಡು ಅಲಂಕಾರಿಕ ವಸ್ತುಗಳು, ಇತರೆ ಗೃಹಬಳಕೆಯ ವಸ್ತುಗಳನ್ನು ತಯಾರಿಸಬಹುದು. ಕೆಲವೊಂದು ತ್ಯಾಜ್ಯವಸ್ತುಗಳನ್ನು ಸುಡುವುದರಿಂದ, ಊತು ಹಾಕುವುದರಿಂದ ಕೆಲವು ವಿಷಕಾರಿ ರಾಸಾಯನಿಕ ಅನಿಲಗಳು ಬಿಡುಗಡೆಯಾಗಿ ಪರಿಸರ ಮಾಲಿನ್ಯ ಉಂಟಾಗಿ ಜೀವಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಆದ್ದರಿಂದ ಹಾನಿಕಾರಕ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರಕ್ಕೆ ಮತ್ತು ಜೀವಿಗಳಿಗೆ ಹಾನಿ ಮಾಡದಂತೆ ನಿರ್ವಹಣೆ ಮಾಡಿದಿರೆ ಒಳಿತು.

**ಉಪಸಂಹಾರ** : ಪ್ರತಿಯೊಬ್ಬರಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಅರಿವು ಮಾಡಿಸಬೇಕು ಅಂದಾಗ ಮಾತ್ರ ನಿರ್ವಹಣೆ ಸುಲಭವಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಆದ್ದರಿಂದ ನಮ್ಮಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ಮರುಬಳಕೆ ಮತ್ತು ವಿಲೇವಾರಿ ಮಾಡಿದ್ದಲ್ಲಿ 'ಪರಿಸರ ಸಂರಕ್ಷಣೆ ನಮ್ಮ ಆರೋಗ್ಯ ರಕ್ಷಣೆ' ಎಂದು ಹೇಳಬಹುದು.

*******************

# ಮಾದರಿ ಉತ್ತರಗಳು – 2

1. ಕ್ರಿಯಾ
2. **ಅರ್ಧವಿರಾಮ**
3. **ಒಳ್**
4. **ಅನುಕರಣಾವ್ಯಯ**
5. **ಅವಧಾರಣಾರ್ಥಕಾವ್ಯಯ**
6. **ಮಾಡಲಿ**
7. **ಜನ್ನ**
8. **02**
9. **ಆಗಮ ಸಂಧಿ**
10. **ಪ್ರೀತಿ**
11. ಮನುಷ್ಯನು ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ ಬದುಕು ಮೊದಲಾದ ಭಾವನೆಗಳು ಮೂಡಿದವೋ ಆಗ ಅವನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು.
12. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು **"ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ, ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು."**
13. ಶ್ರೀ ರಾಮನಿಗೆ ಸಮರ್ಪಿಸಲು ಶಬರಿ **ಹೂವು, ಹಣ್ಣು ಮತ್ತು ಮಧುಪರ್ಕ**ವನ್ನು ಸಂಗ್ರಹಿಸಿದ್ದಳು.
14. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ **ಮಂತ್ರಿ ಪದವಿ** ದೊರೆಯಿತು.
15. ನಾಳಿನ ಕನಸನ್ನು ಕಂದಿದ ಕಣ್ಣಲ್ಲಿ ಬಿತ್ತಬೇಕೆಂದು ಕವಿ ಶಿವರುದ್ರಪ್ಪನವರು ಹೇಳಿದ್ದಾರೆ.
16. ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ.
17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದವನು ಗೌರ್ನರ್ ಜನರಲ್ ಡಯರ್.
18. ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು, ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡನು. ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆಯಿತು. ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಮೂಲಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಆ ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಜ್ಞಾನ ಭಂಡಾರ ಭದ್ರವಾಯಿತು. ಸಂಸ್ಕೃತಿಯ ಇತಿಹಾಸ ಉಳಿಯಿತು. ಪ್ರಗತಿಪಥ ಸುಗಮವಾಯಿತು.
19. ನಾಲ್ವಡಿ ಕೃಷ್ಣರಾಜ ಒಡೆಯರು ಕಾಲದಲ್ಲಿ (1) ಗ್ರಾಮ ನಿರ್ಮಲೀಕರಣ (2) ವೈದ್ಯ ಸಹಾಯ (3) ವಿದ್ಯಾ ಪ್ರಚಾರ (4) ನೀರಿನ ಸೌಕರ್ಯ (5) ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.
20. ನೆಹರೂ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ". ಎಂದು ಹೇಳಿದ್ದಾರೆ.
21. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು **"ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಕಾಡಿನಲ್ಲಿ ಈ ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರ ಋಣಿಗಳಾಗಿದ್ದೇವೆ. ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರೆತ ಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೇ ತಿಳಿದೆವು"** ಎಂದು ಶಬರಿಗೆ ಹೇಳಿದರು.
22. ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರು, ಅತ್ತ ನೋಡಿದರೂ ಹಸುರು, ಇತ್ತ ನೋಡಿದರೂ ಹಸುರು, ಎತ್ತೆತ್ತ ನೋಡಿದರೂ ಹಚ್ಚ ಹಸುರು. ಆಗಸ, ಮುಗಿಲು, ಬಯಲು, ಬೆಟ್ಟ, ಕಣಿವೆ, ಬಿಸಿಲು, ಭತ್ತದ ಗದ್ದೆ, ಅಡಕೆಯ ತೋಟ, ಹೂವಿನ ಕಂಪು, ಗಾಳಿಯ ತಂಪು, ಹಕ್ಕಿಯ ದ್ವನಿ, ಇಳೆಯ ಗಾಳಿ, ಕಡಲು ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮವು ಹಸುರುಗಟ್ಟಲು ಕಾರಣವಾಯಿತು.

23. ಎಲೈ ದುಷ್ಟನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು ಎನ್ನುವ ಹಾಗೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೆ? ಜೊತೆಯಲ್ಲಿ ಓದಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ಗಾಬರಿಯಾಗುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ? ಎಂಬುದು ಪ್ರತ್ಯುತ್ತರವಾಗಿದೆ.

24. ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು (ಹಚ್ಚಹಸುರಾಗಿ) ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ.

25. ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದಿರಿ ಎಂಬ ತೃಪ್ತಿ ದೊರಕುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

26. ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ಅಧಿಕಾರದ ಸೋಂಕು ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ ಎನ್ನುವಂಥ ಭಾವ ಹೊಂದಿರುತ್ತಾರೆ. ಹೀಗೆ ರಾಜರ ಪ್ರಕೃತಿ ಇರುತ್ತದೆ.

27. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಿದ್ದರು, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು ಹೀಗೆ ಇನ್ನೂ ಮುಂತಾದ ಸಿದ್ಧತೆಗಳಾಗುತ್ತಿದ್ದವು.

28. ಎ.ಎನ್. ಮೂರ್ತಿರಾವ್ (ಕ್ರಿ.ಶ.1900) ಇವರು ಮಂಡ್ಯಜಿಲ್ಲೆಯ ಅಕ್ಕಿಹೆಬ್ಬಾಳಿನವರು. ಆಧುನಿಕ ಕನ್ನಡದ ಪ್ರಮುಖ ಗದ್ಯ ಬರೆಹಗಾರರಾದ ಇವರು ಪ್ರಬಂಧಕಾರರಾಗಿಯೇ ಮಾನ್ಯರಾಗಿದ್ದಾರೆ. **ಹಗಲುಗನಸುಗಳು. ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ** ಮೊದಲಾದವು ಶ್ರೀಯುತರ ಪ್ರಮುಖ ಕೃತಿಗಳು, ಚಿತ್ರಗಳು– ಪತ್ರಗಳು ಎಂಬ ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ** ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿದೆ.

29. ಕನ್ನಡದ ಆದಿಕವಿ ಎನಿಸಿಕೊಂಡ ಮಹಾಕವಿ ಪಂಪನು ಕ್ರಿ.ಶ.ಸುಮಾರು 902ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಚಾಲುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನು **'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದ ಈತನಿಗೆ **'ಸರಸ್ವತಿ ಮಣಿಹಾರ', 'ಸಂಸಾರ ಸಾರೋದಯ', 'ಕವಿತಾ ಗುಣಾರ್ಣವ'** ಎಂಬ ಬಿರುದುಗಳು ಇದ್ದವು.

30.

| 3 | 4 | 3 | 4 | = 14 |
|---|---|---|---|---|
| ∪∪∪ | ∪∪– | ∪∪∪ | ∪∪∪∪ | |
| ಕೊರಳ | ಸೆರೆ ಹಿ | ಗ್ಗಿದವು | ದೃಗುಜಲ | |

| 3 | 4 | 3 | 4 | = 14 |
|---|---|---|---|---|
| ∪∪∪ | ∪∪∪∪ | –∪ | ∪∪– | |
| ಉರವ | ಣಿಸಿ ಕಡು | ನೊಂದ | ನಕಟಾ | |

| 3 | 4 | 3 | 4 | 3 | 4 | 1ಗು | =23 |
|---|---|---|---|---|---|---|---|
| ∪∪∪ | ∪∪– | –∪ | –∪∪ | –∪ | ∪∪∪∪ | – | |
| ಕುರುಪ | ತಿಗೆ ಕೇ | ಡಾದು | ದೆಂದನು | ತನ್ನ | ಮನದೊಳ | ಗೆ | |

**ಛಂದಸ್ಸಿನ ಹೆಸರು : ಭಾಮಿನಿ ಷಟ್ಪದಿ.**

31. ಅಲಂಕಾರ : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ : ಒಳಗಿನ ಮಂದಿ ಗುಂಡು ಹೊಡೆಯುವುದು

ಉಪಮಾನ : ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

ಉಪಮಾವಾಚಕ : ಹಾಂಗ

ಸಮಾನಧರ್ಮ : ಸ್ಪಷ್ಟವಾಗಿಲ್ಲ (ಸಿಡಿಯುವುದು)

ಸಮನ್ವಯ: ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು **ಉಪಮಾಲಂಕಾರ.**

32. ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **'ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ'** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಗಾದೆಯ ಅರ್ಥ.

ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಚನದಲ್ಲಿ (ಅಶೋಕ ಚಕ್ರ) 'ಸತ್ಯಮೇವ ಜಯತೇ' ಎಂಬ ಬರಹ ಕಲ್ಪಾಂತರಸ್ಥಾಯಿಯಾಗಿ ರಾರಾಜಿಸುತ್ತದೆ. 'ಸತ್ಯಕ್ಕೆ ಜಯ' ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ. ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು. ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು. **'ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೇಳಿರಿ'** ಎಂಬ ನೀತಿವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ. ಸುಳ್ಳಿಗೆ ಸುಖವಿಲ್ಲ ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ. ಸುಳ್ಳು ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯ ತನ್ನ ಗೌರವ, ಅಂತಸ್ತು, ನಂಬಿಕೆ ಕಳೆದುಕೊಳ್ಳುವುದರ ಜೂತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳುಮಾಡಿ ಕೊಳ್ಳಬೇಕಾಗುತ್ತದೆ. ಸುಳ್ಳು ಒಂದು ಬಲೆ ಇದ್ದ ಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ದಾಸರಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕ ಗೊಳಿಸಿಕೊಳ್ಳಬೇಕು. ಸತ್ಯವೇ ಬೆಳಕು, ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

**ಅಥವಾ**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **"ಆಳಾಗ ಬಲ್ಲವನು; ಅರಸಾಗಬಲ್ಲನು"** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಆಳಾಗಿ ದುಡಿದರೆ ಅರಸನಂತೆ ಉಣ್ಣಬಹುದು. ಹಾಗೆಯೇ ಕಾರ್ಮಿಕನಾಗಿ ದುಡಿದವನು ಮುಂದೊಂದು ದಿನ ಯಜಮಾನನಾಗಬಹುದು. **'ಕೈ** ಕೆಸರಾದರೆ ಬಾಯಿ ಮೊಸರು' ಎಂಬ ಗಾದೆ ಮಾತಿನಂತೆ ಆಳಾಗಿ ದುಡಿದರೆ ಮುಂದೊಂದು ದಿನ ಹಾಯಾಗಿ ಕುಳಿತು ಜೀವನ ಸಾಗಿಸಬಹುದು. ಆದ್ದರಿಂದ ಕಾಯಕದ ಘನತೆಯನ್ನು ಅರಿತು ಕಾರ್ಯ ನಿರ್ವಹಿಸಬೇಕು. ಯಾರೇ ಆಗಲಿ ಏಕಾಏಕಿ ಶ್ರೀಮಂತನಾಗಲು ಸಾಧ್ಯವಿಲ್ಲ. ಕಷ್ಟಪಟ್ಟು ದುಡಿದರೆ ಮಾತ್ರ ಉನ್ನತಸ್ಥಾನಕ್ಕೆ ಏರಬಲ್ಲನು. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಕಾಯಕವೇ ಕೈಲಾಸ ಎಂಬ ವಚನಕಾರರ ಮಾತು ನಿತ್ಯ ಸ್ಮರಿಸುವಂತಹದ್ದು. ಆದ್ದರಿಂದ ಮೊದಲು ನಾವು ಆಳಾಗಿ ದುಡಿಯಬೇಕು ಅನಂತರ ಅರಸನಂತೆ ಸುಖವಾಗಿ ಬಾಳಬಹುದು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

33. ಆಯ್ಕೆ: ಈ ವಾಕ್ಯವನ್ನು **ದೇವನೂರ ಮಹಾದೇವ** ಅವರು ಬರೆದ **'ಎದೆಗೆ ಬಿದ್ದ ಅಕ್ಷರ'** ಎಂಬ ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ವಾಕ್ಯವನ್ನು ಮನೆಮಂಚಮ್ಮ ದೇವತೆ, ತನಗೆ ಗುಡಿ ಕಟ್ಟುತ್ತಿದ್ದ ಜನರಿಗೆ ಹೇಳುತ್ತಾಳೆ. ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ಗ್ರಾಮದೇವತೆ ಮಂಚಮ್ಮಗೆ ಗುಡಿಕಟ್ಟುವಾಗ ಅಲ್ಲಿದ್ದ ಒಬ್ಬನ ಮೈಮೇಲೆ ಆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು **"ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"** ಎನ್ನುತ್ತಾಳೆ. ಅಲ್ಲಿನ ಜನರು 'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ' ಎಂದು ಹೇಳುತ್ತಾರೆ. ಆಗ ದೇವತೆ **"ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ?** ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?" ಎಂದು ಕೇಳಿದಾಗ ಒಬ್ಬನು "ನನಗಿಲ್ಲ ತಾಯಿ" ಹೇಳುತ್ತಾನೆ. ಆಗ ಗ್ರಾಮದೇವತೆ ಮಂಚಮ್ಮ **"ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"** ಎಂದು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ : ತನಗೆ ಗುಡಿಕಟ್ಟುವ ಜನರಿಗೆ ಮನೆ ಇಲ್ಲದ ಮೇಲೆ ತನಗೇಕೆ ಗುಡಿಮನೆ ಎಂದು ಗ್ರಾಮದೇವತೆ ಹೇಳುವ ಈ ಮಾತು ಸಮಾನತೆಯ ತತ್ವವನ್ನು ಪ್ರತಿಬಿಂಬಿಸುತ್ತದೆ.

34. **ಆಯ್ಕೆ :** ಈ ವಾಕ್ಯವನ್ನು **'ಶ್ರೀಮತಿ ಸಾರಾ ಅಬೂಬಕ್ಕರ್'** ಅವರ **'ಚಪ್ಪಲಿಗಳು'** ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಮುದುಕಿ ಮನದಲ್ಲಿ ಸ್ಮರಿಸಿಕೊಳ್ಳುತ್ತಾಳೆ. ತಮ್ಮ ಮನೆಯೊಳಗಿರುವ ರಾಹಿಲನು ತಮ್ಮ ದೇಶದವನಲ್ಲ ತಮ್ಮ ದೇಶಕ್ಕೆ ದ್ರೋಹ ಬಗೆವವನು ಎಂಬ ಸಂದೇಹ ಮೂಡಿ ಕ್ಷಣಕಾಲ ಕಣ್ಣನ್ನು ಕೆಂಪು ಮಾಡಿಕೊಂಡಳು. ಸಮೀಪದಲ್ಲಿದ್ದ ರಾಹಿಲನ ಮುಖ ನೋಡಿದಳು. ಆತನ ಅಸಹಾಯಕತೆಯ, ದಯನೀಯ ನೋಟವನ್ನು ನೋಡಿ **"ಯುದ್ಧಕ್ಕೆ ಹೋದ ತನ್ನ ಮಗನ ಕಣುಗ್ಗಳಂತೆಯೇ ಇವೆಯಲ್ಲ?"** ಎಂದು ತನ್ನ ಮನದಲ್ಲಿ ಅಂದುಕೊಳ್ಳುವ ಸಂದರ್ಭವಾಗಿದೆ.

**ಸ್ವಾರಸ್ಯ:** ರಾಹಿಲನು ತಮ್ಮ ವೈರಿದೇಶದವನು ಎಂದು ತಿಳಿದರೂ ಸಹ ಆತನ ಸಹಾಯ, ಮಾನವೀಯಗುಣ, ದಯನೀಯವಾದ ನೋಟವನ್ನು ನೋಡಿ ಮುದುಕಿ ರಾಹಿಲನ ಮೇಲೆ ಮಾತೃ ವಾತ್ಸಲ್ಯ ತೋರಿಸಿದ ಗುಣ ಸ್ವಾರಸ್ಯವಾಗಿ ಮೂಡಿಬಂದಿದೆ.

35. ಆಯ್ಕೆ : ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ : ಲೇಖಕರು ವೆಸ್ಟ್ ಮಿನ್ ಸ್ಟರ್ ಅಬೆ ಪ್ರಾರ್ಥನಾ ಮಂದಿರದ ಪೊಯೆಟ್ಸ್ ಕಾರ್ನರ್‌ನಲ್ಲಿದ್ದ ಕವಿಗಳ ಸಮಾಧಿಯನ್ನು ನೋಡುತ್ತಾ ಹೋಗುವಾಗ ನಮ್ಮ ದೇಶದಲ್ಲಿ ಸತ್ತವರೆಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ ಇಲ್ಲಿನ ಸಾಧಕರಿಗೆ ಒಂದೊಂದು ಕಲ್ಲನ್ನು ಕೊಟ್ಟಿದ್ದಾರೆ. ಅಲ್ಲಿನ ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!" ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ ಎಂಬ ಭಾವನೆ ಮೂಡಿದ ಸಂದರ್ಭವಾಗಿದೆ.

ಸ್ವಾರಸ್ಯ: ಲೇಖಕರಿಗೆ ಇಂಗ್ಲೆಂಡ್ ಕವಿಗಳ ಮೇಲಿನ ಗೌರವ ಭಾವನೆಯಿಂದ ಅವರಿಗೆ ಕೊಟ್ಟಕಲ್ಲುಗಳನ್ನು ತುಳಿಯಬಾರದೆಂಬ ಭಾವನೆ ಇದ್ದರೂ ದಿಕ್ಕುತೋಚದಂತಾಗಿ ಎಲ್ಲರೂ ಕೊನೆಗೆ ಮಣ್ಣು ಸೇರಬೇಕಲ್ಲವೇ ಎಂಬ ಭಾವವನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

36. **ಆಯ್ಕೆ:** ಪ್ರಸ್ತುತ ಈ ವಾಕ್ಯವನ್ನು ರಾಷ್ಟ್ರಕವಿ **ಜಿ .ಎಸ್.ಶಿವರುದ್ರಪ್ಪನವರು** ರಚಿಸಿದ **'ಎದೆತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಮನುಷ್ಯನು ಆಧುನಿಕರಣ, ಜಾಗತಿಕರಣದ ಹೆಸರಿನಲ್ಲಿ ಸಾಕಷ್ಟು ಪರಿಸರವನ್ನು ಮಲಿನ ಮಾಡುತ್ತಿದ್ದಾನೆ. ಈ ದುರ್ವರ್ತನೆಯಿಂದ ಕಲುಷಿತವಾಗಿರುವ ನದೀಜಲಗಳು ಶುದ್ಧಿಯಾಗಲು ಮುಂಗಾರಿನ ಮಳೆಯೇ ಸುರಿಯಬೇಕು ಎಂದು ಸಂಕಲ್ಪ ಮಾಡಿದ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿ ದೂರ ಮಾಡುವಂತೆ ನಾವು ಹೊಸ ಸಂಕಲ್ಪಗಳಿಂದ ನಮ್ಮ ಮನದ ಕಲ್ಮಶಗಳನ್ನು ಕಳೆದು ಬದುಕು ಸಮೃದ್ಧಿಯಾಗಬೇಕು ಎಂದು ಕವಿ ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

37. **ಆಯ್ಕೆ:** ಈ ವಾಕ್ಯವನ್ನು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದ. ರಾ. ಬೇಂದ್ರೆ** ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕವಿ ದ.ರಾ, ಬೇಂದ್ರೆ ಅವರು ಕಾಲದಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತಾ; ಕಾಲ ಪಕ್ಷಿಯು ನಕ್ಷತ್ರಗಳನ್ನು ಮೀರಿ; ಚಂದ್ರಲೋಕದ ನೀರನ್ನು ಹೀರಿ; ಆಟವಾಡಲು ಹಾರಾಡಲು ಮಂಗಳಲೋಕದ ಅಂಗಳಕ್ಕೇರಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ವೇಗದಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಮುಂದುವರೆಯುತ್ತಾ ಚಂದ್ರ, ಮಂಗಳ ಗ್ರಹ ಮುಂತಾದ ಕಾಯಗಳೆಡೆಗೆ ಹಾರುತ್ತಿರುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

38. ಆಯ್ಕೆ : ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಇದು ಹಲಗಲಿ ಬೇಡರು ಹೇಳಿದ ಮಾತಾಗಿದೆ. ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿದಾಗ, ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ ನಮ್ಮ ಜೀವ ಸತ್ತು ಹೋಗುತ್ತದೆ ಎಂದು ಪಿತೂರಿ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:– ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದವು, ಅವು ಹೋದರೆ ನಮ್ಮ ಪ್ರಾಣಕ್ಕೆ ಸಂಚಕಾರ ಎಂಬ ಭಾವನೆ ಹಲಗಲಿಯ ಬೇಡರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಂತೆ ಇದೆ.

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

**ಅಥವಾ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥

40. ಮಹಾಭಾರತ ಯುದ್ಧದಲ್ಲಿ ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ದುರ್ಯೋಧನನ ಅಜ್ಜನಾದ ಭೀಷ್ಮಚಾರ್ಯರು ಹೀಗೆ ಹೇಳುತ್ತಾರೆ. "ದುರ್ಯೋಧನ ನಾನು ಹೇಳುವ ಮಾತನ್ನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿಸಿ ಮೊದಲಿನಂತೆಯೇ ನಡೆದುಕೊಳ್ಳುವ ಹಾಗೆ ಮಾಡುವೆನು. ಈಗಲಾದರೂ ಅವರು ನಾನು ಹೇಳುವುದನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನು ನಾನು ಹೇಳುವುದುನ್ನು ಮೀರದೆ ನಡೆದುಕೊಳ್ಳಬೇಕು" ಎಂದಾಗ ದುರ್ಯೋಧನನು ಮುಗುಳ್ನಕ್ಕು ದುರ್ಯೋಧನನು ಭೀಷ್ಮಚಾರ್ಯರಿಗೆ; **"ಅಜ್ಜಾ ನಾನು ನಿಮಗೆ ನಮಸ್ಕರಿಸಿ ಹೋಗಬೇಕೆಂದು ನಿಶ್ಚಯಿಸಿ ಬಂದೆನೆವರೆತು ಶತ್ರುಗಳಲ್ಲಿ (ಪಾಂಡವರಲ್ಲಿ) ಸಂಧಿಯನ್ನು ಏರ್ಪಡಿಸಲೆಂದೇನು ಬಂದೆನೆ? ಅಜ್ಜಾ ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿರಿ"** ಎಂದು ಹೇಳುತ್ತಾನೆ.

41. ಸೋಮಶರ್ಮ ಕಾಶ್ಯಪಿಯರ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿ ತಂದೆ ತಾಯಿಯರ ಮಾತಿಗೆ ಕಿವಿಗೊಡದೆ, ವೇದಾದಿಗಳನ್ನು ಓದದೆ, ಅಪ್ಪ ಅಮ್ಮ ಕೂಡಿಟ್ಟ ಹಣವನ್ನು ಪೋಲುಮಾಡುತ್ತಾ ಸಪ್ತವ್ಯಸನಗಳಲ್ಲೂ ಮುಳುಗಿ ಹೋಗಿದ್ದರು. ಹೀಗಿರುವಾಗ ಸೋಮಶರ್ಮನು ಕಾಲವಾದನು. ಇವನ ಮಕ್ಕಳನ್ನು ದೊರೆಯು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿ **"ನೀವು ಏನೇನು ಓದಿರುವಿರಿ?"** ಎಂದು ಕೇಳಿದಾಗ ಇವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಂಬನಿ ಸೂಸಿದರು. ಇವರ ಕಂಬನಿಯು ನೆಲದಲ್ಲಿ ಚಿತ್ತಾರವಾಯಿತು. **"ಇವರು ಕಡುಮೂರ್ಖರು. ಇವರು ಏನನ್ನೂ ಓದಿಲ್ಲ. ಇವರು ಸಪ್ತವ್ಯಸನದಲ್ಲಿ ಮುಳುಗಿರುವರು"** ಎಂದು ಸಭಾಸದರು ಅರಸನಲ್ಲಿ ನಿವೇದಿಸಿ ಕೊಂಡರು. ರಾಜನು ಇವರನ್ನು ಆಚೆಗೆ ತಳ್ಳಿಸಿ ಇವರ ದಾಯಾದಿಗೆ ಮಂತ್ರಿ ಪದವಿಕೊಟ್ಟು ಗೌರವಿಸಿದನು, ಇದರಿಂದ ಅಗ್ನಿಭೂತಿ ಮತ್ತು ವಾಯುಭೂತಿಗಳು ಅಪಮಾನಗೊಂಡು **"ಚಿಂದಿಯನ್ನುಟ್ಟು ಭಿಕ್ಷಾಟನೆ ಮಾಡಿಕೊಂಡು ನಾವು ಓದುವೆವು"** ಎಂದು ಇವರು ತಮ್ಮ ತಾಯಿಗೆ ದೈನ್ಯರಾಗಿ ತಿಳಿಸಿದರು. "ಮಕ್ಕಳೇ, ನೀವು ಕಷ್ಟ ಪಟ್ಟು ಕಲಿಯುವುದಾದರೆ ಈಗಲೂ ಕಾಲ ಮಿಂಚಿಲ್ಲ. ಮಗಧ ದೇಶದ ರಾಜಗೃಹದಲ್ಲಿ ಸೂರ್ಯಮಿತ್ರನೆಂಬ ನಮ್ಮ ಅಣ್ಣನಿದ್ದಾನೆ. ಇವನು ಸಕಲ ವಿದ್ಯಾ ಪಾರಂಗತ. ನಾನು ಒಂದು ಕಾಗದ ಕೊಡುವೆನು. ನಿಮಗೆ ಆಶ್ರಯ ಕೊಟ್ಟು ಓದಿಸುವಂತೆ ನಮ್ಮಣ್ಣನಿಗೆ ಬರೆಯುವೆನು. ನೀವು ಹೋಗಿ ಸೋದರಮಾವನ ಬಳಿ ಕಲಿಯಬಹುದು" ಎಂದು ಕಾಶ್ಯಪಿಯು ಹೇಳಿ ಒಂದು ಪತ್ರಕೊಟ್ಟಳು.

ಸೂರ್ಯಮಿತ್ರನು ಪತ್ರವನ್ನು ಓದಿ ಎಲ್ಲವನ್ನು ಅರ್ಥಮಾಡಿಕೊಂಡು **"ಸದರ ಕೊಟ್ಟರೆ ಇವರು ಹಿಂದಿನಂತೆ ಹಾದಿ ತಪ್ಪುವರು"** ಎಂದು ಸೂರ್ಯಮಿತ್ರನು ಭಾವಿಸಿ **"ಮಕ್ಕಳಿರಾ, ನನಗೆ ಕಾಶ್ಯಪಿಯೆಂಬ ತಂಗಿಯೂ ಇಲ್ಲ. ನಾನು ನಿಮ್ಮ ಸೋದರಮಾವನಾದ ಸೂರ್ಯಮಿತ್ರನಲ್ಲ"** ಎಂದು ಖಚಿತಪಡಿಸಿ, "ನೀವು ಯಾರಾದರೂ ಆಗಿರಿ. ವಿದ್ಯೆ ಕಲಿಯುವ ಆಸೆಯಿಂದ ಬಂದಿರುವಿರಿ. ನಾನು ನಿಮ್ಮನ್ನು ಓದಿಸುವೆನು" ಎಂದು ತಿಳಿಸಿದಾಗ ಈ ಸೋದರರಿಬ್ಬರೂ **"ನಿಮ್ಮ ದಯೆ. ಇದು ನಮಗೆ ಮಹಾಪ್ರಸಾದ"** ಎಂದು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು.

ಸೂರ್ಯಮಿತ್ರನು ಅವರಿಗೆ ಒಂದು ಕ್ಷಣವೂ ಬಿಡುವು ಕೊಡದೆ ಹಗಲುರಾತ್ರಿ ಕಾಡಿಕಾಡಿ ಓದಿಸಿದನು. ಏಳೆಂಟು ವರ್ಷದೊಳಗೆ ನಾಲ್ಕು ವೇದ, ಆರು ಅಂಗ, ಹದಿನೆಂಟು ಧರ್ಮಶಾಸ್ತ್ರ ಮೀಮಾಂಸ, ನ್ಯಾಯಶಾಸ್ತ್ರ ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಚಾಣಕ್ಯ, ಸಾಮುದ್ರಿಕ, ಶಾಲಿಹೋತ್ರ (ಅಶ್ವಶಾಸ್ತ್ರ), ಪಾಳಕಾವ್ಯ (ಗಜಶಾಸ್ತ್ರ, ವೈದ್ಯಶಾಸ್ತ್ರ, ಚರಕ, ಅಶ್ವಿನೀಮತ, ಅಷ್ಟಾಂಗ ಹೃದಯ, ಶುಶ್ರುತನ ವೈದ್ಯಶಾಸ್ತ್ರ ಜ್ಯೋತಿಷ್ಯ, ಮಂತ್ರವಾದ ಮುಂತಾದ ಎಲ್ಲಾ ಶಾಸ್ತ್ರಗಳನ್ನೂ ಕಲಿತು ಪಂಡಿತರಾದರು.

**ಅಥವಾ**

ಅಗ್ನಿಭೂತಿ ಮತ್ತು ವಾಯುಭೂತಿಯರನ್ನು ಬೀಳ್ಕೊಡುವಾಗ **"ನೀವು ನನ್ನ ತಂಗಿಯ ಮಕ್ಕಳೇ. ನೀವು ನನ್ನ ಸೋದರಳಿಯಂದಿರು. ನಿಮಗೆ ನಾನು ಸಲಿಗೆ ಕೊಡಲಿಲ್ಲ. ಏಕೆಂದರೆ ನೀವು ಹಿಂದಿನಂತೆ ಹಾದಿತಪ್ಪಬಾರದು ಎಂದು ಯೋಚಿಸಿದೆನು. ನಿಮ್ಮನ್ನು ಯೋಗ್ಯರನ್ನಾಗಿ ಮಾಡಲು ಇಂಥ ಕಟ್ಟುನಿಟ್ಟು ಅನಿವಾರ್ಯವಾಯಿತು. ಮುಳಿಯಬೇಡಿ, ನನ್ನನ್ನು ಕ್ಷಮಿಸಿಬಿಡಿ"** ಎಂದು ಇವರಿಗೆ ಉಡುಗೆ ತೊಡಿಗೆ ಮತ್ತು ದಾರಿಖರ್ಚು ಇವನ್ನೆಲ್ಲ ಕೊಟ್ಟು ಸೂರ್ಯಮಿತ್ರನು ಇವರನ್ನು ಬೀಳ್ಕೊಟ್ಟನು. **"ನಮ್ಮ ಮಾವ ಒಳ್ಳೆಯದನ್ನೆ ಮಾಡಿದನು. ನಿರ್ಬಂಧದಲ್ಲಿಟ್ಟು ನಮ್ಮಿಬ್ಬರನ್ನೂ ಯೋಗ್ಯರನ್ನಾಗಿ ಮಾಡಿದನು"** ಎಂದು ಹಿರಿಯನಾದ ಅಗ್ನಿಭೂತಿಯು ಸಂತೋಷಪಟ್ಟನು. "ನಾವು ಭಿಕ್ಷೆ ಎತ್ತಿಕೊಂಡು ಬಂದ ಕೂಳಿಗೆ ತುಸು ಎಣ್ಣೆಯನ್ನಾಗಲಿ ತುಸು ಮಜ್ಜಿಗೆಯನ್ನಾಗಲಿ ನಮ್ಮ ಮಾವ ಒಂದು ದಿನವೂ ಕೊಡಿಸಲಿಲ್ಲ. ಕೆರೆಗೆ ನಾವು ಮೀಯಲು ಹೋದಾಗಲೂ ಇವನು ಎಣ್ಣೆಯ ವಾಸನೆಯನ್ನೂ ನೋಡಿಸಲಿಲ್ಲ. ಆಗಾಗ ನಂಟರಿಷ್ಟರನ್ನೂ ಕರೆಸಿ ನಮ್ಮ ಕಣ್ಣೆದಿರೇ ದಿವ್ಯಾಹಾರವನ್ನು ಇವನು ಉಣ್ಣುತ್ತಿದ್ದನು.

ಆಳುಗಳಿಗೂ ಔತಣದೂಟವಾಗುತಿದ್ದಿತು. ಯಾವ ಹಬ್ಬದಲ್ಲೂ ನಮಗೆ ಇವನು ಊಟವಿಡಿಸಲಿಲ್ಲ. ಇವನು ಪಂಚಮಹಾಪಾತಕನೇ ಸರಿ. ಏಳೆಂಟು ವರ್ಷ ನಮ್ಮನ್ನು ಶತ್ರುಗಳಂತೆ ನಡೆಸಿಕೊಂಡನಲ್ಲ" ಎಂದು ಕಿರಿಯವ ವಾಯುಭೂತಿ ಮಾವ ಮಾಡಿದ್ದೆಲ್ಲ ಅನ್ಯಾಯವೆಂದು ಮನಸ್ಸಿನಲ್ಲಿ ಕ್ರೋಧದ ಭಾವನೆ ಮೂಡಿತು.

42. ಕರ್ಣನ ಕೊರಳ ನರಗಳು ಬಿಗಿದವು. ಕಣ್ಣೀರು ಹೆಚ್ಚಾಗಿ ಅತಿಯಾಗಿ ನೊಂದುಕೊಂಡನು.

- ಮನದೊಳಗೆ ಕೌರವನಿಗೆ ಕೇಡಾಯಿತು ಎಂದುಕೊಂಡನು.
- ಹರಿಯು ತನ್ನ ದ್ವೇಷವನ್ನು ಹೊರಗೆ ತೋರಿಸದೆ ಸೇಡು ತೀರಿಸಿಕೊಳ್ಳುತ್ತಿದ್ದಾನಲ್ಲ ಎಂದು ಅಳುಕಿದನು.
- ನನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನಲ್ಲ, ಮುಂದೇನು ಮಾತನಾಡುವುದು ಎಂದು ಚಿಂತಿಸಿದನು.
- ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ.
- ಕುಂತಿಯ ಪುತ್ರರು ಮತ್ತು ದುರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ.
- ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ಈ ಕೃಷ್ಣ ನನ್ನ ವಂಶಮೂಲವನ್ನು ತಿಳಿಸಿ ಕೌರವೇಂದ್ರನನ್ನು ಕೊಂದನಲ್ಲ.
- ವೀರ ಕೌರವರಾಯನೇ ನನಗೆ ಒಡೆಯ, ದುರ್ಯೋಧನ ಆದಂತೆ ನಾನು ಆಗುವೆನು.
- ನಾಳಿನ ಸಮರದಲ್ಲಿ ಪಾಂಡುವಿನ ಪುತ್ರರಲ್ಲಿ ನನ್ನ ಭುಜಭಲದ ಪರಾಕ್ರಮವನ್ನು ತೋರಿಸುತ್ತೇನೆ.
- ಚತುರಂಗ ಬಲದಿಂದ ಕೂಡಿದ ನಾಳಿನ ಮಹಾಭಾರತ ಯುದ್ಧದಲ್ಲಿ ಮೃತ್ಯುದೇವತೆಗೆ ಭೋಜನ ಕೂಟ ಏರ್ಪಡಿಸುತ್ತೇನೆ.
- ಯುದ್ಧರಂಗದಲ್ಲಿ ಅಸಂಖ್ಯಾ ವೀರಯೋಧರನ್ನು ಕೊಂದು ಕೌರವನ ಋಣ ತೀರುವಂತೆ ಮಾಡುತ್ತೇನೆ.
- ಸೂರ್ಯನ ಮೇಲಾಣೆ ಆ ವೀರರೌವರನು(ಪಾಂಡವರು) ನೋಯಿಸುವುದಿಲ್ಲ ಎಂಬ ಮನಸ್ಥಿತಿ ಉಂಟಾಯಿತು.

**ಅಥವಾ**

ಕರ್ಣನ ನಿರ್ಧಾರ ಸರಿ ಇದೆ ಏಕೆಂದರೆ ಕೃಷ್ಣನು ಕರ್ಣನ ಜನ್ಮರಹಸ್ಯವನ್ನು ತಿಳಿಸಿ, ರಾಜಪದವಿಯ ಆಮಿಷವನ್ನು ಒಡ್ಡಿದರೂ ಸ್ವಾಮಿನಿಷ್ಠೆಗೆ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣ ಕೃಷ್ಣನ ಪ್ರಲೋಭನೆಗೆ ಒಳಗಾಗಲಿಲ್ಲ. ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟಗಳನ್ನು ತನ್ನಲ್ಲಿ ನುಂಗಿಕೊಂಡಿದ್ದಾನೆ. ಕೃಷ್ಣನ ಪ್ರಲೋಭನೆ ವ್ಯರ್ಥಗೊಳ್ಳುವಂತೆ ಮಾಡಿ ಸ್ವಾಮಿನಿಷ್ಠೆಯನ್ನು ಮರೆದನು. ಕರ್ಣನು ರಾಜ್ಯದ ಸಿರಿಗೆ ಸೋಲಲಿಲ್ಲ, ಸಾಕಿದ ಒಡೆಯನಿಗೆ ದ್ರೋಹ ಮಾಡಲಿಲ್ಲ. ಒಂದು ಕಡೆ ಸ್ವಾಮಿನಿಷ್ಠೆಯನ್ನು ಬಿಡಲಿಲ್ಲ. ಇನ್ನೊಂದು ಕಡೆ ಸಹೋದರರ ಮೇಲಿನ ವಾತ್ಸಲ್ಯವನ್ನು ಮರೆಯಲಿಲ್ಲ. "ವೀರ ಕೌರವರಾಯನೇ ನನಗೆ ಒಡೆಯ, ಆತನ ವೈರಿಗಳು ನನಗೂ ವೈರಿಗಳೇ, ಆತನ ಹೊಗಳಿಕೆಯೇ ನನ್ನ ಹೊಗಳಿಕೆ ದುರ್ಯೋಧನ ಆದಂತೆ ಆಗುವೆನು, ನಾಳಿನ ಸಮರದಲ್ಲಿ ಪಾಂಡುವಿನ ಪುತ್ರರಲ್ಲಿ ನನ್ನ ಭುಜಭಲದ ಪರಾಕ್ರಮವನ್ನು, ಅದರ ಶ್ರೇಷ್ಠತೆಯನ್ನು ತೋರಿಸುತ್ತೇನೆ" ಎಂಬ ಮಾತು ಕರ್ಣನ ಸ್ವಾಮಿ ನಿಷ್ಠೆ ಮತ್ತು ಶೌರ್ಯಗಳನ್ನು ಪ್ರತಿಬಿಂಬಿಸುತ್ತವೆ. **"ಚತುರಂಗ ಬಲದಿಂದ ಕೂಡಿದ ನಾಳಿನ ಮಹಾಭಾರತ ಯುದ್ಧದಲ್ಲಿ ಮೃತ್ಯುದೇವತೆಗೆ ಭೋಜನ ಕೂಟವಾಗುವಂತೆ ಮಾಡುತ್ತೇನೆ. ಯುದ್ಧರಂಗದಲ್ಲಿ ಅಸಂಖ್ಯಾ ವೀರಯೋಧರನ್ನು ಕೊಂದು ಕೌರವನ ಋಣ ತೀರುವಂತೆ ಮಾಡುತ್ತೇನೆ. ಒಡೆಯನ ಅಗತ್ಯದ ಸಮಯಕ್ಕೆ ಆಗುವಂತೆ ನನ್ನ ಶರೀರವನ್ನು ತ್ಯಜಿಸುತ್ತೇನೆ. ಸೂರ್ಯನ ಮೇಲಾಣೆ ನಿನ್ನ ಆ ವೀರರೌವರನು ನೋಯಿಸುವುದಿಲ್ಲ"** ಎಂಬ ಮಾತುಗಳು ಕರ್ಣನ ತ್ಯಾಗ ಮತ್ತು ಕರುಣಾ ಗುಣಗಳಿಗೆ ಹಿಡಿದ ಕನ್ನಡಿಯಾಗಿವೆ. ಆದ್ದರಿಂದ ಯುದ್ಧದ ವಿಚಾರದಲ್ಲಿ ಕರ್ಣ ತೆಗೆದುಕೊಂಡ ನಿರ್ಧಾರ ಸರಿಯಾಗಿದೆ ಎಂದು ಹೇಳಬಹುದು.

43. ಅ) ಕಾಡಿನ ತುಂಬ ಪ್ರೀತಿಯೆಂಬ ಅಲೆಯು ನೀರಿನಂತೆ ಹರಿಯಿತು. ಹಕ್ಕಿಗಳ ಗೂಡಿನಲ್ಲಿ ಹಾಡು ಹುಟ್ಟಿ, ಹೊಸ ರಾಗ ಹಾಡುವಂತೆ, ಹೂವಿನಲ್ಲಿರುವ ಮಕರಂದವನ್ನು ಸವಿಯಲು ದುಂಬಿಯು ಹೂವನ್ನು ಸೇರುವಂತೆ, ಮರ-ಗಿಡಗಳು ಪರಸ್ಪರ ಅಪ್ಪಿಕೊಂಡು ಕುಣಿಯುವಂತೆ, ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಸಂತೋಷದಿಂದ ಮುಂದೆ ನಡೆದನು.

ಆ) ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದನು. ಆ ಸಂದರ್ಭದಲ್ಲಿ ಮರದ ಆಶ್ರಯ ಪಡೆದ ಬಳ್ಳಿಯು ಹೂ ಅರಳಿಸಿ ಸುಗಂಧವನ್ನು ಹೊರಸೂಸಿತು. ತಾಯಿ ಹಕ್ಕಿಯೊಂದು ತನ್ನ ಮರಿಗೆ ಆಹಾರವನ್ನು ಕೊಟ್ಟು ಸಂತೋಷದಿಂದ ಹಾರಾಡಿತು. ಇರುವೆಗಳು ಹುತ್ತದಿಂದ ಸಾಲು-ಸಾಲಾಗಿ ಹೊರಗೆ ಬರುವಂತೆ, ಬೆಳ್ಳಕ್ಕಿಗಳು ಗುಂಪು-ಗುಂಪಾಗಿ ಉದ್ದನೆಯ ಸಾಲು ಮಾಡಿ ಆಕಾಶಕ್ಕೆ ಏಣಿ ಹಾಕಿದಂತೆ ಪ್ರಕೃತಿಯಲ್ಲಿ ವಿಸ್ಮಯ ಕಂಡು ಬಂದಿತು.

44.

ಕ್ಷೇಮ ಶ್ರೀ ನಂದನ್

10ನೇ ತರಗತಿ

ಕಾಡ ಸಿದ್ದೇಶ್ವರ ಪ್ರೌಢಶಾಲೆ

ಸವದತ್ತಿ ರಸ್ತೆ

ಧಾರವಾಡ

ದಿ : 12-02-2024

**ನನ್ನ ಪ್ರೀತಿಯ ಸ್ನೇಹಿತ/ತೆ**

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನೀನು ಅಲ್ಲಿ ಕ್ಷೇಮವಾಗಿದ್ದೀಯ ಎಂದು ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚನ್ನಾಗಿ ನಡೆಯುತ್ತಿದೆ ಎಂದು ಭಾವಿಸುತ್ತಾ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ. ನಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ 'ಕನ್ನಡ ಭಾಷಣ' ದಲ್ಲಿ ಪ್ರಥಮ ಸ್ಥಾನ ಪಡೆದು, ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿ ಅಲ್ಲೂ ಸಹ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತೇನೆ. ದಿನಾಂಕ : 04-03-2024 ರಂದು ನಮ್ಮ ಧಾರವಾಡ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ "ಕನ್ನಡ ನನ್ನ ಮಾತೃಭಾಷೆ" ಈ ವಿಷಯವನ್ನು ಕುರಿತು ಭಾಷಣ ಮಾಡಲಿದ್ದೇನೆ. ಆದ್ದರಿಂದ ನೀನು ತಪ್ಪದೆ ಬರಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

**ಧನ್ಯವಾದಗಳೊಂದಿಗೆ**

**ಇಂತಿ ನಿನ್ನ ಪ್ರೀತಿಯ ಸ್ನೇಹಿತ/ತೆ**

ನಂದನ್

**ಹೊರ ವಿಳಾಸ**

ಮನೋಜ್ ಆರ್

10ನೇ ತರಗತಿ

ಸರ್ಕಾರಿ ಪ್ರೌಢಶಾಲೆ

5ನೇ ಮುಖ್ಯರಸ್ತೆ ರಾಮಮಂದಿರ ರಸ್ತೆ

ಚಾಮರಾಪೇಟೆ – 5600014

ಅಥವಾ

ದಿ:

**ಇವರಿಂದ,**

ನರೇಶ್

10 ನೆಯ ತರಗತಿ,

ಮುರಾರ್ಜಿದೇಸಾಯಿ ವಸತಿಶಾಲೆ,

ಅಶೋಕ ಸರ್ಕಲ್ ಹತ್ತಿರ,

ದಾವಣಗೆರೆ.

**ಇವರಿಗೆ,**

ಮಾನ್ಯ ಗೌರವ ಸಂಪಾದಕರು,

'ಪ್ರಜಾವಾಣಿ' ದಿನಪತ್ರಿಕೆ,

ದಾವಣಗೆರೆ.

**ಮಾನ್ಯರೇ,**

**ವಿಷಯ : ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಮನವಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ : 12/01/2023 ರಂದು ನಮ್ಮ ಶಾಲೆಯ ಆಟದ ಮೈದಾನದಲ್ಲಿ ಶಾಲಾ ವಾರ್ಷಿಕೋತ್ಸವನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಭಾಗದ ಶಾಸಕರು ವಹಿಸಿದ್ದರು. ಮುಖ್ಯ ಶಿಕ್ಷಕರು, ಶಾಲೆಯ

ಎಲ್ಲಾ ಶಿಕ್ಷಕ ವರ್ಗದವರು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದು ಯಶಸ್ವಿಗೊಳಿಸಿದೇವು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರವಗಳು ನಡೆದವು. ಶಾಸಕರು ತಮ್ಮ ಭಾಷಣದಲ್ಲಿ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿದರು. ಈ ಕಾರ್ಯಕ್ರಮದ ಸಂಪೂರ್ಣ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದೇವೆ. ದಯವಿಟ್ಟು ಈ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಮನವಿ.

**ವಂದನೆಗಳೊಂದಿಗೆ.**

**ಇಂತಿ ನಿಮ್ಮ ವಿಶ್ವಾಸಿ**

ನರೇಶ್

45. **ಪೀಠಿಕೆ :** ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು 02.10.2014 ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದರು.

**ವಿಷಯ ನಿರೂಪಣೆ** : ಪ್ರಧಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ **'ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ'** ಎಂಬುದಾಗಿದೆ.

**ಉಪಸಂಹಾರ** : ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ. ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**ಪೀಠಿಕೆ :** ಪ್ರಾಚೀನ ಸ್ಮಾರಕಗಳು ರಾಷ್ಟ್ರ ಪರಂಪರೆಯ ಹೆಗ್ಗುರುತುಗಳು. ನಮ್ಮ ಭವ್ಯ ಪರಂಪರೆಯ ಪ್ರತೀಕಗಳಾಗಿವೆ. ಗತಕಾಲದ ವೈಭವಗಳನ್ನು ಅರಿಯಲು ಆಧಾರವಾಗಿರುವಂತಹ ಅಮೂಲ್ಯವಾದ ಸಂಪತ್ತು ಎಂದೇ ಹೇಳಬಹುದು.

ವಿಷಯ ನಿರೂಪಣೆ : ಪ್ರಾಚ್ಯ ಎಂದರೆ ಪ್ರಾಚೀನವಾದದ್ದು ಎಂದರ್ಥ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ವಿಜಯದ ನೆನಪಿಗಾಗಿ ವಿಜಯ ಸ್ಮಾರಕಗಳು, ಅಥವಾ ಇನ್ನಾವುದಾದರೂ ಸ್ಮರಣೆಗೋಸ್ಕರ ದೇವಾಲಯಗಳು, ಸ್ತಂಭಗಳು, ಶಾಸನಗಳು, ಬಸದಿಗಳು, ಮಸೀದಿಗಳು, ಮಹಲ್ಗಳು, ಮೂರ್ತಿಗಳು, ಅರಮನೆಗಳು, ಕೋಟೆ–ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಇವೇ ನಮ್ಮ ಪ್ರಾಚ್ಯ ಸ್ಮಾರಕಗಳು. ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಹೋಗುವುದು ನಮ್ಮ ಹೆಗ್ಗಳಿಗೆ. ಯಾಕೆಂದರೆ ನಮ್ಮ ಪ್ರಾಚೀನರ ಜೀವನ ವ್ಯವಸ್ಥೆಗಳನ್ನು, ಇತಿಹಾಸ ಪರಂಪರೆಯನ್ನು ಅರಿಯಲು ಮೂಲಭೂತವಾದ ಆಕರವಾಗಿರುವಂತವು. ಭಾರತೀಯರು ಕಲೆ–ವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾಗಿರುವಂತವರು. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಮತ್ತೆ ಹಾಗಾಗಬಾರದು. ನಮ್ಮ ಗತಕಾಲದ ಜೀವನದ ಮೇಲೆ ಮುಂದಿನ ಜೀವನ ನಿಂತಿರುತ್ತದೆ. ಪ್ರಾಚೀನ ಸ್ಮಾರಕಗಳ ಆಧಾರದ ಮೇಲೆ ಅಂದಿನ ಜನರ ವೈಭವದ ಜೀವನ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಅಂಶಗಳನ್ನು ತಿಳಿಯಬಹುದು. ಆದ್ದರಿಂದ ಅವುಗಳನ್ನು ರಕ್ಷಿಸಬೇಕು. ಕನ್ನಡ ನಾಡಿನಲ್ಲಿ ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ತಲಕಾಡು, ಶ್ರವಣಬೆಳಗೊಳ, ಮೈಸೂರು, ಬೀದರ್, ಬಿಜಾಪುರ ಮುಂತಾದ ಕಡೆ ಪ್ರಾಚ್ಯ ಸ್ಮಾರಕಗಳನ್ನು ನೋಡಿದಾಗ ಅಂದಿನ ರಾಜಮಹಾರಾಜರ ಇತಿಹಾಸ ಮತ್ತು ಕಲೆ, ಸಂಸ್ಕೃತಿಯನ್ನು ತಿಳಿಯಬಹುದು.

**ಉಪಸಂಹಾರ** : ಭಾರತೀಯರ ಸಂಸ್ಕೃತಿಯ ದ್ಯೂತಕವಾಗಿರುವ, ಐತಿಹಾಸಿಕ ಮಹತ್ವವನ್ನು ತಿಳಿಸುವ ಪ್ರಾಚೀನ ಕಾಲದ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಹೋಗಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಬ್ದಾರಿಯಾಗಿದೆ.

*************************

# ಮಾದರಿ ಉತ್ತರಗಳು – 3

1. ಯಣ್ ಸಂಧಿ
2. **ವಿವರಣಾತ್ಮಕ ಚಿಹ್ನೆ**
3. **ಅಧಿಕರಣ**
4. **ಆದ್ದರಿಂದ**
5. **ಸಿರಿತನ**
6. **ವಿಶ್ವಾಸ**
7. **ಜೋಡುನುಡಿ**
8. **ಅಂಕುಸ**
9. **ಗಮಕ ಸಮಾಸ**
10. **ಆತ್ಮಾರ್ಥಕ ಸರ್ವನಾಮ**
11. ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.
12. "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ" ಎಂದು ಗೊಣಗಿಕೊಂಡು ಬಾಗಿಲು ತೆರೆದಳು.
13. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಫ.ಗು. ಹಳಕಟ್ಟಿಯವರು.
14. **"ಸಲುಗೆ ಕೊಟ್ಟರೆ ಇವರು ಹಿಂದಿನಂತೆ ಹಾದಿ ತಪ್ಪುವರು"** ಎಂದು ತಿಳಿದು ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳುತ್ತಾನೆ.
15. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.
16. ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
17. ಅರಿಯದರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯನ್ನು ತೆಗೆದಂತಾಗುವುದು.

18. ಒಂದು ದಿನ ಖಜಾನೆಗೆ ಹಣಕಟ್ಟಲು ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಹೋಗಿರುತ್ತಾರೆ. ಹಣ ಕಟ್ಟಿ, ಸ್ನೇಹಿತರನ್ನು ಮಾತನಾಡಿಸಿಕೊಂಡು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಕಾಡುದಾರಿ ಬೆಳದಿಂಗಳ ದಿನ **"ಸ್ವಲ್ಪ ದೊಡ್ಡ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು"** ಎಂದು ಶಾನುಭೋಗರು ಯೋಚಿಸುತ್ತಾ ಬೇಗ ಬೇಗ ನಡೆದರು.
19. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.
20. ಡಾ ಅಶೋಕ ಪೈ ಅವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯವನ್ನು ಹೀಗೆ ಹೇಳಿದ್ದಾರೆ. ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾಗ, ಇನ್ನು ಕೆಲವರು ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತಿರುತ್ತಾರೆ. ಟೆಲಿವಿಷನ್‌ನಲ್ಲಿ ಬರುವ ಕೊಲೆಯ ದೃಶ್ಯ ನೋಡುತ್ತಿರುವವರ ದುಃಖದ ಭಾವನೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿನಲ್ಲೂ ದುಗುಡ ಉಂಟುಮಡುತ್ತದೆ. ನೃತ್ಯದ ದೃಶ್ಯ ಖುಷಿಯ ಭಾವನೆ ಉಂಟುಮಾಡುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿರುವುದಿಲ್ಲ. ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಎಲ್ಲಾ ಜೀವಿಗಳಿಗೂ ಆಗುತ್ತದೆ ಎಂದಿದ್ದಾರೆ.

21. 'ವೂಲವರ್ಥ' ಎಂಬುದು 'ಸ್ಟೇಷನರಿ' ಅಂಗಡಿ. ಇದೊಂದು ಮಹಾಕೋಶದಂತಿದೆ. ಈ ವೂಲವರ್ಥ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ(ಚಡ್ಡಿ), ಸಾಬೂನು, ಔಷಧ ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಎಲ್ಲವೂ ದೊರೆಯುತ್ತವೆ.
22. ಲಂಡನ್ನಿನ ಹೆಣ್ಣು ಮಕ್ಕಳು ಉಪಹಾರಗೃಹಗಳಲ್ಲಿ ಮಾಣಿಗಳಾಗಿ, ದೊಡ್ಡದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್ ಆಗಿ, ಕಾರಕೂನರಾಗಿ (ಗುಮಾಸ್ತರು), ಹಾಗೂ ಸಿನಿಮಾ ಗೃಹಗಳಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ.
23. "ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ" ಎಂಬುದು ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.
24. ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ" ಎಂಬ ಮಾತುಗಳನ್ನಾಡಿದನು.

25. ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ, ಸರಕಾರ ಇರುವುದಾದರೂ ಜನರಿಗೆ ಜೀವನ, ಸ್ವಾತಂತ್ರ್ಯ ಸಮತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ, ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ.

26. **ಮ**ಹಿಳಾ ಶೋಷಣೆಂಬುದು ಬ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನ್ನೂ ಆಕ್ರಮಿಸಿಕೊಂಡಿದೆ. ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ. ಸಾಮಾಜಿಕ ನ್ಯಾಯದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬ ಆಶಯ ಹೊಂದಿದೆ.

27. ಅರಿಯದರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯನ್ನು ತೆಗೆದಂತಾಗುವುದು. ಅಜ್ಞಾನಿಯ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯನ್ನು ತೆಗೆದಂತೆ, ಜ್ಞಾನಿಗಳ ಜೊತೆಗೆ ಸಂಗ ಮಾಡಿದರೆ ಮೊಸರನ್ನು ಕಡಿದು ಬೆಣ್ಣೆ ತೆಗೆದಂತೆ ಎಂದು ಅರಿಯದವರ ಸಂಗದ ಬಗೆಗೆ ಅಕ್ಕಮಹಾದೇವಿಯ ಅಭಿಪ್ರಾಯವಾಗಿದೆ.

28. ಮೂರ್ಖರು ಮತ್ತು ರಾಜಮನೆತನದಲ್ಲಿ ಹುಟ್ಟಿದವರಿಗೆ ಗುರೂಪದೇಶವು ಮೆಚ್ಚಿಕೆಯಾಗುವುದಿಲ್ಲ. ಏಕೆಂದರೆ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. **"ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ"** ಎನ್ನುವಂಥ ಭಾವ ಹೊಂದಿರುವುದರಿಂದ ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ.

29. ಶ್ರೀಮತಿ ಸಾರಾ ಅಬೂಬಕ್ಕರ್ ಅವರು **30 ಜೂನ್ 1936ರಂದು ಕಾಸರಗೋಡಿನ**ಲ್ಲಿ ಜನಿಸಿದರು. ಇವರು ಕನ್ನಡ ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿದ್ದಾರೆ.

ಇವರು **'ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ತಳ ಒಡೆದ ದೋಣಿಯಲಿ, ಸುಳಿಯಲ್ಲಿ ಸಿಕ್ಕವರು,** ಇತ್ಯಾದಿ ಪ್ರಮುಖ ಕಾದಂಬರಿಗಳು, ಹಾಗೂ **ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಪಯಣ** ಮೊದಲಾದ ಕಥಾಸಂಕಲನಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ **ನೃಪತುಂಗ ಪ್ರಶಸ್ತಿ** ಲಭಿಸಿವೆ.

30. **ಕುವೆಂಪು** ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ.ಶ. 1904 ಡಿಸೆಂಬರ್ 29ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.

ಇವರು **'ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ , ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಯಮನ ಸೋಲು, ಬೆರಳ್ಗೆ ಕೊರಳ್,ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ,** ಮೊದಲಾದ ಪ್ರಶಸ್ತಿಗಳು ಲಭಿಸಿವೆ.

31.

| ನ | ಆ | ಭ | ಆ | ಆ | ಆ | ರ |
|---|---|---|---|---|---|---|
| ∪∪∪ | ∪–∪ | –∪∪ | ∪–∪ | ∪–∪ | ∪–∪ | –∪– |
| ಒಡವೆ | ಯನರ್ಥಿ | ಗಿತ್ತೆನ | ವನೀತ | ಳಮಂ ಗು | ರುಗಿತ್ತೆ | ನೀಗಳೊಂ |

ಛಂದಸ್ಸು – ಚಂಪಕ ಮಾಲಾ ವೃತ್ತ

---

32. ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

ಸಮನ್ವಯ : ಉಪಮೇಯ : ಬಾನಿನಲ್ಲಿ ಗಾಳಿಪಟಗಳು

ಉಪಮಾನ : ಹಕ್ಕಿಗಳು

ಉಪಮಾವಾಚಕ : ಅಂತೆ

ಸಮಾನಧರ್ಮ : ಹಾರಾಟ

ಇಲ್ಲಿ ಉಪಮೇಯವಾದ 'ಬಾನಿನಲ್ಲಿ ಗಾಳಿಪಟಗಳು' ಗಳನ್ನು ಉಪಮಾನವಾದ 'ಹಕ್ಕಿಗಳಿಗೆ' ಹೋಲಿಸಲಾಗಿದೆ. ಅಂತೆ ಎಂಬ ಉಪಮಾವಾಚಕ ಪದವಿದ್ದು, ಹಾರಾಟ ಎಂಬ ಸಮಾನಧರ್ಮ ಇರುವುದರಿಂದ ಇದು ಪೂರ್ಣೋಪಮಾಲಂಕಾರ.

33. ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **'ಕೂಡಿ ಬಾಳಿದರೆ ಸ್ವರ್ಗ ಸುಖ'** ಎಂಬ ಗಾದೆಯು ಪ್ರಸಿದ್ಧವಾಗಿದೆ.

**'ವಸುದೈವ ಕುಟುಂಬಂ'** ಎಂಬ ಮಾತನ್ನು ನೆನೆದರೆ ಸಾಕು ಈ ಗಾದೆ ಅರ್ಥ ಪರಿಪೂರ್ಣವಾಗುತ್ತದೆ. ಮನುಷ್ಯ ಸಂಘಜೀವಿ. ಅವನು ಒಬ್ಬಂಟಿಯಾಗಿ ಬದುಕುವುದು ಬಲು ಕಷ್ಟ. ಆದ್ದರಿಂದ ಎಲ್ಲರ ಸಮೂಹದಲ್ಲಿ ಸುಖವಾಗಿ ಬಾಳುತ್ತಾನೆ. **'ಹನಿ ಹನಿ ಕೂಡಿ ಹಳ್ಳ ತೆನೆ ತೆನೆ ಕೂಡಿ**

**ಬಳ್ಳಿ'** ಎನ್ನುವ ಹಾಗೆ ಕುಟುಂಬದ, ಸಮಾಜದ ಎಲ್ಲಾ ಜನರು ಒಟ್ಟಾಗಿ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಅನುಭವಿಸಬಹುದು. ಸ್ವರ್ಗಸುಖ ಬೇರೆಲ್ಲೂ ಇಲ್ಲ ನಮ್ಮ ಹೊಂದಾಣಿಕೆಯಲ್ಲಿದೆ. ಒಗ್ಗಟ್ಟಿನಲ್ಲಿದೆ. ಸಮೂಹವಾಗಿ ಕೂಡಿ ಬಾಳುವುದರಲ್ಲಿದೆ.

ಒಂದು ಕಾಡಿನಲ್ಲಿ ವಿವಿಧ ಜಾತಿಯ ಪ್ರಾಣಿಗಳು ಒಗ್ಗಟ್ಟಾಗಿದ್ದವು. ಅವುಗಳು ಒಗ್ಗಟ್ಟಾಗಿದ್ದಾಗ ಕಾಡು ಬಹು ಸುಂದರವಾಗಿ, ಹಚ್ಚಹಸುರಿನಿಂದ ಕಂಗೊಳಿಸುತ್ತಿತ್ತು. ಯಾವುದೋ ಕಾರಣದಿಂದ ಬೇರೆ ಬೇರೆಯಾಗಿ ದೂರ ದೂರವಾದವು. ಈ ಸಮಯವನ್ನು ನೋಡಿದ ಮನುಷ್ಯ ಕಾಡನ್ನು ಕಡಿಯಲು ಪ್ರಾರಂಭಿಸಿದನು. ಇದರಿಂದ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾಯಿತು. ಇದನ್ನು ಅರಿತ ಪ್ರಾಣಿಗಳು ನಾವು ಹೀಗೆ ಬೇರೆ ಬೇರೆಯಾಗಿದ್ದರೆ ಮುಂದೆ ನಮ್ಮ ಆಹಾರಕ್ಕೆ ಸಂಪೂರ್ಣ ಕುತ್ತು ಬರುವುದೆಂದು ತಿಳಿದು ಮತ್ತೆ ಎಲ್ಲವೂ ಒಂದಾಗಲು ಪ್ರಾರಂಭಿಸಿದವು. ಇದರಿಂದ ಮನುಷ್ಯ ಅವುಗಳಿಗೆ ಹೆದರಿ ಕಾಡಿನಿಂದ ಓಡಿಹೋದನು. ಮತ್ತೆ ಸ್ವಲ್ಪ ದಿನಕ್ಕೆ ಕಾಡು ಸಮೃದ್ಧವಾಯಿತು. ಪ್ರಾಣಿಗಳೆಲ್ಲವೂ ಮತ್ತೆ ಎಂದಿನಂತೆ ಸುಖವಾಗಿದ್ದವು. ಇದರಿಂದ ಎಲ್ಲರೂ ಒಟ್ಟಾಗಿ ಬಾಳಿದರೆ ಸುಖವಾಗಿ ಇರಬಹುದು ಎಂದು ತಿಳಿಯಿತು. ಆದ್ದರಿಂದ ನಾವೆಲ್ಲರೂ ಅವರಿವರು ಎನ್ನದೇ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಕಾಣಬಹುದು ಎಂದು ಹೇಳಬಹುದು.

**ಅಥವಾ**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಅಂತೆಯೇ **"ಮಾತೇ ಮುತ್ತು; ಮಾತೇ ಮೃತ್ಯು"** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಈ ಗಾದೆಯು ನಿಮ್ಮ ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತು ನಮ್ಮ ವ್ಯಕ್ತಿತ್ವದ ಕನ್ನಡಿಯಾಗಿದೆ. ನಮ್ಮ ಬೇಕು ಬೇಡಗಳನ್ನು ಅಭಿಪ್ರಾಯಗಳನ್ನು ಬೇರೆಯವರಿಗೆ ಮಾತುಗಳ ಮೂಲಕ ತಿಳಿಸುತ್ತೇವೆ ಹಾಗೇ ಅವರಿಂದ ತಿಳಿಯುತ್ತೇವೆ. **"ಮಾತು ಬಲ್ಲವ ಮಾಣ್ಯಕ್ಯ ತಂದ, ಮಾತರಿಯದವ ಜಗಳ ತಂದ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು, ಮಾತು ಬಲ್ಲವನಿಗೆ ಜಗಳವಿಲ್ಲ"** ಎಂಬ ಗಾದೆ ಮಾತುಗಳು ಕೂಡ ಮಾತಿನ ಮಹತ್ವವನ್ನು ತಿಳಿಸುತ್ತದೆ. ಅಂತೆಯೇ ಬಸವಣ್ಣ ನವರು "ನುಡಿದರೆ ಮುತ್ತಿನ ಹಾರದಂತಿರಬೇಕು _ಲಿಂಗಮೆಚ್ಚಿ ಅಹುದಹುದೆನಬೇಕು" ಎಂದು ಹೇಳಿದ್ದಾರೆ. ಹಾಗೆಯೇ ಪಂಪ ಕವಿ "ಹಿತ ಮಿತ ಮೃದು ವಚನಂ" ಎಂದು ಹೇಳಿರುವುದನ್ನು ಸ್ಮರಿಸಬಹುದು. ಮಾತು ಹಿತ-ಮಿತವಾಗಿ ಕೇಳುಗರಿಗೆ ಮಧುರವಾಗಿ ಮುತ್ತಿನಂತಿರಬೇಕು. ನಯವಾದ ವಿನಯ ಪೂರ್ವಕವಾದ ಮಾತು ಕೇಳುಗರಿಗೆ ಸಂತೋಷವನ್ನುಂಟು ಮಾಡುತ್ತದೆ. ಒರಟಾದ ಮಾತು ಅಸಂತೋಷವನ್ನುಂಟು ಮಾಡುತ್ತದೆ. ಹಾಗೆ ಜಗಳಕ್ಕೆ ಕಾರಣವಾಗಬಹುದು. ಕಠೋರವಾದ ಮಾತುಗಳು ಇತರರಿಗೆ ನೋವನ್ನು ತರಬಲ್ಲವು. ಆದ್ದರಿಂದ ಮಾತು ಮುತ್ತಿನಂತಿರಬೇಕು. ಒಳ್ಳೆಯ ಮಾತು ಸ್ನೇಹ ಸಂಬಂಧವನ್ನು ಬೆಳೆಸಿದರೆ ಕೆಟ್ಟಮಾತು ಒಡಕನ್ನು ಹುಟ್ಟುಹಾಕುತ್ತದೆ. ಅದಕ್ಕಾಗಿಯೇ ಸರ್ವಜ್ಞ ಕವಿಯು 'ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಹತಿಯು ಮಾತಿನಿಂ ಸರ್ವಸಂಪದವು ಲೋಕಕ್ಕೆ ಮಾತೆ ಮಾಣಿಕವು" ಎಂದಿದ್ದಾನೆ. ಅದುದರಿಂದ ಮಾತು ಮೃದುವಾಗಿದ್ದರೆ ಮುತ್ತಿನಂತ ಮಾತು ಎಂದು ಮಾತು ಒರಟಾಗಿದ್ದರೆ ಮೃತ್ಯುವನ್ನು ತರಬಲ್ಲದು ಎಂದು ಎಚ್ಚರಿಕೆಯಿಂದ ಮಾತನಾಡಬೇಕು ಎಂಬ ಅರ್ಥವನ್ನು ಸ್ಮರಿಸುತ್ತದೆ.

34. **ಆಯ್ಕೆ :** ಈ ವಾಕ್ಯವನ್ನು **'ಎಂ. ಮರಿಯಪ್ಪ ಭಟ್ಟ'** ಅವರು ಬರೆದಿರುವ **'ಕನ್ನಡ ಸಂಸ್ಕೃತಿ'** ಪ್ರಬಂಧ ಸಂಕಲನದಿಂದ ಆಯ್ದ **'ನಮ್ಮ ಭಾಷೆ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಮನುಷ್ಯನು ಲಿಪಿಯ ಮೂಲಕ ತನ್ನ ಸುಖ ದುಃಖಗಳನ್ನು ಕಾವ್ಯಗಳ ರೂಪದಲ್ಲಿ ಬರೆದಿಟ್ಟನು. ಇದರಿಂದ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳು ತಿಳಿದುಕೊಳ್ಳು ಸಹಾಯಕವಾಗಿ, ಅವಮನ ಜ್ಞಾನ ಭಂಡಾರ ಭದ್ರವಾಯಿತು. ನಮ್ಮ ಸಂಸ್ಕೃತಿಯು ಉಳಿಯಿತು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಭಾಷೆಯ ಮೂಲಕ ನಮ್ಮ ಪರಂಪರೆಯನ್ನು ತಿಳಿದುಕೊಂಡು, ನಮ್ಮ ನಾಡಿನ ಸಂಸ್ಕೃತಿಯನ್ನು ತಿಳಿದು ಅನುಸರಿಸಲು ಸಹಾಯಕವಾಗಿದೆ ಎಂಬುದು ಸ್ವಾರಸ್ಯಕರವಾಗಿದೆ.

35. **ಆಯ್ಕೆ :** ಪ್ರಸ್ತುತ ಈ ವಾಕ್ಯವನ್ನು **ಡಿ.ಎಸ್.ಜಯಪ್ಪಗೌಡ**ರವರು ಬರೆದ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಪಂಡಿತ್ ಜವಾಹರಲಾಲ್ ನೆಹರುರವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಮಾರಂಭದಲ್ಲಿ ಅವರ ಬಗ್ಗೆ ಹೇಳುತ್ತಾ "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ" ಎಂದು ಹೇಳುವ ಸಂದರ್ಭದಲ್ಲಿ ನೆಹರುರವರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಭಾರತದ ಆಧುನಿಕ ಹರಿಕಾರರಾಗಿ ಮಾತಿಗಿಂತ ಕೃತಿ ಲೇಸು ಎಂಬ ತತ್ವವನ್ನಾಧರಿಸಿ ಹೊಸ ರಾಷ್ಟ್ರ ನಿರ್ಮಾಣಕ್ಕೆ ಕಾರಣ ಕರ್ತರಾದ ವಿಶ್ವೇಶ್ವರಯ್ಯನವರ ಬಗ್ಗೆ ಹೇಳಿದ ಮಾತು ಸ್ವಾರಸ್ಯಕರವಾಗಿದೆ.

36. **ಆಯ್ಕೆ :** ಈ ವಾಕ್ಯವನ್ನು **'ಶಿವಕೋಟ್ಯಾಚಾರ್ಯ'** ಅವರು ರಚಿಸಿರುವ **'ವಡ್ಡಾರಾಧನೆ'** ಎಂಬ ಕೃತಿಯಿಂದ ಆಯ್ದ **'ಅಗ್ನಿಭೂತಿ ಮತ್ತು ವಾಯುಭೂತಿಯರ ಕಥೆ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಸೂರ್ಯಮಿತ್ರನು ಪತ್ರವನ್ನು ಓದಿ ಎಲ್ಲವನ್ನು ಅರ್ಥಮಾಡಿಕೊಂಡು "ಸದರ ಕೊಟ್ಟರೆ ಇವರು ಹಿಂದಿನಂತೆ ಹಾದಿ ತಪ್ಪುವರು" ಎಂದು ಸೂರ್ಯಮಿತ್ರನು ಭಾವಿಸಿ **"ಮಕ್ಕಳಿರಾ, ನನಗೆ ಕಾಶ್ಯಪಿಯೆಂಬ ತಂಗಿಯೂ ಇಲ್ಲ. ನಾನು ನಿಮ್ಮ ಸೋದರಮಾವನಾದ ಸೂರ್ಯಮಿತ್ರನಲ್ಲ"** ಎಂದು ಖಚಿತಪಡಿಸಿ, "ನೀವು ಯಾರಾದರೂ ಆಗಿರಿ. ವಿದ್ಯೆ ಕಲಿಯುವ ಆಶೆಯಿಂದ ಬಂದಿರುವಿರಿ. ನಾನು ನಿಮ್ಮನ್ನು ಓದಿಸುವೆನು" ಎಂದು ಹೇಳಿದ ಸಂದರ್ಭದಲ್ಲಿ ಸೂರ್ಯಮಿತ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಸೂರ್ಯಮಿತ್ರನ ನಾನು ಸೋದರಮಾವ ಎಂಬ ಸತ್ಯವನ್ನು ಮರೆಮಾಚಿ, ಕಟ್ಟುನಿಟ್ಟಿನ ಗುರುವಾಗಿ ಅಗ್ನಿಭೂತಿ ವಾಯುಭೂತಿಯರನ್ನು ಪಂಡಿತರನ್ನಾಗಿ ಮಾಡುವುದು ಸ್ವಾಸರ್ಯಕರವಾಗಿದೆ.

37. **ಆಯ್ಕೆ :** ಈ ವಾಕ್ಯವನ್ನು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಕವಿ ದ. ರಾ. ಬೇಂದ್ರೆ ಅವರು ಕಾಲದಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ಕಾಲದಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

38. **"ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"**

**ಆಯ್ಕೆ :** ಈ ವಾಕ್ಯವನ್ನುಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :** ಬ್ರಿಟ್ರಿಷ್ ಸೈನಿಕರು ಹಲಗಲಿಯನ್ನು ಲೂಟಿ ಮಾಡಿ, ಬೆಂಕಿ ಹಚ್ಚಿ ನಾಶಗೊಳಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** "ಹಲಗಲಿಯ ಬೇಡರ ಮೇಲಿನ ಬ್ರಿಟಿಷರ ದೌರ್ಜನ್ಯವು ವರ್ಣಿಸಲು ಅಸಾಧ್ಯವಾದುದು" ಎಂದು ಲಾವಣಿಕಾರನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾನೆ.

39. ಆಯ್ಕೆ : ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶ ದೇಶಗಳಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದಾಗ ಪರಶುರಾಮನು "ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. **"ಈಗಳೊಂದಡಕೆಯುಮಿಲ್ಲ ಕೈಯೊಳ್"** ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ? ಎಂದು ಮನದಲ್ಲಿ ಯೋಚಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಪರುಶುರಾಮನ ದಾನಗುಣದಿಂದಾಗಿ ಆತನ ಬಳಿ ಯಾವುದೆ ಸಂಪತ್ತು ಉಳಿದಿರಲಿಲ್ಲ ಎಂಬುದನ್ನು ಈ 'ಕೈಯೊಳೊಂದಡಕೆಯುಂ ಇಲ್ಲ' ಎಂಬ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಅರ್ಥೈಸಿಕೊಳ್ಳಬಹುದಾಗಿದೆ.

| | |
|---|---|
| **40. ಕಲುಷಿತವಾದೀ ನದೀ ಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರವೀ ಕಾಡು ಮೇಡುಗಳ<br>ವಸಂತವಾಗುತ ಮುಟ್ಟೋಣ** | **ಮತಗಳೆಲ್ಲವೂ ಪಥಗಳು ಎನ್ನುವ ಹೊಸ<br>ಎಚ್ಚರದೊಳು ಬದುಕೋಣ<br>ಭಯ ಸಂಶಯದೊಳು ಕಂದಿದ ಕಣ್ಣೊಳು<br>ನಾಳಿನ ಕನಸನು ಬಿತ್ತೋಣ.** |

41. **ಸಾರಾಂಶ :** ಆಗ ಕರ್ಣನು "ಹೇ ಮರುಳು ಮಾಧವ(ಕೃಷ್ಣ) ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ, ಕುಂತಿಯ ಪುತ್ರರು, ದುರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ, ಕಾಪಾಡಿದ(ಸಾಕಿದ)ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ಕೌರವೇಂದ್ರನನ್ನು ಕೊಂದೆ ನೀನು" ಎಂದು ಹೇಳಿದನು.

ಕರ್ಣ ಕೃಣನ ಮಾತಿಗೆ ಮರುಳಾಗದೆ, ತನ್ನ ಸ್ವಾಮಿನಿಷ್ಠೆಯನ್ನು ತೋರುತ್ತಾನೆ. ಕೃಷ್ಣನನ್ನೇ ಮರುಳ ಎಂದು ಕರೆಯುತ್ತಾನೆ. ಏ ಮರುಳು ಮಾಧವ ಈ ರಾಜ್ಯದ ಸಿರಿ ಸಂಪತ್ತಿನ ಆಸೆಗೆ ಸೋಲುವವನು ನಾನಲ್ಲ. ಪಾಂಡವರಿಂದ ಮತ್ತು ಕೌರವರಿಂದ ಸೇವೆ ಮಾಡಿಸಿಕೊಳ್ಳುವುದು ನನಗೆ ಇಷ್ಟವಿಲ್ಲ ನನ್ನನ್ನು ಕಷ್ಟಕಾಲದಲ್ಲಿ ಸಾಕಿದ ಒಡೆಯನಿಗೆ ಶತ್ರುಗಳ ಶಿರವನ್ನು ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ಕೌರವೇಂದ್ರನಾದ ದುರ್ಯೋಧನನ್ನು ಕೊಂದು ಬಿಟ್ಟೆ ಎಂದು ತನ್ನ ಸ್ವಾಮಿನಿಷ್ಠೆಯನ್ನು

ಮೆರೆಯುತ್ತಾನೆ. ಸೂರ್ಯನ ಅನುಗ್ರಹದಿಂದ ಜನಿಸಿದ ಮಗುವನ್ನು ಕುಂತಿ ನೀರಿನಲ್ಲಿ ತೇಲಿಬಿಟ್ಟಾಗ ಅದು ಅಂಬಿಗನ ಮನೆಯಲ್ಲಿ ಬೆಳೆಯುತ್ತದೆ. ಸೂತ್ರಪುತ್ರನೆಂದು ಆತನಿಗೆ ಸಮಾಜದಲ್ಲಿ ಸೂಕ್ತಸ್ಥಾನ ದೊರೆಯುವುದಿಲ್ಲ. ಅಂತಹ ಸಂದರ್ಭದಲ್ಲಿ ದುರ್ಯೋಧನ ಅಂಗದೇಶದ ರಾಜನನ್ನಾಗಿ ಮಾಡಿ ಕರ್ಣನನ್ನು ಕಾಪಾಡುತ್ತಾನೆ.

42. ಶಬರಿ ಶ್ರೀರಾಮನ ದರ್ಶನದ ಚಿಂತೆಯಲ್ಲಿ ಇದ್ದಾಗ ಒಂದು ದಿನ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. ರಾಮನನ್ನು ಕಂಡು ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ತನ್ನ ಮನದ ಬಯಕೆಯಂತೆ ಹೂ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು. ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದಳು. ಸುಖಿ ನಾನು ಆಸೆ ತೀರಿ ಹಾಯಾಗಿರುವೆನು. ನನ್ನ ಹಂಬಲ ಅಳಿದು ಸಂತೋಷ ತುಂಬಿದೆ. ನನ್ನ ಮನ ಮುಕ್ತಿ ಬಯಸಿ ನಿಂತಿದೆ. ಎಂದು ಹಾಡುತ್ತಾ ನರ್ತಿಸುತ್ತಾಳೆ. ಇದನ್ನು ಕಂಡ ರಾಮ ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರ ಋಣಿಗಳಾಗಿದ್ದೇವೆ ಎಂದಾಗ ಶಬರಿ. ರಾಮ ನನಗೆ ಬಹಳ ಸಂತೋಷವಾಯಿತು. ಕೊನೆಗೂ ನನ್ನಾಸೆಯ ದಾರಿ ಹಿಡಿದು ಬಂದಿರಲ್ಲವೇ, ದಣಿದು ಬಂದ ನಿಮಗೆ ಈಗ ಸಮಾಧಾನವಾಯಿತಾ? ಹಸಿವು – ಬಾಯಾರಿಕೆ ನೀಗಿತಾ? ಅಯ್ಯೋ ಇವಳು ಬಡವಳು ಒಬ್ಬಳೇ ಏನು ಮಾಡುತ್ತಾಳೆ ಎಂದು ನನ್ನ ಮೇಲೆ ದಯೆತೋರಿದಿರಾ? ಎಂದಾಗತಾಯಿ ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರೆತಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೆ ತಿಳಿದೆವು. ಎಂದು ರಾಮ ಶಬರಿಗೆ ಹೇಳಿದಾಗ ಶಬರಿ **"ನಿನ್ನ ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"** ನಾನು ಇಂದು ಧನ್ಯಳಾಗಿದ್ದೇನೆ. ಮತಂಗ ತಪಸ್ವಿಗಳ ನೀಡಿದ ವರ ಇಂದು ನನಗೆ ಫಲ ನೀಡಿದೆ. ನಿಮ್ಮನ್ನು ಕಂಡ ಪುಣ್ಯವಂತೆ ನಾನು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ.

**ಅಥವಾ**

ಧನು ಮಹರ್ಷಿಗಳ ಸೂಚನೆಯಂತೆ ಶ್ರೀರಾಮ ಲಕ್ಷ್ಮಣರು ಆಶ್ರಮದ ಮುಂದೆ ಬಂದು ನಿಂತಿರುವುದ ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲಿಸಿದಳು. ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವಕಾಡಿನ ಹೂವುಗಳಿಂದ ಮಾಡಿದ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಮಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣುಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಜಕುಮಾರರಾದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು. ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದವಳಾದಳು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರು ಹಾಡಿನಲ್ಲಿ ವರ್ಣಿಸುತ್ತಾರೆ.

43. ಭುಜಭಲವುಳ್ಳ ದೊರೆಗಳೆಲ್ಲರೂ ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯ ವಾಸವಿದ್ದ ಉದ್ಯಾನವನದ ಹಸುರನ್ನು ಬಯಸಿ ಆಶ್ರಮವನ್ನು ಹೊಕ್ಕಿತು. ಆಗ ಆ ತೋಟದ ರಕ್ಷಣೆಗೆ ಇದ್ದ ವೀರಲವನು ಕುದುರೆಯನ್ನು ಕಂಡನು. ಅದನ್ನು ನೋಡಿದ ಲವನು ಯಾವ ಕಡೆಯ ಕುದುರೆ ಇದು, ಹೂತೋಟವನ್ನು ಹೊಕ್ಕು ನುಗ್ಗು ನುರಿಯಾಗುವಂತೆ ತುಳಿಯುತ್ತಿದಿಯಲ್ಲ. ವಾಲ್ಮೀಕಿ ಋಷಿಗಳು ತೋಟವನ್ನು ಒಣಗದಂತೆ ಹಾರೈಕೆ ಮಾಡುವುದು ಎಂದು ನನಗೆ ನೇಮಿಸಿ ವರುಣ ದೇವನು ಕರೆಯಲಾಗಿ ಹೋದನು. ಮತ್ತೆ ವರುಣನ ಲೋಕದಿಂದ ಬಂದು ಇದನ್ನು ನೋಡಿ ಕೋಪಗೊಳ್ಳುತ್ತಾರೆಂದು, ಕುದುರೆಯ ಕಡೆಗೆ ಬಂದು ನೋಡಲು ಅದರ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿಕೊಂಡು **"ಭೂಮಂಡಲದಲ್ಲಿ ಕೌಸಲ್ಯ ಪಡೆದಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನ ದಕುದುರೆಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ"** ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದು ಉತ್ತರೀಯ (ಮೇಲುಹೊದಿಕೆ)ವನ್ನು ಉರಿ ಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದನು.

**ಅಥವಾ**

**ಲವನ ನಡವಳಿಕೆ ಮೆಚ್ಚುಗೆಯಾಯಿತೇ? ಏಕೆ?**

ಲವನ ನಡೆವಳಿಕೆ ಮೆಚ್ಚುಗೆಯಾಯಿತು. ಏಕೆಂದರೆ ಲವನಲ್ಲಿ ಜವಬ್ದಾರಿಯುತ ನಡೆವಳಿಕೆ, ಕ್ಷಾತ್ರಿಯಗುಣ, ಮಾತೃಪ್ರೇಮ, ವೀರತನ, ನಿರ್ಭಯ ಮತ್ತು ಮುಗ್ದತೆ ಮುಂತಾದ ಗುಣಗಳೆಲ್ಲವು ಇವೆ. ಋಷಿ ಮುನಿಗಳು ಹೇಳಿದ ತೋಟದ ಕಾವಲನ್ನು ಕಾಯುವುದು, ತೋಟವು

ಒಣಗಿದರೆ ಮುನಿಗಳ ಬೈಯುತ್ತಾರೆ ಎಂಬುದು ಆತನ ಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ. **"ಹುಟ್ಟುಗುಣ ಗಟ್ಟ ಹತಿದ್ತರೂ ಹೋಗದು"** ಎಂಬುದು ನಾಣ್ಣುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿ ಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಕಾಣಬಹುದು. ರಾಮನೊಬ್ಬನೇ ವೀರನು ಎಂಬ ವಾಕ್ಯವನ್ನು ಓದಿದ ಲವನಲ್ಲಿ ವೀರಗುಣ ಹೊರ ಹೊಮ್ಮುತ್ತದೆ. ಇವನ ಗರ್ವವನ್ನು ಬಿಡಿಸಬೇಕು ಇಲ್ಲದಿದ್ದರೆ ನನ್ನ ತಾಯಿಯನ್ನು ಬಂಜೆ ಎನ್ನದಿರುವರೇ ಎಂದು ತನ್ನ ತಾಯಿ ಇಂತಹ ವೀರನಿಗೆ ಜನ್ಮ ನೀಡಿದ್ದಾಳೆ ಎಂದು ವೀರಜನನಿ ಎಂಬ ಮಾತೃ ಪ್ರೇಮವನ್ನು ತೋರುತ್ತಾನೆ. ಶ್ರೀರಾಮನು ಕೈಗೊಂಡ ಅಶ್ವಮೇಧದ ಕುದುರೆಯನ್ನು ಲವನು ಬಾಲ ಸಹಜ ಕುತೂಹಲದಿಂದ ಬಾಳೆಯ ಗಿಡಕ್ಕೆ ಕಟ್ಟುವುದು ಮುಗ್ಧತೆಯನ್ನು ತೋರಿಸುತ್ತದೆ. ಜೊತೆಗೆ ರಾಮನಿಗಿಂತ ಮಿಗಿಲಾದ ಶಕ್ತಿ ತೋಳ್ಬಲ ತನ್ನಲ್ಲಿಯೂ ಇದೆ ಎಂಬ ಶೌರ್ಯಗುಣ ಆತನಲ್ಲಿ ಹುದುಗಿದೆ. ಮುನಿಸುತರು ಹೆದರಿ ಕುದುರೆಯನ್ನು ಬಿಟ್ಟು ಬಿಡು ಎಂದಾಗ ನೀವು ಬ್ರಾಹ್ಮಣರ ಮಕ್ಕಳು ನಿಮಗೆ ಅಂಜಿಕೆ, ಆದರೆ ಇವನು ಜಾನಕಿಯ ಮಗ ಹೆದರುವನೇ ಎಂದು ಹೇಳುವಲ್ಲಿ ಅವನ ನಿರ್ಭಯವನ್ನು ತೋರಿಸುತ್ತದೆ. ಹೀಗೆ ಲವನಲ್ಲಿ ಜವಬ್ದಾರಿ, ಕ್ಷಾತ್ರಿಯಗುಣ ಮಾತೃಪ್ರೇಮ, ವೀರತನ, ನಿರ್ಭಯ ಮತ್ತು ಮುಗ್ಧತೆಗಳೆಲ್ಲವು ಇರುವುದರಿಂದ ಆತನ ನಡೆವಳಿಕೆ ನನಗೆ ಮೆಚ್ಚುಗೆಯಾಯಿತು.

44. ಎ) ತಿಪ್ಪೆನಹಳ್ಳಿ ಪಾಠಶಾಲೆ ನೋಟೀಸ್ ಬೋರ್ಡಿನ ಮೇಲೆ ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು. ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು. ಎಂದು ಬರೆಯಲಾಗಿತ್ತು.

ಬಿ) ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ರಂಗಣ್ಣ ತಿಪ್ಪೇನಹಳ್ಳಿ ಶಾಲೆಗೆ ಭೇಟಿ ನೀಡಿದನು.

45.

ರಕ್ಷತ<br>10ನೇ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಕುವೆಂಪುನಗರ<br>ಬೆಂಗಳೂರು<br>ದಿನಾಂಕ: 01–02–2023

ನನ್ನ ಪ್ರೀತಿಯ ಗೆಳತಿಗೆ,

ನಾನು ಮಾಡುವ ವಂದನೆಗಳು. ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಂದೆವರಿಗೆ ಪ್ರಣಾಮಗಳು. ದಿನಾಂಕ 15–02–2023 ರಂದು ನಮ್ಮ ಶಾಲೆಯಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಲು ಮಾಡಲು ಸಿದ್ಧತೆ ಮಾಡುತ್ತಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮವಿರುತ್ತದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸಿದ್ದೇನೆ. ದೇಶಭಕ್ತಿಗೀತೆಗೆ ನೃತ್ಯ ಮಾಡುತ್ತಿದ್ದೇನೆ. ಆದ್ದರಿಂದ ತಂಗಿ, ತಂದೆಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಧನ್ಯವಾದಗಳೊಂದಿಗೆ**

**ಇಂತಿ ನಿಮ್ಮ ಪ್ರೀತಿಯ ಗೆಳತಿ**<br>ರಕ್ಷಿತ

**ಹೊರ ವಿಳಾಸ**

ರಕ್ಷತ<br>ಸರ್ಕಾರಿ ಪ್ರೌಢಶಾಲೆ,<br>ಮೈಸೂರು<br>ಅಂಚೆಪೆಟ್ಟಿಗೆ ಸಂಖ್ಯೆ–583136.

**ಅಥವಾ**

ದಿ:

**ಇಂದ**
ವಸಂತ್‌ಕುಮಾರ್
ವಿಜಯನಗರ
ಹಾಸನ.

**ಇವರಿಗೆ**
ಜಿಲ್ಲಾಧಿಕಾರಿಗಳು
ಹಾಸನ.

ಮಾನ್ಯರೆ,

**ವಿಷಯ : ಪರಿಹಾರ ಕಾರ್ಯ ಕೈಗೊಳ್ಳುವಂತೆ ಕೋರಿ ಬರೆದ ಮನವಿ ಪತ್ರ :**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಸನದ ವಿಜಯನಗರದ ನಿವಾಸಿ ವಸಂತ್‌ಕುಮಾರ್ ಆದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ವಿಜಯನಗರ ಬಡಾವಣೆಯಲ್ಲಿ ಉಂಟಾದ ಪ್ರವಾಹದಿಂದ ಮನೆಗಳಿಗೆ ನೀರು ನುಗ್ಗಿ ಜನರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ದಯವಿಟ್ಟು ನಮ್ಮ ಬಡಾವಣೆಯ ಜನರಿಗೆ ಹೊಸ ಮನೆಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ವಂದನೆಗಳೊಂದಿಗೆ...**

**ಇಂತಿ ತಮ್ಮ ವಿಶ್ವಾಸಿ**
ವಸಂತ್‌ಕುಮಾರ್

46. **ಪೀಠಿಕೆ** : ಮಹಿಳೆಯರಲ್ಲಿ ಮಾನಸಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲತೆಯನ್ನು ಹೆಚ್ಚಿಸಿ ಅವರು ಆತ್ಮ ವಿಶ್ವಾಸವನ್ನು ಹೊಂದುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು. ಇಂದು ಪುರುಷರಷ್ಟೆ ಮಹಿಳೆಯರು ಸಮಾನರಾಗಿದ್ದು ಪ್ರತಿಯೊಂದು ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಾಧನೆಯನ್ನು ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಸಮಾನತೆ ಎನ್ನುವುದು ಮಹಿಳೆಯರಿಗೂ ಅನ್ವಯಿಸುತ್ತದೆ.

**ವಿಷಯ ನಿರೂಪಣೆ** : ಯಾವುದೇ ರೀತಿಯ ಶೋಷಣೆ, ಅಸಮಾನತೆಗೆ ಒಳಗಾಗದೆ ಶಿಕ್ಷಣ, ಉದ್ಯೋಗ, ವಿವಾಹ ಜೀವನ, ಸಾಮಾಜಿಕ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಂಡು ಆತ್ಮ ವಿಶ್ವಾಸದಿಂದ ಬಾಳುವ ಶಕ್ತಿಯೇ ಮಹಿಳಾ ಸಬಲತೆ. ನಾಲ್ಕು ಗೋಡೆಗಳ ಮಧ್ಯೆ ಬಿಟ್ಟು ಎಲ್ಲರ ಜೊತೆಯಾಗಿ ಬೆರೆತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಇಂದಿನ ಮಹಿಳೆಯರು ಹೊಂದಿರುವುದು ಮಹಿಳಾ ಸಬಲೀಕರಣವನ್ನು ಎತ್ತಿ ತೋರಿಸುತ್ತದೆ. ಮೊದಲು ಮಹಿಳೆಯರು ಶೈಕ್ಷಣಿಕವಾಗಿ ಸಬಲರಾಗಬೇಕು. ಈ ಉದ್ದೇಶದಿಂದ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಮಹಿಳೆಯರ ಶಿಕ್ಷಣಕ್ಕಾಗಿ ಆದ್ಯತೆ ನೀಡಲಾಗಿದೆ. ಮಹಿಳೆಯರ ವಿಕಾಸವಾದಲ್ಲಿ ಮನೆಯಲ್ಲಿನ ಮಕ್ಕಳು ಸಂಸ್ಕಾರವಂತರಾಗಲು ಸಾಧ್ಯವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ಥಾಪಿತ ಸರ್ಕಾರಗಳು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ನೋಡಬಹುದು. ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಇವೆ. ಮಹಿಳೆಯರಿಗಾಗಿ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣವನ್ನು ಮತ್ತು ಮಾತೃತ್ವದ ಸವಲತ್ತುಗಳನ್ನು ನೀಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ. ಸಾಮಾಜಿಕವಾಗಿ ಮುಂದುವರಿಯಲು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಸಮಾಜದ ಅರಿವು ಅವರಿಗಾಗಿ ಎಲ್ಲ ಕಾರ್ಯಗಳಲ್ಲಿ ತೊಡಗುವಂತಾಗಬೇಕು. ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಕೆಲವೊಂದು ಸಾಂಪ್ರದಾಯಿಕ ಕಾರಣಗಳಿಂದ ಮಹಿಳೆಯರು ಹಿಂದುಳಿದಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಅನವಶ್ಯಕವೆನಿಸಿದ ಸಾಂಪ್ರದಾಯಕ ಚೌಕಟ್ಟನ್ನು ಮೀರಿ ಇಂದಿನ ಮಹಿಳೆಯರು ಸಬಲರಾಗಬೇಕಾಗುತ್ತದೆ. ಮಹಿಳೆಯರ ಪರವಾಗಿ ಕಾಯಿದೆ–ಕಾನೂನುಗಳು ರೂಪುಗೊಂಡಿವೆ. ಮಹಿಳೆಯರ ಸ್ವಾವಲಂಬನೆ ಮತ್ತು ಕಲ್ಯಾಣಕ್ಕಾಗಿ ಇಲಾಖೆಯೇ ಇದೆ. ಮಹಿಳೆಯರ ರಕ್ಷಣೆಗಾಗಿ **'ಬೇಟಿ ಬಚಾವೋ, ಬೇಟಿಪಡಾವೋ'ಯಂತಹ** ಯೋಜನೆಗಳನ್ನು ಜಾರಿ ತಂದಿರುವುದುನ್ನು ನೋಡಬಹುದು. ಮಹಿಳೆಯರು ಕೂಡ ಸ್ವಉದ್ಯೋಗ ಮಾಡಲು ಅವಕಾಶ ನೀಡಿ ಸ್ವಾವಲಂಬಿಯಾಗಿ ಬದುಕಲು ಅವಕಾಶ ನೀಡಬೇಕು. ಮಹಿಳೆಯ ಸಬಲೀಕರಣಕ್ಕಾಗಿ ರಾಜಕೀಯವಾಗಿ, ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ ಮಹಿಳಾ ಮೀಸಲಾತಿಯನ್ನು ಕೂಡ ನೀಡಲಾಗಿದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೆ ಆಳಬಲ್ಲದು. ಆದ್ದರಿಂದ ಮಹಿಳೆಯರ ಸಬಲೀಕರಣವಾದರೆ ಜಗತ್ತು ಉದ್ಧಾರವಾದೀತು.

**ಉಪಸಂಹಾರ :** ಮಹಿಳೆಯರ ಸಶಕ್ತರಾದರೆ ದೇಶವೂ ಸಶಕ್ತವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಸಬಲರಾಗಲೂ ಅವಕಾಶ ನೀಡಬೇಕು. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಚೆಯಂತೆ ಸ್ವಾವಲಂಬಿಯಾಗಿ ಬಾಳುವ ಸ್ಥಿತಿಯನ್ನು ಅವರಿಗೆ ನೀಡಿದಾಗ ಮಹಿಳಾ ಸಬಲೀಕರಣ ಸಾಧ್ಯವೆಂದು ಹೇಳಬಹುದು.

**ಅಥವಾ**

**ಪೀಠಿಕೆ : 'ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ'** ಎನ್ನುವ ಹಾಗೆ ಶಾಲಾ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳಂತಹ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿವೆ. ಇದರಿಂದ ಶಿಕ್ಷಣ ಪಡೆಯುವ ಮಕ್ಕಳ ಆಸಕ್ತಿಗೆ ಪ್ರೇರಣೆಯಾಗುತ್ತವೆ.

**ವಿಷಯ ನಿರೂಪಣೆ :** ಅಕ್ಷರ ದಾಸೋಹ ಎಂಬುದು ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವ ಯೋಜನೆಯಾಗಿದೆ. ಅದೇ ರೀತಿ ಕ್ಷೀರಭಾಗ್ಯ ಎಂಬುದು ಹಾಲು ನೀಡುವ ಯೋಜನೆಯಾಗಿದೆ. ಶಿಶುವಿಹಾರದಿಂದ ಹತ್ತನೆಯ ತರಗತಿವರೆಗೆ ಓದುತ್ತಿರುವ ಸರ್ಕಾರಿ/ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಈ ಯೋಜನೆಗಳು ಅತ್ಯಂತ ಉಪಯುಕ್ತವಾಗಿವೆ. ಗ್ರಾಮೀಣ ಭಾಗದಿಂದ ಬರುವಂತಹ ವಿದ್ಯಾರ್ಥಿಗಳು ಹೆಚ್ಚಿನದಾಗಿ ಬಡತನದಿಂದ ಬಂದವರಾಗಿರುತ್ತಾರೆ. ಅಂತಹ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವುದರಿಂದ ಅವರ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುತ್ತದೆ. ದೂರದ ಹಳ್ಳಿಗಳಿಂದ ಶಾಲೆಗೆ ಬರುವ ಯಾವುದೇ ಮಗು ಉಪವಾಸವಿರಬಾರದು, ಅಪೌಷ್ಟಿಕತೆಯಿಂದ ಬಳಲಬಾರದು ಎಂಬುದು ಸರ್ಕಾರಗಳ ಅಭಿಲಾಷೆಯಾಗಿದೆ. ಈ ನಿಟ್ಟಿನಲ್ಲಿ ಇಂತಹ ಯೋಜನೆಗಳು ಸಹಕಾರಿಯಾಗಬಲ್ಲವು. ಶಾಲೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಚಟುವಟಿಕೆಯಿಂದ ಇರಲು ಮತ್ತು ಕಲಿಕೆಯಲ್ಲಿ ಆಸಕ್ತಿ ಹೊಂದಲು, ಪ್ರತಿನಿತ್ಯ ಶಾಲೆಗೆ ಹಾಜರಾಗುವಂತೆ ಮಾಡಲು ಉಪಯುಕ್ತ ಯೋಜನೆಗಳಾಗಿವೆ. ಮಕ್ಕಳು ಹಾಲನ್ನು ಕುಡಿಯುವದರಿಂದ ಹಲ್ಲುಗಳು, ಮೂಳೆಗಳು ಗಟ್ಟಿಯಾಗಿ ಸದೃಢದೇಹ ಹೊಂದುತ್ತಾರೆ. ಇದರ ಜೊತೆಗೆ ಮಾನಸಿಕವಾಗಿ, ಭೌದ್ಧಿಕವಾಗಿ ಬೆಳವಣಿಗೆ ಹೊಂದಲು ಸಹಕಾರಿಯಾಗುತ್ತದೆ. ಈ ಯೋಜನೆಗಳು ಬಂದ ನಂತರ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪ್ರಮಾಣ ಹೆಚ್ಚಾಗಿ ಶಿಕ್ಷಣದ ಗುಣಮಟ್ಟ ಸುಧಾರಣೆ ಕಂಡುಬರುತ್ತಿದೆ.

**ಉಪಸಂಹಾರ** : ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು, ಇಂತಹ ಮಕ್ಕಳು ದೇಶದ ಸಂಪತ್ತು ಆಗಬೇಕಾದರೆ ಅವರಲ್ಲಿ ಶಿಕ್ಷಣ ವೃದ್ಧಿಯಾಗಬೇಕು. ಶಿಕ್ಷಣದಲ್ಲಿ ಆಸಕ್ತಿಯಾಗಬೇಕಾದರೆ ಮಾನಸಿಕವಾಗಿ ಸದೃಢವಾಗಬೇಕು, ಮಾನಸಿಕವಾಗಿ ಸದೃಢವಾಗಬೇಕಾದರೆ ಪೌಷ್ಟಿಕತೆ ಅವಶ್ಯಕ ಅಂತಹ ಪೌಷ್ಟಿಕತೆ ದೊರೆಯಬೇಕಾದರೆ ಇಂತಹ ಯೋಜನೆಗಳು ಸಹಕಾರಿಯಾಗಿವೆ ಎಂದು ಹೇಳಬಹುದಾಗಿದೆ.

******************

# ಮಾದರಿ ಉತ್ತರಗಳು – 4

1. ಜಶ್ತ್ವಸಂಧಿ
2. ಕೃದಂತ ಭಾವನಾಮ
3. ತತ್ಪುರುಷ ಸಮಾಸ
4. ಮಾಡಲಿ
5. ಚತುರ್ಥಿ
6. ಬಿಜ್ಜೋದರ

7. 9
8. ದ್ವಿರುಕ್ತಿ
9. ಅಂಕಿತನಾಮ
10. ಸಕ್ಕರೆ

11. ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.
12. ನಾಲ್ವಡಿಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವೋತೋಮುಖ ಅಬಿವೃದ್ಧಿಗೆ ಕಂಕಣಬದ್ಧರಾದರು.
13. ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.
14. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಧನು ಮಹರ್ಷಿ.
15. ಸೂರ್ಯಚಂದ್ರರೇ ಹಕ್ಕಿಯ ಕಣುಗ್ಣಳು.
16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.
17. ರಾಜಮನೆತನದಲ್ಲಿ ಹುಟ್ಟಿದವರಿಗೆ ಉಪದೇಶ ನಾಟುವುದಿಲ್ಲ.

18. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು; ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದು ಕೊಂಡು ತಮ್ಮ ಹಳ್ಳಿಗೆ ಹಿಂದಿರುಗಿ ಬರುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳು ಕಣಿ ಹಾಕಿಕೊಂಡು ನಿಂತವು. ಅತ್ತ ಎತ್ತುಗಳ ಘಂಟೆಯ ಶಬ್ದ ಮತ್ತು ರೈತರ ಮಾತು ಕೇಳಿ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಸ್ವಲ್ಪ ಹೊತ್ತುಗಾಡಿಯ ಬಳಿಯಲ್ಲೇ ನಿಂತು ನೋಡಿದರು. ಮತ್ತೆ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಕೊಂಡು ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನುಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.
19. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

20. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಇವರನ್ನು ಬೀಳ್ಕೊಡುವಾಗ **"ನೀವು ನನ್ನ ತಂಗಿಯ ಮಕ್ಕಳೇ. ನೀವು ನನ್ನ ಸೋದರಳಿಯಂದಿರು. ನಿಮಗೆ ನಾನು ಸಲಿಗೆ ಕೊಡಲಿಲ್ಲ. ಏಕೆಂದರೆ ನೀವು ಹಿಂದಿನಂತೆ ಹಾದಿ ತಪ್ಪಬಾರದು ಎಂದು ಯೋಚಿಸಿದೆನು. ನಿಮ್ಮನ್ನು ಯೋಗ್ಯರನ್ನಾಗಿ ಮಾಡಲು ಇಂಥ ಕಟ್ಟುನಿಟ್ಟು ಅನಿವಾರ್ಯವಾಯಿತು. ಮುಳಿಯಬೇಡಿ, ನನ್ನನ್ನು ಕ್ಷಮಿಸಿ ಬಿಡಿ"** ಎಂದು ಹೇಳಿದನು ಏಕೆಂದರೆ ಈಗ ಅಗ್ನಿಭೂತಿ ವಾಯುಭೂತಿಯರು ಅನೇಕ ವಿದ್ಯೆಗಳನ್ನು ಕಲಿತು ವಿದ್ವಾಂಸರಾಗಿದ್ದರು.

21. **"**ನಾವು ಭಿಕ್ಷೆ ಎತ್ತಿಕೊಂಡು ಬಂದ ಕೂಳಿಗೆ ತುಸು ಎಣ್ಣೆಯನ್ನಾಗಲಿ ತುಸು ಮಜ್ಜಿಗೆಯನ್ನಾಗಲಿ ನಮ್ಮ ಮಾವ ಒಂದು ದಿನವೂ ಕೊಡಿಸಲಿಲ್ಲ. ಕೆರೆಗೆ ನಾವು ಮೀಯಲು ಹೋದಾಗಲೂ ಇವನು ಎಣ್ಣೆಯ ವಾಸನೆಯನ್ನೂ ನೋಡಿಸಲಿಲ್ಲ. ಆಗಾಗ ನಂಟರಿಷ್ಟರನ್ನೂ ಕರೆಸಿ ನಮ್ಮ ಕಣ್ಣೆದಿರೇ ದಿವ್ಯಾಹಾರವನ್ನು ಇವನು ಉಣ್ಣುತ್ತಿದ್ದನು. ಆಳುಗಳಿಗೂ ಔತಣದೂಟವಾಗುತಿದ್ದಿತು. ಯಾವ ಹಬ್ಬದಲ್ಲೂ ನಮಗೆ ಇವನು ಊಟವಿಡಿಸಲಿಲ್ಲ. ಇವನು ಪಂಚಮಹಾಪಾತಕನೇ ಸರಿ. ಏಳೆಂಟು ವರ್ಷ ನಮ್ಮನ್ನು ಶತ್ರುಗಳಂತೆ ನಡೆಸಿಕೊಂಡನಲ್ಲ**"** ಎಂದು ಕಿರಿಯವ ವಾಯುಭೂತಿ ಮಾವ ಮಾಡಿದ್ದೆಲ್ಲ ಅನ್ಯಾಯವೆಂದು ಮನಸ್ಸಿನಲ್ಲಿ ಕ್ರೋಧ ತುಂಬಿಕೊಂಡನು.

22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ "ಅಯ್ಯೋ ಕುರುಪತಿಗೆ ಕೇಡಾಯಿತಲ್ಲಾ, ಕೃಷ್ಣನ ವೈರತ್ವದ ಬೆಂಕಿ (ಸಿಟ್ಟು) ಹೊರಗೆ ತೋರದೆ, ಸುಡದೆ (ಕೌರವನ ವಂಶವನ್ನು ನಾಶಮಾಡದೆ) ಸುಮ್ಮನೆ ಬಿಡುವುದೇ, ತನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನು ಮುಂದೇನು ಮಾತನಾಡುವುದು" ಎಂಬ ಭಾವನೆಗಳು ಮೂಡಿದವು.

23. ಪರುಶುರಾಮನು ಒಡವೆಗಳನ್ನೆಲ್ಲ ಬೇಡಿದವರಿಗೆ ಕೊಟ್ಟಿದ್ದನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟಿದ್ದನು. ಅವನಲ್ಲಿ ಒಂದಡಕೆಯೂ ಇರಲಿಲ್ಲ. ಕನಕಪಾತ್ರೆ ಇಲ್ಲದಿರುವುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು.
24. ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು. ಅಂದಾಗ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಇದರ ಜೊತೆಯಲ್ಲಿ ಅವರಿಗೆ ಮತ್ತೊಂದು ಆವಶ್ಯಕತೆ ಇದೆ. ಅದು ಸಂಸ್ಕೃತಿ. ಅವರಿಗೆ ಈ ಸಂಸ್ಕೃತಿಯನ್ನು ಕೊಟ್ಟಾಗ ದೇಶದ ಪ್ರಗತಿ ಸ್ಥಿರವಾಗವುದು.
25. ಅಜ್ಞಾನಿಯ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯನ್ನು ತೆಗೆದಂತೆ, ಜ್ಞಾನಿಗಳ ಜೊತೆಗೆ ಸಂಗ ಮಾಡಿದರೆ ಮೊಸರನ್ನು ಕಡಿದು ಬೆಣ್ಣೆ ತೆಗೆದಂತೆ ಎಂದು ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗೆ ಅಕ್ಕಮಹಾದೇವಿಯ ಅಭಿಪ್ರಾಯವಾಗಿದೆ.
26. ಪೈ ಅವರು ಹಾಡೊಂದನ್ನು ಕೇಳಿ ತಾವು ನಾಟಕವೊಂದನ್ನು ಬರೆದ ಬಗ್ಗೆ ತಿಳಿಸುತ್ತಾ : "ಕೇಳಿದ ಹಾಡಿಗೂ ಬರೆದ ನಾಟಕಕ್ಕೂ ಭೇದವಿಷ್ಟೇ, ಅದು ತತ್ಸಮ, ಇದು ತದ್ಭವ. ಮುಗಿಸಿದ ನಾಟಕದ ಕಥೆ ಇಳಿಯಷ್ಟಾದರೂ ನೆನಪಿಗೆ ಬಾರದು. ಹೀಗೆ ಸಾಹಿತ್ಯಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ, ಮುಚ್ಚುಕದಕ್ಕೆ ಡಿಕ್ಕಿ ಹೊಡೆದೆ, ಅಗುಳಿ ಇಲ್ಲದ ಬಾಗಿಲು ಹಾರಿತು, ಒಳಹೊಕ್ಕೆ. ನನ್ನ ಜೀವಮಾನದಲ್ಲಿ ಅದೊಂದು ಅಮಗ. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನವನ್ನು ಎಂದಿಗೂ ಮರೆಯುವಂತಿಲ್ಲ." ಎಂದು ಹೇಳಿದ್ದಾರೆ.
27. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಮೀಹ ತಲೆ ನರೆಯದೆ, ಮೈಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ. ಇವುಗಳು ಗುರೂಪದೇಶದ ಗುಣಗಳಾಗಿವೆ.

28. ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು.
ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು **ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ,** ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸ ಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು.
ಇವರ ಸಾಹಿತ್ಯ ಸೇವೆಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ** ಲಭಿಸಿದೆ.
**29.** ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯರಾಮಚಂದ್ರ **ಬೇಂದ್ರೆಯವರು ಕ್ರಿ.ಶ 1896 ಧಾರವಾಡದಲ್ಲಿ** ಜನಿಸಿದರು.
ಇವರು **'ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.
30.

| 5 | 5 | 5 | 5 |
|---|---|---|---|
| UU–U | –U– | UUUUU | UUUUU |
| ತೆಗೆದುತ್ತ | ರೀಯಮಂ | ಮುರಿದುಕುದು | ರೆಯ ಗಳಕೆ |

| 5 | 5 | 5 | 5 |
|---|---|---|---|
| UUUUU | –UUU | ––U | UUU– |
| ಬಿಗಿದುಕದ | ಳೀದ್ರುಮಕೆ | ಕಟ್ಟಲ್ಕೆ | ಮುನಿಸುತರ್ |

| 5 | 5 | 5 | 5 | 5 | 5 | 1 ಗುರು |
|---|---|---|---|---|---|---|
| UUUUU | –U– | UUUUU | –U– | UUUUU | –UUU | – |
| ಮಿಗೆನಡುಗಿ | ಬೇಡಬೇ | ಡರಸುಗಳ | ವಾಜಿಯಂ | ಬಿಡುಬಡಿವ | ರೆಮ್ಮನೆನ | ಲು |

ಛಂದಸ್ಸು– ವಾರ್ಧಕ ಷಟ್ಪದಿ

31. ಅಲಂಕಾರ : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಉಪಮಾವಾಚಕ : ಅಂತೆ

ಸಮಾನಧರ್ಮ : ಅರಳುವುದು

ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.

32. ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿ ಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **'ತಾಳಿದವನು ಬಾಳಿಯಾನು'** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ತಾಳುವಿಕೆಗಿಂತ ಬೇರೊಂದು ತಪಸ್ಸು ಇಲ್ಲ, ತಾಳ್ಮೆಯೇ ನಿಜವಾದ ತಪಸ್ಸು. **"ತಲ್ಲಣಿಸದಿರು ಕಂಡ್ಯ ತಾಳು ಮನವೆ"** ಎಂದಿದ್ದಾರೆ ಕನಕದಾಸರು. ಶಬರಿ ತಾಳ್ಮೆಯಿಂದ ಸಾಕಷ್ಟು ವರ್ಷಗಳು ಕಾದಿದ್ದಕ್ಕೆ ಶ್ರೀರಾಮನ ದರ್ಶನದಿಂದ ಮುಕ್ತಿ ದೊರೆಯಿತು. ತಾಳ್ಮೆಯಿಂದ ಯೋಚಿಸಿದ ಧರ್ಮಬುದ್ಧಿ ಸತ್ಯವನ್ನು ತೋರಿಸಿದನು. ಆದ್ದರಿಂದ ತಾಳ್ಮೆ ಬಹಳ ಮುಖ್ಯವಾದ ವಸ್ತು ಇದ್ದ ಹಾಗೆ. ಗಿಡ ನೆಟ್ಟ ಕೂಡಲೇ ಮರವಾಗಿ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನು ವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ. ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ. ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ತಾಳ್ಮೆಗೆಟ್ಟು ಕೋಪದ ಕೈಯಲ್ಲಿ ನಮ್ಮ ಮನಸ್ಸನ್ನು ನೀಡಿದರೆ ಅನಾಹುತವಾಗುವುದರಲ್ಲಿ ಸಂದೇಹವಿಲ್ಲ. ತಾಳ್ಮೆಯಿಂದ ಯೋಚಿಸಿದಾಗ ಒಳ್ಳೆಯ ಕಾರ್ಯಗಳು ಫಲಪ್ರದವಾಗುತ್ತವೆ. ಮಾಡಬೇಕಾದ ಕಾರ್ಯಗಳಿಗೆ ಯೋಜನೆಗಳು ಹೊಳೆಯುತ್ತವೆ. ಆದ್ದರಿಂದ ತಾಳ್ಮೆ ಪ್ರತಿಯೊಬ್ಬರಲ್ಲಿ ಇರಬೇಕಾದ ಅತ್ಯಮೂಲ್ಯವಾದ ಸಂಪತ್ತು ಎಂದೇ ಭಾವಿಸಿ ಕೊಂಡು ತಾಳ್ಮೆಯಿಂದ ಬಾಳಬೇಕು ಎಂದು ಹೇಳಬಹುದು.

ಅಥವಾ

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿ ಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **'ಮನಸಿದ್ದರೆ ಮಾರ್ಗ'** ಎಂಬ ಗಾದೆಯು ಪ್ರಸಿದ್ಧವಾಗಿದೆ. ನಮ್ಮ ಒಳಿತು ಕೆಡುಕುಗಳಿಗೆ ಮನಸ್ಸೆ ಕಾರಣ ಆದ್ದರಿಂದ ನಮ್ಮ ಮನಸ್ಸನ್ನು ಒಳಿತಿಗೋಸ್ಕರ ಉಪಯೋಗಿಸಬೇಕು. ಮನಸ್ಸು ಮಾಡಿದರೆ ನಾನು ಇದನ್ನು ಮಾಡಬಲ್ಲೆ ಎಂಬುವವರ ಮಾತನ್ನು ಕೇಳಿದಾಗ ಮನಸ್ಸಿನ ಕೆಲಸ ಎಂತಹದ್ದು ಎಂಬುದು ಅರಿವಾಗುತ್ತದೆ. ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಮನದಲ್ಲಿ ಆಸಕ್ತಿ ಉಂಟಾಗಬೇಕು. ಹಾಗೆ ಆಸಕ್ತಿ ಮೂಡಲು ಮನಸ್ಸು ಮಾಡಬೇಕು. ಹಾಗೆ ಆ ಕೆಲಸದಲ್ಲಿ ಮನಸ್ಸಿಟ್ಟು ಮಾಡಿದಾಗ ಕೆಲಸಗಳು ಯಶಸ್ವಿಯಾಗುತ್ತದೆ. ಡಾ. ರಾಜಕುಮಾರವರ ಹಾಡು **"ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚೆದೆ ಇರ ಬೇಕೆಂದು"** ಎಂದು ಹೇಳಿರುವುದು ಗಮನಿಸಬಹುದು. ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ. ಬದಲಾಗಿ ಮಾಡಿಯೇ ತೀರುತ್ತೇನೆ ಎಂದು ಮನಸ್ಸು ಮಾಡಿದರೆ ಎಂಥ ಕೆಲಸವಾದರೂ ಮಾಡಲು ಸಾಧ್ಯ ಎಂಬುದು ಈ ಗಾದೆ ಸೂಚಿಸುತ್ತದೆ.

33. **ಆಯ್ಕೆ :** ಈ ವಾಕ್ಯವನ್ನು **'ಎಂ. ಮರಿಯಪ್ಪ ಭಟ್ಟ'** ಅವರು ಬರೆದಿರುವ **'ಕನ್ನಡ ಸಂಸ್ಕೃತಿ'** ಪ್ರಬಂಧ ಸಂಕಲನದಿಂದ ಆಯ್ದ **'ನಮ್ಮ ಭಾಷೆ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಭಾಷೆಗಳಲ್ಲಿ ಮೇಲು ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ಯ ಹಾಗೂ ಸತ್ಯದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ. ಒಬ್ಬ ತಾಯಿಯ ಗಾನದ ಶ್ರುತಿಯಂತೆ ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಎಂದು ಲೇಖಕರು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ನಮ್ಮ ಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸುವ ಧಾತಂತದಲ್ಲಿ ಅನ್ಯಭಾಷೆಗಳನ್ನು ತಿರಸ್ಕರಿಸಬಾರದು ಎಂಬುದು ಸ್ವಾರಸ್ಯಕರವಾಗಿದೆ.

34. **ಆಯ್ಕೆ :** ಈ ವಾಕ್ಯವನ್ನು **'ಶ್ರೀಮತಿ ಸಾರಾ ಅಬೂಬಕ್ಕರ್'** ಅವರ **'ಚಪ್ಪಲಿಗಳು'** ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ಮುದುಕಿಯು ತನ್ನ ದೇಶದ ಸೈನಿಕರಿಗೆ ಹೇಳಿದಳು. ರಾಹಿಲನು ಮುದುಕಿಯ ಮನೆಯಲ್ಲಿ ರಕ್ಷಣೆ ಪಡೆಯುತ್ತಿದ್ದ ಸಂದರ್ಭದಲ್ಲಿ ಸೈನಿಕ ಉಡುಪಿನಲ್ಲಿದ್ದ ನಾಲ್ಕೈದು ಜನರು ಮದುಕಿಯ ಮನೆಗೆ ಬಂದು "ಈ ಕಡೆಯಾರಾದರೂ ಗಾಯಗೊಂಡ ಸೈನಿಕರು

ಬಂದಿದ್ದಾರೆಯೇ?" ಎಂದು ಕೇಳುತ್ತಾ ಒಳನುಗ್ಗಿದರು. ಮುದುಕಿ 'ಇಲ್ಲವಲ್ಲಾ' ಎಂದು ನುಡಿದಳು. **"ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ."** ಎಂದು ಒಬ್ಬ ಅಪಣ್ಣೆ ಕೊಟ್ಟನು. ಉಳಿದವರು ಒಳಹೊಕ್ಕು ಶೋಧಿಸುವಾಗ ಮುದುಕಿ ಅಳುತ್ತಾ, ಹೂಂ... ನೋಡಿ; "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!" ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಯುದ್ಧ ತನ್ನ ಮೊಮ್ಮಗನನ್ನು ಬಲಿ ತೆಗೆದುಕೊಂಡಿತು ಎಂಬ ಮುದುಕಿಯ ದುಃಖದ ಭಾವನೆ ಈ ವಾಕ್ಯದಲ್ಲಿ ಮಡುಗಟ್ಟಿದೆ.

35. **ಆಯ್ಕೆ:** ಪ್ರಸ್ತುತ ಈ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡರವರು ಬರೆದ **'ದಿವಾನ್ ಸರ್‌ಎಂ.ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ನಾಲ್ವಡಿ ಕೃಷ್ಣರಾಜ ಒಡೆಯರು ಸಮಾಜದ ಅಭಿವೃದ್ಧಿಗಾಗಿ ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆ, ಗ್ರಾಮ ಪಂಚಾಯಿತಿಗಳ ಕಾಯ್ದೆ, ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ; ವಿಧವಾ ಮರು ವಿವಾಹ ಕಾಯ್ದೆ ಮುಂತಾದ ಕಾನೂನುಗಳನ್ನು ಜಾರಿಗೆ ತಂದು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದ್ದರಿಂದ **'ಸಾಮಾಜಿಕ ಕಾನೂನುಗಳ ಹರಿಕಾರ'** ಎಂದು ಹೆಸರಾದ ಸಂದರ್ಭವಾಗಿದೆ.

**ಸ್ವಾರಸ್ಯ:** ಸ್ವಾಸ್ಥ ಸಮಾಜಕ್ಕಾಗಿ ಮತ್ತು ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ತಂದ ಕಾನೂನುಗಳು ಅವರನ್ನು "ಸಾಮಾಜಿಕ ಕಾನೂನುಗಳ ಹರಿಕಾರ" ರನ್ನಾಗಿಸಿದ್ದು ಹೆಮ್ಮೆಯ ವಿಷಯವಾಗಿದೆ.

36. **ಆಯ್ಕೆ** : ಈ ವಾಕ್ಯವನ್ನು ಕುವೆಂಪುರವರ ಬರೆದಿರುವ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆರಿಸಲಾಗಿರುವ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ನವರಾತ್ರಿಯ ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು, ರಸಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ.

**ಸ್ವಾರಸ್ಯ** : ನವರಾತ್ರಿಯ ಕಪ್ಪು ಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಾಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

37. ಈ ವಾಕ್ಯವನ್ನು ಕವಿ **ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀರಾಮನ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

38. **ಆಯ್ಕೆ** : ಈ ವಾಕ್ಯವನ್ನು 'ಮಹಾಕವಿ ಪಂಪ' ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ(ಕಶ್ಯಪ ಮುನಿ)ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ? ಎಂದು ಮನದಲ್ಲಿ ಯೋಚಿಸಿ **"ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು"** ಎಂದು ಹೇಳಿದಾಗ ದ್ರೋಣನು "ವಿದ್ಯಾಧನಮೆ ಧನಮಪ್ಪುದು" (ನನಗೆ ವಿದ್ಯಾಧನವೇ ಧನವಾಗಿರುವುದರಿಂದ) ಆದುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು" ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ವಿದ್ಯಾಧನವೇ ನಿಜವಾದ ಸಂಪತ್ತು ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

| | |
|---|---|
| **40. ನೆಲಕಿಱಿವೆನೆಂದು ಬಗೆದಿರೆ।**<br>**ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ॥**<br>**ಟಿಸ್ಸಿಲನೆನಗೆ ದಿನಪಸುತನಂ।**<br>**ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟಿಪೆನೇ।** | **ಪುಟ್ಟಿದ ನೂರ್ವರುಮೆನ್ನೊಡ।**<br>**ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥**<br>**ಪುಟ್ಟಿ ಪೊದಟ್ಟುದು ಸತ್ತರ್**<br>**ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱಿವೆಂ ॥** |

40. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ. ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ. ಇಂತಹ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಭಯೋತ್ಪಾದಕತೆ, ಶೋಷಣೆ ಇತ್ಯಾದಿಗಳಿಂದ ಭಯ–ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು, ಮಸುಕಾದ ಕಣ್ಣುಗಳಿಗೆ ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ, ಉತ್ತಮ ಕನಸನ್ನು ಅವರಲ್ಲಿ ಭಿತ್ತಿ, ಧೈರ್ಯ ನೀಡಬೇಕೆಂದು, ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂದು ಸಮಾನತೆಯ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರು ಅರಿವು ಮೂಡಿಸಿದ್ದಾರೆ.

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಲಂಡನ್ ನಗರದ ವ್ಯಾಪಾರ, ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿಓಡಾಡುವ ವ್ಯವಸ್ಥೆ ಮತ್ತು ಭೂಗರ್ಭವನ್ನು ಹತ್ತಿ ಇಳಿಯಲು ಇರುವ ಎಸ್ಕಲೇಟರ್ಸ್ ಕುರಿತು ಗುರುತಿಸಿದ್ದಾರೆ. ನಂತರ ಪೇಟೆಯಲ್ಲಿನ ವೂಲವರ್ಥ ಎಂಬ ಸ್ಟೇಷನರಿ ಅಂಗಡಿ. ಈ ಅಂಗಡಿಯಲ್ಲಿ ಸಿಗುವ ಬೂಟು, ಸಾಬೂನು, ಪುಸ್ತಕ, ಹೂವು, ಯುದ್ಧ ಸಾಮಾಗ್ರಿಗಳು ಹೆಸರಿಸಿದ್ದಾರೆ. ಅನಂತರ ಸೂಟು ಹೊಲಿಯುವ ಸಿಂಪಿಗಳ ಬಗ್ಗೆ ವಿವರಿಸಿದ್ದಾರೆ. ಲಂಡನ್ನಿನ ಹೆಣ್ಣು ಮಕ್ಕಳು ಮಾಣಿ, ಟೈಪಿಸ್ಟ್, ಕಾರಕೂನ ಮುಂತಾದ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ಎಂಬುದನ್ನು ಗುರುತಿಸಿದ್ದಾರೆ. ನಂತರ ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಚೇರಿಂಗ್‌ಕ್ರಾಸ್. ಈ ಓಣಿಯಲ್ಲಿನ ಇಂಡಿಯಾ ಆಫೀಸು ಮತ್ತು ಅದರ ವಿಶೇಷತೆ ಹಾಗೂ ಚೇರಿಂಗ್‌ಕ್ರಾಸ್ ಎಂಬ ದೊಡ್ಡ ಬೀದಿಯು ಆಂಗ್ಲ ಸಾಮ್ರಾಜ್ಯದ ಬೀದಿ ಆಗಿರುವುದರ ವಿಶೇಷತೆಯನ್ನು ಗುರುತಿಸಿದ್ದಾರೆ. ನಂತರ ಟ್ರಾಫಲ್ಗಾರ್ ಸ್ಕ್ವೇಯರ್ ನಲ್ಲಿರುವ ನೆಲ್ಸನ್ ಮೂರ್ತಿ ಮತ್ತು ಆತನ ವಿಶೇಷತೆಯನ್ನು ಹೇಳಿದ್ದಾರೆ. ಹೆಣ್ಣು ಮಕ್ಕಳ ವೈವಿಧ್ಯಮಯ ಟೊಪ್ಪಿಗೆಯ ವಿಶೇಷತೆಯನ್ನು ಕುರಿತು ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪಚ್ಚವಾದರೂ ಕನಿಷ್ಟ ಪಕ್ಷ ಬೇರೆಯಾಗಿರುತ್ತದೆ ಎಂಬುದನ್ನು ಗುರುತಿಸಿದ್ದಾರೆ. **'ವೆಸ್ಟ್ ಮಿನ್‌ಸ್ಟರ್ ಅಬೆ'** ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಕಬ್ಬಿಗರ ಸ್ಫೂರ್ತಿಯತವರು ಮನೆಯಾಗಿರುವುದು. ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಮೊದಲಾದವರ ಸಮಾಧಿಗಳಿವೆ. ನ್ಯೂಟನ್ ಮೊದಲಾದ ವಿಜ್ಞಾನಿಗಳ ಶಿಲಾ ಮೂರ್ತಿಗಳಿರುವುದು. ರಾಜಮಂದಿರದಲ್ಲಿ ಸಿಂಹದೆದೆಯ ರಿಚರ್ಡ್, 2ನೆಯ ಎಡ್ವರ್ಡ್, ರಾಣಿ ಎಲಿಜಬೆತ್, ಮೊದಲಾದವರ ಮೂರ್ತಿಗಳಿವೆ. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿ ಹಾಗೂ ಈ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನ ಸ್ಟೋನ್ ಆಫ್ ಸ್ಕೋನ್ ಮುಂತಾದವುಗಳ ವಿಶೇಷತೆಯನ್ನು ಗುರುತಿಸಿದ್ದಾರೆ.

**ಅಥವಾ**

**ಉತ್ತರ:** **'ವೆಸ್ಟ್** ಮಿನ್‌ಸ್ಟರ್ ಅಬೆ**'** ಎಂಬ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ಇದು ಸತ್ತಿರುವ ಸಂತರ, ಸಾರ್ವಭೌಮರ ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ. ಸತ್ತವರಿಗೋಸ್ಕರ ಸ್ಥಾಪಿಸಿದ ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. ಆದ್ದರಿಂದ ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. 300 ವರ್ಷಗಳ ಹಿಂದೆ ಬ್ಯೂಮಾಂಟ್ ಎಂಬ ಕವಿಯು ಈ ಗೋರಿಯನ್ನು ನೋಡಿ ಮರ್ತ್ಯತ್ವವೇ ಎಷ್ಟು ಗೋರಿ ಗುಂಪುಗಳು ಇಲ್ಲಿವೆ ನೋಡಿ ಅಂಜು ಎಂಬ ಹಾಡನ್ನು ಬರೆದಿದ್ದಾನೆ. ಗೋಲ್ಡ್‌ಸ್ಮಿತ್ ಹಾಗು ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು 'ವೆಸ್ಟ್ ಮಿನ್‌ಸ್ಟರ್ ಅಬೆಯ ಸಂದರ್ಶನ' ಎಂಬ ವಿಷಯದ ಮೇಲೆ ಉತ್ತಮವಾದ ನಿಬಂಧನೆಗಳನ್ನು ಬರೆದಿದ್ದಾರೆ. ಇಂದಿಗೂ ಇದು ಕಬ್ಬಿಗರ ಸ್ಫೂರ್ತಿಯತವರು ಮನೆಯಾಗಿದೆ. ಈ ಮಂದಿರದಲ್ಲಿ ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದ ಚತುರ ರಾಜಕಾರಣಿಗಳಾದ ಗ್ಯಾಡ್‌ಸ್ಟನ್, ಮಾಲ್ಫ್‌ಡಿಸ್‌ರೇಲಿ ಮೊದಲಾದವರು ಶಿಲಾಮೂರ್ತಿಗಳಿವೆ. ಪೊಯಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್ ರಾಷ್ಟ್ರಕವಿ ವರ್ಡ್ಸ್‌ವರ್ತ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಮೊದಲಾದವರ ಸಮಾಧಿಗಳಿವೆ. ವೈಜ್ಞಾನಿಕರ ಮೂಲೆಯಲ್ಲಿ ನ್ಯೂಟನನ ದೊಡ್ಡದಾದ ಶಿಲಾಮೂರ್ತಿಯನ್ನು ನಿಲ್ಲಿಸಿದ್ದಾರೆ. ಡಾರ್ವಿನ್, ಹರ್ಶೆಲ್ ಮೊದಲಾದವರ ಮೂರ್ತಿಗಳಿವೆ. ಇದಕ್ಕೆ ಹತ್ತಿರದಲ್ಲಿ ವ್ಯಾಪಾರಿಗಳು, ವಾಸ್ತುಶಿಲ್ಪಿಗರು, ಸರದಾರರು, ಸೇನಾಪತಿಗಳು ಮೊದಲಾದ ಅನೇಕರಿಗೆ ಜಾಗವು ದೊರೆತಿದೆ. ರಾಜಮಂದಿರ ವಿಭಾಗದಲ್ಲಿ ಇಂಗ್ಲೆಂಡನ್ನು ಆಳಿದ ರಾಜ–ರಾಣಿಯರಾದ ಸಿಂಹದೆದೆಯ ರಿಚರ್ಡ್, 2ನೆಯ ಎಡ್ವರ್ಡ್, ರಾಣಿಎಲಿಜಬೆತ್, 1ನೆಯ ಜೇಮ್ಸ್ ಮೊದಲಾದವರ ಮೂರ್ತಿಗಳಿವೆ. ಇಲ್ಲಿಯ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿವೆ. ಮಂದಿರದ ಹಿಂದೆ ಭವ್ಯವಾಗಿ 7ನೆಯ ಹೆನ್ರಿಯ ಗೋರಿಯು ನಿಂತಿದೆ. ಹೀಗೆ ಇದೊಂದು ಪ್ರಾರ್ಥನಾ ಮಂದಿರವಾಗಿದ್ದರೂ ಬ್ರಿಟೀಷ್ ಸಾಮ್ರಾಜ್ಯದ ಇತಿಹಾಸ, ಕಲೆ, ಸಾಹಿತ್ಯ, ವಿಜ್ಞಾನದದ ಗುರುತುಗಳನ್ನು ಸ್ಮರಿಸುವ ಒಂದು ವಿಶೇಷ ಸ್ಮಾರಕವಾಗಿದೆ ಎಂದು ಹೇಳಬಹುದು.

42. ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು. ಈ ಆದೇಶದ ಪ್ರಕಾರ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಗೆ ಬಂದು ಜೋರ ಮಾಡಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಹೋದರು. ಇದನ್ನು ವಿರೋಧಿಸಿ ರಾಮ, ಬಾಲ, ಹನುಮ, ಜಡಗ ಮೊದಲಾದ ಹಲಗಲಿ ಬೇಡರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು ಒಳಗಿನಿಂದ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆದರು. ಇದರಿಂದ ಬ್ರಿಟಿಷ್ ಸೈನಿಕರು ದಂಗು ಹಿಡಿದು ದೂರ ಸರಿದು ನಿಂತರು. ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ (ಜೆ.ಬಿ.ಸೆಟೆನ್ಕರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳಿಸಿದನು. ಆಗ ಬ್ರಿಟಿಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಇದರಿಂದ ಹಲಗಲಿ ಬಂಟರು ಹೋರಾಡಿ ವೀರ ಮರಣವನ್ನಪ್ಪಿದರು. ಸಿಕ್ಕಿದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿ ಹಲಗಲಿಯ ದಂಗೆಯನ್ನು ನಿಯಂತ್ರಿಸಿದರು.

ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಕೆಲವು ಬೇಡರು ತಪ್ಪಿಸಿಕೊಂಡು ಗುಡ್ಡದ ಕಡೆ ಓಡಿದರು. ಅಗಸಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಿದ್ದ ಹೆಬಲಕ ಸಾಹೇಬನ್ನು ಜಡಗ ಗುಂಡು ಹೊಡೆದು ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ಕಾರಸಾಹೇಬ ಊರನ್ನು ಲೂಟಿ ಮಾಡಲು ಆದೇಶಿಸಿದನು. ಬ್ರಿಟಿಷ್ ಸೈನಿಕರು ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಬಾಲನು ಕಸರತ್ತಿನಿಂದ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆ ಹರಿಯಿತು. ಹೀಗೆ ಹಲಗಲಿ ಬಂಟರಾದ ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ, ಭೀಮ ಮೊದಲಾದ ಹೋರಾಡಿ ವೀರ ಮರಣವನ್ನಪ್ಪಿದರು. ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದ ಬ್ರಿಟಿಷ್ ದಂಡು ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು, ಬೆಣ್ಣಿ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು – ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು.

43. ಅ) ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗ ಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯ ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು; ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತದೆ. ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ. ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?.

ಆ) ಅಂತರ್ಜೀವಿಯು ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರ ಪಡಬಲ್ಲ. ಸಾಹಿತ್ಯಿಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲೂ ಬಲ್ಲ. ಆದರೆ ಉಳಿದ ಹೃದಯಗಳ ಆಸೆಗಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು.

44.

**ಇಂದ,** ದಿನಾಂಕ : 20/01/2024

ಅಕುಲ
10 ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಅಶೋಕ ಸರ್ಕಲ್ ಹತ್ತಿರ,
ರಾಮನಗರ.

**ಇವರಿಗೆ,**

ಮಾನ್ಯ ಗೌರವ ಸಂಪಾದಕರು,
'ಪ್ರಜಾವಾಣಿ' ದಿನಪತ್ರಿಕೆ,
ರಾಮನಗರ.

**ಮಾನ್ಯರೇ,**

**ವಿಷಯ : ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಮನವಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ : 12/01/2024 ರಂದು ನಮ್ಮ ಶಾಲೆಯ ಆಟದ ಮೈದಾನದಲ್ಲಿ ಶಾಲಾ ವಾರ್ಷಿಕೋತ್ಸವನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಭಾಗದ ಶಾಸಕರು ವಹಿಸಿದ್ದರು. ಮುಖ್ಯ ಶಿಕ್ಷಕರು, ಶಾಲೆಯ ಎಲ್ಲಾ ಶಿಕ್ಷಕ ವರ್ಗದವರು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದು ಯಶಸ್ವಿಗೊಳಿಸಿದೇವು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರವಗಳು ನಡೆದವು. ಶಾಸಕರು ತಮ್ಮ ಭಾಷಣದಲ್ಲಿ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿದರು. ಈ ಕಾರ್ಯಕ್ರಮದ ಸಂಪೂರ್ಣ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದೇವೆ. ದಯವಿಟ್ಟು ಈ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಮನವಿ.

**ವಂದನೆಗಳೊಂದಿಗೆ.....**

**ಇಂತಿ ತಮ್ಮ ವಿಶ್ವಾಸಿ**

ಅಕುಲ

ಕ್ಷೇಮ ಶ್ರೀ ನಳಿನಾ

ಹನುಮಂತನಗರ

ದಿನಾಂಕ : 20/02/2023

**ತೀರ್ಥರೂಪ ಸಮಾನರಾದ ಚಿಕ್ಕಪ್ಪನವರಿಗೆ,**

ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಮನೆಯವರ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ನಮ್ಮ ಶಾಲೆಯಲ್ಲಿ ನಡೆಯುವ ವಿಜ್ಞಾನ ವಸ್ತು ಪ್ರದರ್ಶನಕ್ಕೆ ತಪ್ಪದೇ ಬರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

**ನಮಸ್ಕಾರಗಳೊಂದಿಗೆ,**

**ನಿಮ್ಮ ಪ್ರೀತಿಯ ಮಗಳು**

ನಳಿನಾ

**ಹೊರ ವಿಳಾಸ**

ಶ್ರೀ ಚಂದ್ರಶೇಖರ್
ಮನೆ ಸಂಖ್ಯೆ 54,
1ನೇ ಮುಖ್ಯರಸ್ತೆ,
ಕುವೆಂಪುನಗರ
ಮಂಡ್ಯ – 573 205.

45. **ಪೀಠಿಕೆ** : ಜನರು ವಾಸಮಾಡುತ್ತಿರುವ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶವನ್ನು ದೇಶ ಎಂದು ಕರೆಯಬಹುದು. ಎಲ್ಲ ಜನರು ತಾವೆಲ್ಲ ಒಂದೇ ಎಂಬ ಭಾವನೆಗಳನ್ನು ಹೊಂದುವುದು ಐಕ್ಯತೆ. ಅದೇ ರೀತಿ ದೇಶದಲ್ಲಿ ವಾಸಿಸುತ್ತಿರುವ ಜನರೆಲ್ಲರು ತಮ್ಮ ಧರ್ಮ, ಜಾತಿ, ಕುಲ, ಭಾಷೆಗಳನ್ನು ಬದಿಗೊತ್ತಿ ಒಂದೇ ಕುಟುಂಬದ ಸದಸ್ಯರಂತೆ ವಾಸಮಾಡುವುದನ್ನು ರಾಷ್ಟ್ರೀಯ ಭಾವೈಕ್ಯತೆ ಎಂದು ಕರೆಯಬಹುದು. ಭಾರತದಂತಹ ವೈವಿಧ್ಯತೆಗಳಿಂದ ಕೂಡಿರುವ ರಾಷ್ಟ್ರದಲ್ಲಿ ಏಕತೆಯನ್ನು ಸಾಧಿಸುವುದು ಬಹಳ ಮುಖ್ಯವೆನಿಸುತ್ತದೆ.

**ವಿಷಯ ವಿವರಣೆ** : "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಎಂಬ ಮಾತಿನಂತೆ ಹೆತ್ತತಾಯಿ ಹೊತ್ತಭೂಮಿಯು ಸ್ವರ್ಗವಿದ್ದಂತೆ. ಇಂತಹ ಹೊತ್ತ ಭೂಮಿಯಲ್ಲಿವಾಸಿಸುವ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ರಾಷ್ಟ್ರದ ಐಕ್ಯತೆಗೆ ರಾಷ್ಟ್ರೀಯ ಭಾವನೆಯೂ ಅಗತ್ಯವಾದದು. ಭಾರತ ಸರ್ವಧರ್ಮಗಳ ನೆಲೆಬೀಡು, ಇಲ್ಲಿ ವಿವಿಧ ಜಾತಿ, ಮತ, ಪಂಥ, ಭಾಷೆ, ಸಂಸ್ಕೃತಿಯ ಜನರು ಇದ್ದಾರೆ. ಇಂತಹ ವೈವಿಧ್ಯತೆಯಿಂದ ಕೂಡಿರುವ ಜನರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು, ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ, ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಸಂಕೀರ್ಣತೆಯನ್ನು ತೊರೆದು ಆಚರಿಸುವ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿಜಯಂತಿಗಳನ್ನು ಸಾಮೂಹಿಕವಾಗಿ ಆಚರಿಸಿದಾಗ ಐಕ್ಯತೆಯನ್ನು ಸಾಧಿಸಬಹುದು. ರಾಷ್ಟ್ರಗೀತೆ, ರಾಷ್ಟ್ರಧ್ವಜಕ್ಕೆ ಗೌರವವನ್ನು ನೀಡುವುದು, ರಾಷ್ಟ್ರನಾಯಕರ ಉತ್ತಮ ಆದರ್ಶಗಳನ್ನು ಬೆಳೆಸಿಕೊಳ್ಳುವುದು, ರಾಷ್ಟ್ರಕ್ಕೆ ಧಕ್ಕೆಯುಂಟಾದಾಗ ದೇಶದ

ಎಲ್ಲ ಪ್ರಜೆಗಳು ಪರಸ್ಪರ ಸಹಾಯ ಸಹಕಾರದಿಂದ ನಡೆದುಕೊಂಡರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರಬಹುದಾಗಿದೆ. ಅಲ್ಲದೆ ರಾಷ್ಟ್ರಮಟ್ಟದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ರಾಷ್ಟ್ರೀಯ ಬಾವೈಕ್ಯತೆಯನ್ನು ತರಬಲ್ಲವು.

**ಉಪಸಂಹಾರ** : ಎಲ್ಲರೂ ಎಲ್ಲರಿಗಾಗಿ ಎಂಬ ಮಂತ್ರದಿಂದ, ಕಣ್ಣು ಬೇರೆಯಾದರೂ ನೋಟ ಒಂದೇ, ಭಾಷೆ ಬೇರೆಯಾದರೂ ಭಾವ ಒಂದೇ ಜಾತಿ. ಕುಲ. ಮತ, ಧರ್ಮ ಬೇರೆ ಬೇರೆಯಾದರೂ ಬಾಳುವ ದೇಶ ಒಂದೆಯಾಗಿದೆ ಎಂದ ಮೇಲೆ ನಾವೆಲ್ಲಾ ಒಂದೆ ತೊಟ್ಟಿಲಲ್ಲಿ ಬೆಳೆವ ಜನರು ನಾವು ಭಾರತೀಯರು ಐಕ್ಯತೆಯ ಮಂತ್ರ ಪಠಿಸುವವರಾಗಬೇಂಬುದು ನಮ್ಮ ನಿಮ್ಮೆಲ್ಲರ ಆಶಯವಾಗಬೇಕಿದೆ.

ಅಥವಾ

**ಪೀಠಿಕೆ** : "ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬರು ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ. ಅದಕ್ಕೆಂದೆ ಶಾಲಾ – ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

**ವಿಷಯ ನಿರೂಪಣೆ**: ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರವಹಿಸುತ್ತವೆ, ಮನುಷ್ಯನ ದೇಹಕ್ಕೆ ಅನ್ನ, ನೀರು, ಗಾಳಿ ಹೇಗೆ ಮುಖ್ಯವೋ ಹಾಗೆ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯು ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳ ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಹಲವಾರು ಭಾಷೆಯ ಪುಸ್ತಕಗಳು ಸಹ ಇರುತ್ತವೆ. ಗ್ರಂಥಾಲಯಗಳ ಜ್ಞಾನದ ನಿಧಿಗಳಿದ್ದಂತೆ ಅಂತಹ ಜ್ಞಾನ ನಿಧಿಗೆ ಕೈಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಗ್ರಂಥಾಲಯಗಳು ಜ್ಞಾನಾರ್ಜನೆಯ ಮೆಟ್ಟಿಲುಗಳು ಅವುಗಳಲ್ಲಿಗೆ ಹೋಗಿ ನಮ್ಮ ಜ್ಞಾನದ ಹಾದಿ ತುಳಿಯಬೇಕು. ಪುಸ್ತಕಗಳಿಲ್ಲದ ಮನೆ, ಗ್ರಂಥ ಭಂಡಾರವಿಲ್ಲದ ಶಾಲಾ ಕಾಲೇಜುಗಳು ದೇವರಿಲ್ಲದ ಗುಡಿಯಂತೆ ಆದ್ದರಿಂದ ದೇವಾಲಯಗಳಂತೆ ಇರಲಿ ಎಂದು ನಮ್ಮ ಶಾಲಾಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ಮೊದಲಿನಿಂದಲೂ ತೆರೆಯಲಾಗಿದೆ. ಓದುವ ಹವ್ಯಾಸವುಳ್ಳವರು ಗ್ರಂಥಾಲಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಲುಬಹುದು ಅದಕ್ಕೆಂದೆ ಇಟುಥಡಿಚಿಡಿಥಿ (ಈ–ಗ್ರಂಥಾಲಯ) ಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

**ಉಪಸಂಹಾರ**: ಒಟ್ಟಾರೆಯಾಗಿ ಶಾಲಾ–ಕಾಲೇಜುಗಳಲ್ಲಿನ ಮತ್ತು ಸಾರ್ವಜನಿಕ ಗ್ರಂಥಾಲಯಗಳು ನಮ್ಮ ಜ್ಞಾನವಿಕಾಸಕ್ಕೆ ಅವಶ್ಯವಾದ ಮಾಹಿತಿಯನ್ನು ಒದಗಿಸಿ ಜ್ಞಾನವಂತರಾಗಲು ಸಹಾಯವಾಗುತ್ತವೆ. ಸಜ್ಜನರ ಸಂಘಮಾಡಿದಂತೆ, ಸಭ್ಯಗ್ರಂಥಗಳ ಅಧ್ಯಯನ ಮಾಡಿ ಜ್ಞಾನಸಾಗರವನ್ನು ಈಜಿ ದಡ ಸೇರಬಹುದು. ಗ್ರಂಥಾಲಯಗಳು ಜ್ಞಾನವಿಕಾಸದ ಗುರುವಿದ್ದಂತೆ ಎಂದು ಗುರುವಿನ ಬಳಿ ತೆರಳಿ ಅಭ್ಯಾಸ ಮಾಡುವ ಹವ್ಯಾಸ ನಮ್ಮದಾಗಬೇಕು.

*********************

# ಮಾದರಿ ಉತ್ತರಗಳು – 5

1. ಎಚ್ಚರ
2. ಅನುನಾಸಿಕ ಸಂಧಿ
3. ಸಂಯೋಜಿತ ವಾಕ್ಯ
4. ಸಂಬಂಧ
5. ಅನ್ವರ್ಥನಾಮ
6. ಉದ್ಧರಣ ಚಿಹ್ನೆ

7. ಜೋಡುಪದ
8. ಬಂಜೆ
9. ಕ್ರಿಯಾಸಮಾಸ
10. ಉರ್ದು

11. ಶಿವನಸಮುದ್ರ ಜಲವಿದ್ಯುತ್ ಯೋಜನೆ ಏಷ್ಯಾ ಖಂಡದಲ್ಲೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆಯಾಗಿದೆ.
12. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್‌ಕ್ರಾಸ್'.
13. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.
14. ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.
15. ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.
16. ಹಲಗಲಿ ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.
17. ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆಯು 1919ರ ಏಪ್ರಿಲ್ 13 ರಂದು ನಡೆಯಿತು.

18. ಡಾಕ್ಟರ್‌ಗೆ ವಿಮಾನದ ಪೈಲಟ್ "ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಭೂ ಪ್ರದೇಶದೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗುತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣ ಎಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾಇಲ್ಲವಲ್ಲ" ಎಂದು ಹೇಳಿದನು.

19. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ "ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು? ವಿಮಾನ ದಾಳಿಯಿಂದ ತಪಿಸ್ಸಿಕೊಳ್ಳಲು **'ಬ್ಲಾಕ್‌ಔಟ್'** ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.
20. ರಾಮ–ಲಕ್ಷ್ಮಣರು ಬಂದುತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲದಿಂದ ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಹೂಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣುಗ್ಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣುಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟು ಉಪಚರಿಸಿದಳು.

21. ವಿಶ್ವೇಶ್ವರಯ್ಯನವರು ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಲು **1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವ ವಿಮಾಯೋಜನೆ ಜಾರಿಗೆ ತಂದರು.** ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆಗೊಳಿಸಿದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಬಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡು ಕೊಂಡರು.
22. ತರತಮ ರಹಿತ ಸಮದೃಷ್ಟಿಯಿಂದ ಕೂಡಿದ ನೀಲ ಮೇಘ ಮಂಡಲ – ಸಮ ಬಣ್ಣದಲ್ಲಿ ಹಕ್ಕಿಯು ಕಾಲದ ದೈತ್ಯತೆಯನ್ನು ಸಂಕೇತಿಸುವ ಹಾಗೆ ಮುಗಿಲಿಗೆ ರೆಕ್ಕೆಗಳನ್ನು ಮೂಡಿಸುತ್ತಾ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿದೆ ಎಂದು ಕವಿ ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

**23.** ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ವೀರತನ, ಸಾಹಸವನ್ನು ವರ್ಣಿಸುವುದರಿಂದ ಲಾವಣಿ ಎಂದರೆ ವೀರಗೀತೆ ಎಂದು ಕರೆಯುತ್ತಾರೆ. ಏಕ ಘಟನೆಯನ್ನಾಧರಿಸಿ ಕಥನವಾಗಿರುವ ಲಾವಣಿಗಳು ಹಾಡಿನ ರೂಪದಲ್ಲಿ ಕಟ್ಟಿದ ಕತೆಗಳು. ಲಾವಣಿಗಳು ಹೋರಾಟ, ಶಕ್ತಿಯ ಪ್ರದರ್ಶನ, ವೀರತೆಯ ಪ್ರದರ್ಶನ ವಾಗಿರುವುದರಿಂದ ಲಾವಣಿಗಳನ್ನು ವೀರಗೀತೆಗಳು ಎನ್ನುವರು.

24. ಗಾಂಧೀಜಿಯವರಿಗೆ ರಸ್ಕಿನ್‌ನ **'ಅನ್‌ಟು ದಿಸ್ ಲಾಸ್ಟ್'** ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. ಅವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು.

25. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರು – "ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಾಗೆ ಬಂತು. ಕೂಡಲೆ ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನೀ' ಎಂದು ಮೊದಲಾಗುವ 'ಭಾರತ ಲಕ್ಷ್ಮೀ' ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದೆ." ಎಂದು ಹೇಳಿದ್ದಾರೆ.

26. ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ಅಧಿಕಾರದ ಸೋಂಕು ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ ಎನ್ನುವಂಥ ಭಾವ ಹೊಂದಿರುತ್ತಾರೆ. ಹೀಗೆ ರಾಜರ ಪ್ರಕೃತಿ ಇರುತ್ತದೆ.

27. **ಮ**ಹಿಳಾ ಶೋಷಣೆಂಬುದು ಭ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನ್ನೂ ಆಕ್ರಮಿಸಿಕೊಂಡಿದೆ. ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ. ಸಾಮಾಜಿಕ ನ್ಯಾಯದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬ ಆಶಯ ಹೊಂದಿದೆ.

28. ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರು ಕ್ರಿ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಇವರು **'ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧು ರಶ್ಮಿ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ,** ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.

29. ಜಿ. ಎಸ್. ಶಿವರುದ್ರಪ್ಪರವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. ಇವರ ಕಾಲ ಕ್ರಿ.ಶ.1926. ಇವರು **'ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪುರಸ್ಕಾರ, ರಾಷ್ಟ್ರಕವಿ ಬಿರುದು, ಪಂಪ** ಪ್ರಶಸ್ತಿಗಳು ಲಭಿಸಿವೆ.

31. ಅಲಂಕಾರ : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ : ಭೀಮಬದುರ್ಯೋಧನರು

ಉಪಮಾನ : ಮದಗಜಗಳು

ಉಪಮಾವಾಚಕ : ಅಂತೆ

ಸಮಾನಧರ್ಮ : ಹೋರಾಡುವುದು

ಸಮನ್ವಯ : ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.

32. ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **'ಕಟ್ಟುವುದು ಕಠಿಣ; ಕೆಡಹುವುದು ಸುಲಭ'** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟ ಪಡಬೇಕು. ಆದರೆ ಹಾಳುಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು, ಅರಳನ್ನು ಬೇರ್ಪಡಿಸಿ, ಮಣ್ಣನ್ನು ಹದ ಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣ ಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು, ವ್ಯಕ್ತಿತ್ವವನ್ನು

ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

**ಅಥವಾ**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. **'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು'** ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.

ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. 'ತಾಯಿಗಿಂತ ಬಂಧುವಿಲ'ವೆಂಬ ಮಾತಿನಂತೆ ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. 'ಸುಖದಿ ತಾನಿದ್ದುದೇ ನಾಡು' ಎಂಬ ಸರ್ವಜ್ಞನ ಮಾತೂ, ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

33. **ಆಯ್ಕೆ :** ಪ್ರಸ್ತುತ ಈ ವಾಕ್ಯವನ್ನು ಎ.ಎನ್.ಮೂರ್ತಿರಾಯರು ರಚಿಸಿರುವ 'ಸಮಗ್ರ ಲಲಿತಪ್ರಬಂಧಗಳು' ಎಂಬ ಪ್ರಬಂಧ ಸಂಕಲನದಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ**: ಶಾನುಭೋಗರು ಗಟ್ಟಿ ಮನಸ್ಸುಳ್ಳವರು. ಹುಲಿಯಿಂದ ತಪ್ಪಿಸಿಕೊಳ್ಳಲು ಹೋಗಿ, ಕಲ್ಲನ್ನು ಎಡವಿ, ಬಿದ್ದು ಪ್ರಜ್ಞೆ ತಪ್ಪುತ್ತಾರೆ. ಗಾಡಿಯವರು ಬಂದು ಇವರಿಗೆ ಎಚ್ಚರಗೊಳಿಸಿದರು ಅವರ ಮನಸ್ಸೆಲ್ಲಾ ಒಂದು ವಿಸ್ಮಯ ಆವರಿಸಿತು. "ನಾನು ಬದುಕುಳಿದದ್ದು ಹೇಗೆ? ಹುಲಿ ನನ್ನನ್ನು ಏಕೆ ತಿನ್ನಲಿಲ್ಲ?" ಎಂದು ಯೋಚಿಸುತ್ತಾ ಗಾಡಿಯವನನ್ನು ಪ್ರಶ್ನಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ಸಾವಿನ ಸಂಕಟದಿಂದ ಹೊರ ಬಂದ ಜೀವಕ್ಕೆ ಸಹಜವಾಗಿ ಉಂಟಾಗುವ ವಿಸ್ಮಯ ಹಾಗೂ ಹುಲಿಯ ಧರ್ಮಶ್ರದ್ಧೆಯ ಬಗ್ಗೆ ಮೆಚ್ಚುಗೆಯು ಸ್ವಾರಸ್ಯಕರವಾಗಿ ಮೂಡಿಬಂದಿದೆ.

34. **ಆಯ್ಕೆ :** ಈ ವಾಕ್ಯವನ್ನು **'ಶಿವಕೋಟ್ಯಾಚಾರ್ಯ'** ಅವರು ರಚಿಸಿರುವ **'ವಡ್ಡಾರಾಧನೆ'** ಎಂಬ ಕೃತಿಯಿಂದ ಆಯ್ದ **'ಅಗ್ನಿಭೂತಿ ಮತ್ತು ವಾಯುಭೂತಿಯರ ಕಥೆ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ತನ್ನ ಸೋದರಮಾವನಾದ ಸೋಮಶರ್ಮನ ಬಳಿ ಸಕಲ ವಿದ್ಯೆ ಕಲಿತು ಪಂಡಿತರಾಗಿ ಅತಿಬಲ ಮಹಾರಾಜನನ್ನು ಕಂಡರು. ರಾಜನ ಮುಂದೆ ತಮ್ಮ ವಿದ್ವತ್ತನ್ನು ಪ್ರದರ್ಶಿಸಿದರು. ಆ ಸಂದರ್ಭದಲ್ಲಿ ಸಭೆಯಲ್ಲಿದ್ದ ಪಂಡಿತರೆಲ್ಲ ಇವರನ್ನು ಮೆಚ್ಚಿಕೊಂಡ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ : "ಇವರು ಕಡುಮೂರ್ಖರು. ಇವರು ಏನನ್ನೂ ಓದಿಲ್ಲ. ಇವರು ಸಪ್ತವ್ಯಸನದಲ್ಲಿ ಮುಳುಗಿರುವರು"** ಎಂದು ಅಗ್ನಿಭೂತಿ ಮತ್ತು ವಾಯುಭೂತಿಯನ್ನು ಅಪಮಾನ ಮಾಡಿದ ಸಭೆಯಲ್ಲಿಯೇ, ಅಪಮಾನ ಮಾಡಿದವರ ಕೈಯಲ್ಲಿಯೇ ಹೊಗಳಿಸಿಕೊಂಡಿರುವುದು ಸ್ವಾರಸ್ಯಕರವಾಗಿದೆ.

35. **ಆಯ್ಕೆ:** ಈ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ **'ಎದೆಗೆ ಬಿದ್ದ ಅಕ್ಷರ'** ಎಂಬ ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದು ಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಆದ ಇಷ್ಟದೈವ ಇದ್ದಿತು. ಅದೇ ಪ್ರಜ್ಞೆ, ಅಂದರೆ "ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು." ಅವರು ತಮ್ಮ ಕಷ್ಟ ಸುಖ, ದುಃಖ ದುಮ್ಮಾನ, ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿ ಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ ಎಂದು ಪ್ರಜ್ಞೆಯ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ವಚನಕಾರರಿಗೆ ಇಷ್ಟದೈವದ ರೀತಿಯಲ್ಲಿ ಇದ್ದ ಪ್ರಜ್ಞೆಯಂತೆ ಪ್ರತಿಯೊಬ್ಬರಲ್ಲಿ ಪ್ರಜ್ಞೆ ಜಾಗೃತವಾಗಿರಬೇಕು ಎಂಬುದನ್ನು ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾರೆ.

36. ಆಯ್ಕೆ : ಈ ವಾಕ್ಯವನ್ನು 'ಕುಮಾರವ್ಯಾಸ' ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಈ ವಾಕ್ಯವನ್ನು ಕೃಷ್ಣನು ಕರ್ಣನಿಗೆ ಹೇಳಿದನು. ಕರ್ಣನು ತನ್ನ ಜನ್ಮರಹಸ್ಯವನ್ನು ತಿಳಿದು ಮನಸ್ಸು ದ್ವಂದ್ವದಲ್ಲಿ ಸಿಲುಕಿ ಚಿಂತಾಕ್ರಾಂತನಾಗಿ ಮೌನವಾದಾಗ ಕೃಷ್ಣನು "ಏನು ಹೇಳು ಕರ್ಣ ಮನದಲ್ಲಿರುವ ತಲ್ಲಣ ಯಾವುದು? ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ? ಎನ್ನಾಣೆಗೂ ನಿನಗೆ ಯಾವುದೇ ನಷ್ಟವಿಲ್ಲ. ಮಾತನಾಡು ಮೌನವೇತಕೆ, ಭ್ರಮೆಗೊಳಗಾಗುವುದು ಬೇಡ. ನಾನು ನಿನಗೆ ಕೇಡನ್ನು ಬಯಸುವುದಿಲ್ಲ" ಎಂದು ಕೇಳಿದ ಸಂದರ್ಭವಾಗಿದೆ.

ಸ್ವಾರಸ್ಯ: "ಕರ್ಣ ನಾನು ನಿನಗೆ ಕೇಡಾಗಲೆಂದು ಬಯಸುವುದಿಲ್ಲ ನಿನಗೆ ಒಳ್ಳೆಯದನ್ನೇ ಬಯಸುವೆ" ಎಂದು ಕೃಷ್ಣ ಹೇಳುವ ಹಿತಚಿಂತನೆಯ ಮಾತು ಸ್ವಾರಸ್ಯಪೂರ್ಣವಾಗಿದೆ.

37. ಆಯ್ಕೆ : ಈ ವಾಕ್ಯವನ್ನು ಮಹಾಕವಿ 'ರನ್ನ' ವಿರಚಿತ "ಸಾಹಸ ಭೀಮ ವಿಜಯ" ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಭೀಷ್ಮರ ಸಂಧಿಯ ಸಲಹೆಯನ್ನು ಒಪ್ಪದ ದುರ್ಯೋಧನ ಅಜ್ಜ ನಾನು ಪಾಂಡವರೊಡನೆ ಹೋರಾಡದೆ ಇರಲಾರೆನು. ಇಂದಿನ ಒಂದು ಯುದ್ಧದಲ್ಲಿ ಪಾಂಡವರು ಉಳಿಯಬೇಕು ಅಥವಾ ನಾನು ಉಳಿಯಬೇಕು. ಅದರಿಂದ ಈ ಭೂಮಿಯ ತಳ(ಒಡೆತನ) ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು ಎಂದು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ: ಈ ವಾಕ್ಯವು ದುರ್ಯೋಧನ ಮಾಡು ಇಲ್ಲವೆ ಮಡಿ ಎಂಬ ಛಲದ ಗುಣ–ಯುದ್ಧೋತ್ಸಹದ ಶಕ್ತಿಯನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸಿದೆ.

38. **ಆಯ್ಕೆ :** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ:** "ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

| | |
|---|---|
| **39. ಹಸುರಾಗಸ; ಹಸುರು ಮುಗಿಲು;** | **ಹೊಸ ಹೂವಿನ ಕಂಪು ಹಸುರು** |
| **ಹಸುರುಗದ್ದೆಯಾ ಬಯಲು;** | **ಎಲರಿನ ತಂಪೂ ಹಸುರು!** |
| **ಹಸುರಿನ ಮಲೆ; ಹಸುರುಕಣಿವೆ;** | **ಹಕ್ಕಿಯಕೊರಲಿಂಪು ಹಸುರು!** |
| **ಹಸುರು ಸಂಜೆಯೀ ಬಿಸಿಲೂ!** | **ಹಸುರು ಹಸುರಿಳೆಯುಸಿರೂ!** |

**40.** ಸೀತೆಯ ಅಗಲುವಿಕೆಯಿಂದ ರಾಮ ಮಾನಸಿಕವಾಗಿ ದುಃಖಕ್ಕೀಡಾಗುತ್ತಾನೆ. ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ರಾಮ ಅಶ್ವಮೇಧವನ್ನು ಕೈಗೊಂಡು ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆ ಒಂದು ದಿನ ವಾಲ್ಮೀಕಿ ಆಶ್ರಮಕ್ಕೆ ಬರುತ್ತದೆ ಆ ಕುದುರೆಯ ಹಣೆಯ ಮೇಲೆ ಒಂದು ಬರಹವಿರುತ್ತದೆ. ಅದು **"ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ"** ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು(ಆಕ್ರೋಶಗೊಂಡನು).

41. ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ ಬುದ್ಧಿಶಾಲಿಗಳೂ ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಕಾರಣ ಆಂಗ್ಲ ಜನರು ಸಾಹಸಜೀವಿಗಳು, ಬುದ್ದಿಶಾಲಿಗಳಾಗಿದ್ದರು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಮುಕ್ತ ಮನಸ್ಸಿನಿಂದ ಅಭ್ಯಸಿಸಬೇಕು. ಈ ಮೂಲಕ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಬೇಕು, ಅರಳಿಸಿಬೇಕು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವನ್ನು ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿರಬೇಕು. ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸುವುದರ ಪರಿಣಾಮವಾಗಿ ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು.

**ಅಥವಾ**

ಉ : ಕನ್ನಡ ಭಾಷೆಗೆ ಪ್ರಾಚೀನ ಕಾಲದಿಂದಲೂ ಸಂಸ್ಕೃತ ಭಾಷೆಯ ಪೋಷಣೆ ದೊರೆಯುತ್ತಾ ಬಂದಿದೆ. ಕನ್ನಡದ ಪಂಡಿತರು ವೈದಿಕ ಹಾಗೂ ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ವಿವರಿಸಲು ಅಭಿಲಾಷೆಯಿಂದ ಕಾವ್ಯಗಳನ್ನು ರಚಿಸಿದರು. ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು ಸುಲಿದ ಬಾಳೆಯ

ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದೂ ಆಯಿತು. ಸ್ವಾಭಾವಿಕವಾಗಿ ಗಡಿ ಜನರ ವ್ಯವಹಾರ ಸಂಪರ್ಕಗಳಿಂದ ನೆರೆಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಇದರಿಂದ ಕನ್ನಡವೂ ಅದರ ನೆರನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ. ಭಾಷೆಯಲ್ಲಿರುವ ಸಾಮಗ್ರಿಯನ್ನೇ ಬಳಸಿಕೊಂಡು ನುಡಿಗಟ್ಟುಗಳಾಗಿ ಮಡಿಕೊಂಡು ಕನ್ನಡ ಭಾಷೆಯು ಸಮೃದ್ಧವಾಗಿ ರೂಪಗೊಂಡಿತು.

42. ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನನ್ನೂ ಜೊತೆಯಲ್ಲಿ ಕರೆದುಕೊಂಡು ದೇಶದೇಶಗಳನ್ನೆಲ್ಲ ಅಲೆದಾಡಿ ಪರಶುರಾಮನ ಬಳಿಗೆ ಬಂದನು, ಆಗ ನಾರುಮಡಿಯಿಂದ ಸುತ್ತುವರಿದ ನಡುವುಳ್ಳವನಾಗಿದ್ದ, ಜಟಾ ಸಮೂಹದಿಂದ ಕೂಡಿದವನೂ ಆಗಿದ್ದ, ತಪೋವನಕ್ಕೆ ಹೊರಟಾಗ ಪರಶುರಾಮನು, ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಕಂಡು ಚಿನ್ನದ ಪಾತ್ರೆ ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

ಪರಶುರಾಮನು "ಸಂಪತ್ತನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ (ಕಶ್ಯಪಮುನಿ) ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ?" ಎಂದು ಮನದಲ್ಲಿ ಯೋಚಿಸುತ್ತಾ **"ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು"** ಎಂದು ಹೇಳಿದನು.

ಎಂಬುದಾಗಿ ಹೇಳಲು ದ್ರೋಣನು ನನಗೆ ವಿದ್ಯಾಧನವೇ ಧನವು ಆದುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸುವುದು ಎನ್ನಲು, ವಾರುಣ, ವಾಯವ್ಯ, ಆಗ್ನೇಯ, ಇಂದ್ರಾಸ್ತ್ರವೇ ಮೊದಲಾದ ಪ್ರಧಾನವಾದ ಅಸ್ತ್ರಗಳನ್ನು ಕೊಡಲು, ಅದನ್ನು ತೆಗೆದುಕೊಂಡು, ಪರಶುರಾಮನಿಂದ ಬೀಳ್ಕೊಂಡನು.

**ಅಥವಾ**

ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು **"ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು"** ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು.ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ?"ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು **"ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು"** ಎಂದು ಹೇಳಿದನು. ಮುಂದುವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠ ವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದಿವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?)" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

43. ಅ) ಸಿ.ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು ತಮ್ಮ ನಡವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂಬ ಮನೋಭಾವನೆಯಾಗಿತ್ತು.

ಅ) ಬೆಳ್ಳಗ್ಗೆ ಪ್ರಯೋಗಾಲಯಕ್ಕೆ ಬಂದ ಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

44. ದಿ:

**ಇವರಿಂದ**
ಅದ್ವಿತ್
ಸರ್ಕಾರಿ ಪ್ರೌಢಶಾಲೆ,
ದೇವನಹಳ್ಳಿ,
ಬೆಂಗಳೂರು ಗ್ರಾಮಾಂತರ

**ಇವರಿಗೆ,**
ಮಾನ್ಯ ಅಧ್ಯಕ್ಷರು
ಗ್ರಾಮ ಪಂಚಾಯಿತಿ
ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ.

**ಮಾನ್ಯರೇ,**

**ವಿಷಯ : ಬೀದಿದೀಪ ಸರಿಪಡಿಸುವಂತೆ ಕೋರಿ ಬರೆದ ಮನವಿ ಪತ್ರ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದೇವನಹಳ್ಳಿಯ ನಿವಾಸಿಯಾದ ಅದ್ವಿತ್ ಆದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೆನೆಂದರೆ ನಮ್ಮ ಹಳ್ಳಿಯ ಬೀದಿದೀಪಗಳು ತುಂಬಾ ದಿನಗಳಿಂದ ಹಾಳಾಗಿವೆ ರಾತ್ರಿ ವೇಳೆಯಲ್ಲಿ ಓಡಾಡುವುದಕ್ಕೆ ಕಷ್ಟವಾಗಿತ್ತಿದೆ. ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಸಹ ಕಷ್ಟವಾಗುತ್ತಿದೆ. ಆದರಿಂದ ತಾವು ದಯವಿಟ್ಟು ನಮ್ಮ ಬೀದಿದೀಪಗಳನ್ನು ದುರಸ್ಥಿ ಪಡಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದನೆ.

**ವಂದನೆಗಳೊಂದಿಗೆ**

**ಇಂತಿ ತಮ್ಮ ವಿಶ್ವಾಸಿ**
ಅದ್ವಿತ್

ಕ್ಷೇಮ ಶ್ರೀ

**ಇವರಿಂದ**
ಅಶ್ವತ್
ಸರ್ಕಾರಿ ಪ್ರೌಢಶಾಲೆ,
ಮೈಸೂರು.
ದಿನಾಂಕ : 12/12/23

**ಪೂಜ್ಯ ಮಾತೃಶ್ರೀಯವರಿಗೆ,**

ನಿಮ್ಮ ಮಗ ಅಶ್ವತ್ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಂದೆವರಿಗೆ ಪ್ರಣಾಮಗಳು. ದಿನಾಂಕ : 10/12/23 ರಂದು ನಮ್ಮ ಶಾಲೆಯಲ್ಲಿ ಸದ್ಭಾವನಾ ದಿನಾಚರಣೆಯನ್ನು ಆಚರಿಸಿದೆವು. ನಾವೆಲ್ಲರೂ ಒಂದೇ ಎಂಬ ಭಾವನೆಯು ಬೆಳೆಯಿತು. ಮನೆಯವರನ್ನೆಲ್ಲಾ ಕೇಳಿದೆ ಎಂದು ಹೇಳು.

**ಪ್ರಣಾಮಗಳೊಂದಿಗೆ**

**ಇಂತಿ ನಿಮ್ಮ ಪ್ರೀತಿಯ ಮಗ**
ಅಶ್ವತ್

**ಹೊರ ವಿಳಾಸ**
ಕಸ್ತೂರಿ
ಮನೆ ನಂ – 105
ವಿವೇಕನಂದನಗರ 5ನೇ ಮುಖ್ಯರಸ್ತೆ
ಬೆಂಗಳೂರು.

45. **ಪೀಠಿಕೆ** : ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ, ಗುಡ್ಡ, ಕಲ್ಲು, ಮಣ್ಣು, ಮರ–ಗಿಡ, ನೀರು ವಾಯು, ಪ್ರಾಣಿ–ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು. ಇವುಗಳನ್ನು ಯಥಾರೀತಿಯಾಗಿ ಉಳಿಸಿ ಬೆಳೆಸಿಕೊಂಡು ಹೋಗುವುದೇ ಪರಿಸರ ಸಂರಕ್ಷಣೆಯಾಗಿದೆ. ಇಂತಹ ಪರಿಸರ ಸೃಷ್ಠಿ ನಮಗೆ ವರವಾಗಿದೆ ಎಂದು ಹೇಳಬಹುದು. ಪರಿಸರವನ್ನು ನಾವು ಸಂರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸಬಲ್ಲದು. ಇಲ್ಲವಾದರೆ ಪರಿಸರ ನಾಶಮಾಡಿದರೆ ನಾವು ನಾಶವಾಗುವುದರಲ್ಲಿ ಎರಡು ಮಾತಿಲ್ಲ.

**ವಿಷಯ ವಿವರಣೆ** : "ಪರಿಸರ ಉಳಿದರೆ ನಾಡು ಉಳಿದೀತು ; ಪರಿಸರ ಅಳಿದರೆ ನಾಡು ಕಳೆದೀತು" ಎಂಬ ನಾಣ್ಣುಡಿಯಂತೆ ನಾಡನ್ನು ರಕ್ಷಿಸಿಕೊಳ್ಳಬೇಕಾದರೆ ಪರಿಸರ ಸಂರಕ್ಷಣೆ ಮಾಡಬೇಕಾದದ್ದು ನಮ್ಮ ಜವಬ್ದಾರಿಯಾಗಿದೆ. ಯಾಕೆಂದರೆ ನಾವು ಪರಿಸರದಿಂದ ಸಾಕಷ್ಟು ಅನುಕೂಲತೆಗಳನ್ನು ಪಡೆಯುತ್ತಿದ್ದೇವೆ. 'ಹಸಿರೇ ನಾಡಿನ ಉಸಿರು' ಆದ್ದರಿಂದ ಹಸಿರು ಇಲ್ಲದಿದ್ದರೇ ಉಸಿರು ಉಳಿದೀತು ಹೇಗೆ? ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ವಿಶ್ವದ ತುಂಬೆಲ್ಲ ಹರಡಿಕೊಂಡು ಬಿಟ್ಟಿದೆ. ಪರಿಸರ ಮಾಲಿನ್ಯದಿಂದ ನಮ್ಮ ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಚವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಾದ ನಾವು ಮೊದಲು ನಮ್ಮ ಶಾಲಾ–ಕಾಲೇಜುಗಳಲ್ಲಿ ನಮ್ಮ ಮನೆಯ ಸುತ್ತ–ಮುತ್ತ ಹೆಚ್ಚು ಹೆಚ್ಚು ಗಿಡಮರಗಳನ್ನು ನೆಟ್ಟು ಪರಿಸರ ಸಂರಕ್ಷಿಸಬೇಕು. ಇತರರಿಗೂ ಪ್ರೇರಿಪಿಸಬೇಕು. ವನಮಹೋತ್ಸವ, ಸಸಿನೆಡುವ ಕಾರ್ಯಕ್ರಮಗಳನ್ನು ಪ್ರತಿನಿತ್ಯ ಮಾಡುತ್ತ ಪ್ರತಿದಿನ ಪರಿಸರ ದಿನ ಆಚರಿಸಬೇಕು. ಸಾಲುಮರದ ತಿಮ್ಮಕ್ಕನಂತವರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಪರಿಸರ ಸಂರಕ್ಷಣೆಯ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಜಾಗೃತಿಯನ್ನು ಮೂಡಿಸಬೇಕು. ಪರಿಸರ ನಾಶದಿಂದಾಗು ಅನಾಹುತಗಳನ್ನು ತಿಳಿಸಬೇಕು.

**ಉಪಸಂಹಾರ** : **"ಕಾಡಿದ್ದರೆ ನಾಡು –ನಾಡಿದ್ದರೆ ನಾವು ಕಾಡಿಲ್ಲದಿದ್ದರೆ ಸುಡಗಾಡು"** ಎನ್ನುವಂತೆ ಕಾಡನ್ನು ನಾಡನ್ನು ಉಳಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಬೇಕು. ದೈವದತ್ತವಾದ ಪರಿಸರವನ್ನು ನಾಶಮಾಡದೆ, ಉಳಿಸಿ, ಬೆಳಸಿ ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ನೀಡಬೇಕೆಂಬುದು ಎಲ್ಲರ ಆಸಯವಾಗಬೇಕು.

**ಅಥವಾ**

ಪ್ರಸ್ತುತ ದಿನಗಳಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಿರಂತರವಾಗಿ ದೌರ್ಜನ್ಯಗಳು ಹೆಚ್ಚುತ್ತಿವೆ. ಅತ್ಯಾಚಾರ, ವರದಕ್ಷಿಣೆ ಸಾವು, ಮಹಿಳೆಯರನ್ನು ಅನೈತಿಕ ಚಟುವಟಿಕೆಗಳಲ್ಲಿ ದೂಡುವುದು, ಬಾಲಕಾರ್ಮಿಕ ಪದ್ಧತಿ ಹಾಗು ಮಕ್ಕಳನ್ನು ಅನೈತಿಕ ಚಟುವಟಿಕೆಗಳಿಗೆ ತಳ್ಳುತ್ತಿರುವುದು ಇವೇ ಮೊದಲಾದ ದೌರ್ಜನ್ಯಗಳು ಮಹಿಳೆ ಹಾಗು ಮಕ್ಕಳ ಮೇಲೆ ನಡೆಯುತ್ತಿವೆ.

**ಕಾರಣಗಳು:**

* ಪುರುಷ ಪ್ರಧಾನ ಕುಟುಂಬ
* ಅನಕ್ಷರತೆ ಹಾಗೂ ಮೂಢನಂಬಿಕೆ
* ಅಪರಾಧಗಳ ವೈಭವೀಕರಣ
* ಕಾನೂನುಗಳ ಪರಿಣಾಮಕಾರಿ ಅನುಷ್ಠಾನದ ಕೊರತೆ, ಇತ್ಯಾದಿ

**ಪರಿಹಾರಗಳು:**

* ಕಟ್ಟುನಿಟ್ಟಾಗಿ ಕಾನೂನುಗಳನ್ನು ಜಾರಿಗೊಳಿಸುವುದು.
* ಶಿಕ್ಷಣಕ್ಕೆ ಆದ್ಯತೆ ನೀಡುವುದು.
* ಮಹಿಳೆಯರನ್ನು ಗೌರವಿಸುವುದು.
* ಆದರ್ಶ ವ್ಯಕ್ತಿತ್ವರೂಪಿಸುವುದು, ಇತ್ಯಾದಿ

ಇವೇ ಮೊದಲಾದ ಕ್ರಮಗಳನ್ನು ಅನುಷ್ಟಾನಗೊಳಿಸುವುದರಿಂದ ಮಹಿಳೆ ಹಾಗೂ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಬಹುದಾಗಿದೆ.

********************